# ಸರಕುಗಳ ಭೌಗೋಳಿಕ ಸಂಕೇತ (ನೋಂದಣಿ ಮತ್ತು ರಕ್ಷಣೆ) ಅಧಿನಿಯಮ, 1999

27.01.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 36ನೇ ಸಂಪುಟದ 1ನೇ ಸಂಚಿಕೆಯಲ್ಲಿ 51 ರಿಂದ 86 ರವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು ಮತ್ತು ಅರ್ಥ ವಿವರಣೆ

### ಅಧ್ಯಾಯ – II
### ರಿಜಿಸ್ಟರು ಮತ್ತು ನೋಂದಣಿಯ ಷರತ್ತುಗಳು

3. ಭೌಗೋಳಿಕ ಸಂಕೇತಗಳ ರಿಜಿಸ್ಟ್ರಾರ್
4. ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದು ಅಥವಾ ವರ್ಗಾವಣೆ ಮಾಡುವುದು ಇತ್ಯಾದಿಗಳ ಬಗ್ಗೆ ರಿಜಿಸ್ಟ್ರಾರರ ಅಧಿಕಾರ
5. ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿ ಮತ್ತು ಅದರ ಕಚೇರಿಗಳು
6. ಭೌಗೋಳಿಕ ಸಂಕೇತಗಳ ರಿಜಿಸ್ಟರು
7. ರಿಜಿಸ್ಟರಿನ ಭಾಗ ಎ ಮತ್ತು ಭಾಗ ಬಿ
8. ನೋಂದಣಿಯು ನಿರ್ದಿಷ್ಟ ಸರಕುಗಳಿಗೆ ಮತ್ತು ಕ್ಷೇತ್ರಕ್ಕೆ ಸಂಬಂಧಿಸಿರುವುದು
9. ಕೆಲವು ಭೌಗೋಳಿಕ ಸಂಕೇತಗಳ ನೋಂದಣಿಯ ನಿಷೇಧ
10. ಸಮನಾಮದ ಭೌಗೋಳಿಕ ಸಂಕೇತಗಳ ನೋಂದಣಿ

### ಅಧ್ಯಾಯ – III
### ನೋಂದಣಿಯ ಕಾರ್ಯವಿಧಾನ ಮತ್ತು ಅದರ ಅವಧಿ

11. ನೋಂದಣಿ ಅರ್ಜಿ
12. ಅಂಗೀಕಾರವನ್ನು ಹಿಂತೆಗೆದುಕೊಳ್ಳುವುದು
13. ಅರ್ಜಿಯ ಜಾಹೀರಾತು
14. ನೋಂದಣಿಗೆ ವಿರೋಧ
15. ಸರಿಪಡಿಸುವಿಕೆ ಮತ್ತು ತಿದ್ದುಪಡಿ
16. ನೋಂದಣಿ
17. ಅಧಿಕೃತ ಬಳಕೆದಾರರಾಗಿ ನೋಂದಾಯಿಸಲು ಅರ್ಜಿ
18. ನೋಂದಣಿಯ ಅವಧಿ, ನವೀಕರಣ, ತೆಗೆದು ಹಾಕುವುದು ಮತ್ತು ಪೂರ್ವಸ್ಥಿತಿಗೆ ತರುವುದು
19. ನವೀಕರಣದ ಫೀಜನ್ನು ಸಂದಾಯ ಮಾಡಲು ತಪ್ಪಿದುದಕ್ಕೆ ರಿಜಿಸ್ಟರಿನಿಂದ ತೆಗೆದುದರ ಪರಿಣಾಮ

### ಅಧ್ಯಾಯ – IV
### ನೋಂದಣಿಯ ಪರಿಣಾಮ

20. ನೋಂದಣಿಯಾಗದ ಭೌಗೋಳಿಕ ಸಂಕೇತದ ಅತಿಲಂಘನೆಗಾಗಿ ಯಾವುದೇ ಕ್ರಮವಿಲ್ಲದಿರುವಿಕೆ
21. ನೋಂದಣಿಯಿಂದ ಪ್ರದತ್ತವಾದ ಹಕ್ಕುಗಳು

22. ನೋಂದಾಯಿತ ಭೌಗೋಳಿಕ ಸಂಕೇತಗಳ ಅತಿಲಂಘನೆ

23. ನೋಂದಣಿಯು ಸಿಂಧುತ್ವದ ಮೊದಲ ನೋಟದ ಸಾಕ್ಷ್ಯವಾಗಿರುವುದು

24. ಹಸ್ತಾಂತರಣ ಅಥವಾ ಪ್ರಸರಣ ಮುಂತಾದವುಗಳಿಗೆ ನಿಷೇಧ, ಇತ್ಯಾದಿ

## ಅಧ್ಯಾಯ - V

### ವ್ಯಾಪಾರ ಚಿಹ್ನೆಗಳಿಗೆ ಮತ್ತು ಹಿಂದಿನ ಬಳಕೆದಾರರಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು

25. ಭೌಗೋಳಿಕ ಸಂಕೇತವನ್ನು ವ್ಯಾಪಾರ ಚಿಹ್ನೆಗಳಾಗಿ ನೋಂದಾಯಿಸಲು ನಿಷೇಧ

26. ಕೆಲವು ವ್ಯಾಪಾರ ಚಿಹ್ನೆಗಳಿಗೆ ರಕ್ಷಣೆ

## ಅಧ್ಯಾಯ – VI

### ರಿಜಿಷ್ಟರನ್ನು ಸರಿಪಡಿಸುವುದು ಮತ್ತು ತಿದ್ದುಪಾಟು ಮಾಡುವುದು

27. ನೋಂದಣಿಯನ್ನು ರದ್ದುಪಡಿಸುವ ಅಥವಾ ವ್ಯತ್ಯಯಮಾಡುವ ಮತ್ತು ರಿಜಿಸ್ಟರನ್ನು ಸರಿಪಡಿಸುವ ಅಧಿಕಾರ

28. ರಿಜಿಸ್ಟರನ್ನು ಸರಿಪಡಿಸುವಿಕೆ

29. ನೋಂದಾಯಿತ ಭೌಗೋಳಿಕ ಸಂಕೇತಗಳನ್ನು ವ್ಯತ್ಯಾಸ ಮಾಡುವುದು

30. ಸರಕುಗಳ ವರ್ಗಿಕರಣವನ್ನು ತಿದ್ದುಪಡಿ ಮಾಡಲು ಅಥವಾ ಪ್ರತಿಯೋಜಿಸಲು ರಿಜಿಸ್ಟರಿನಲ್ಲಿ ನಮೂದುಗಳ ಅಳವಡಿಕೆ

## ಅಧ್ಯಾಯ – VII

### ಅಪೀಲು ಮಂಡಲಿಗೆ ಅಪೀಲುಗಳನ್ನು ಸಲ್ಲಿಸುವುದು

31. ಅಪೀಲು ಮಂಡಲಿಗೆ ಅಪೀಲುಗಳನ್ನು ಸಲ್ಲಿಸುವುದು

32. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ, ಇತ್ಯಾದಿ

33. ಅಪೀಲು ಮಂಡಲಿಯ ಕಾರ್ಯವಿಧಾನ

34. ಅಪೀಲು ಮಂಡಲಿಯ ಮುಂದಿರುವ ಅರ್ಜಿಗಳನ್ನು ಸರಿಪಡಿಸುವುದಕ್ಕಾಗಿ ಅರ್ಜಿ ಸಲ್ಲಿಸುವ ಕಾರ್ಯವಿಧಾನ, ಇತ್ಯಾದಿ

35. ಕಾನೂನು ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ಹಾಜರಾತಿ

36. ಅಪೀಲು ಮಂಡಲಿಯ ಮುಂದಿರುವ ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ವೆಚ್ಚಗಳು

## ಅಧ್ಯಾಯ – VIII

### ಅಪರಾಧಗಳು, ದಂಡಗಳು ಮತ್ತು ಕಾರ್ಯವಿಧಾನ

37. ಭೌಗೋಳಿಕ ಸಂಕೇತಗಳನ್ನು ಅನ್ವಯಿಸುವ ಅರ್ಥ

38. ಭೌಗೋಳಿಕ ಸಂಕೇತಗಳನ್ನು ಸುಳ್ಳಾಗಿ ನಿರೂಪಿಸುವುದು ಮತ್ತು ತಪ್ಪಾಗಿ ಅನ್ವಯಿಸುವುದು

39. ಸುಳ್ಳು ಭೌಗೋಳಿಕ ಸಂಕೇತಗಳನ್ನು ಅನ್ವಯಿಸಿದ್ದಕ್ಕಾಗಿ ದಂಡನೆ

40. ಸುಳ್ಳು ಭೌಗೋಳಿಕ ಸಂಕೇತವನ್ನು ಅನ್ವಯಿಸಿ ಸರಕುಗಳನ್ನು ಮಾರಿದ್ದಕ್ಕಾಗಿ ದಂಡನೆ

41. ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವಾದ ಮೇಲೆ ಹೆಚ್ಚಿಸಿದ ದಂಡನೆ

42. ಭೌಗೋಳಿಕ ಸಂಕೇತವು ನೋಂದಣಿಯಾಗಿದೆಯೆಂದು ಸುಳ್ಳಾಗಿ ನಿರೂಪಿಸಿದ್ದಕ್ಕಾಗಿ ದಂಡನೆ

43. ಒಂದು ವ್ಯವಹಾರದ ಸ್ಥಳವನ್ನು ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಗೆ ಸಂಬಂಧಪಟ್ಟಿರುವುದೆಂದು ಅನುಚಿತವಾಗಿ ವರ್ಣಿಸಿದ್ದಕ್ಕಾಗಿ ದಂಡನೆ

44. ರಿಜಿಸ್ಟರಿನಲ್ಲಿ ನಮೂದುಗಳನ್ನು ಸುಳ್ಳಾಗಿಸಿದ್ದಕ್ಕಾಗಿ ದಂಡನೆ

45. ಕೆಲವು ಪ್ರಕರಣಗಳಲ್ಲಿ ಅಪರಾಧವಾಗದಿರುವುದು
46. ಸರಕುಗಳ ಮುಟ್ಟುಗೋಲು
47. ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ನಿಯೋಜನೆಗೊಂಡ ಕೆಲವು ವ್ಯಕ್ತಿಗಳಿಗೆ ವಿನಾಯಿತಿ
48. ಆಪಾದಿತನು ನೋಂದಣಿಯು ಅಸಿಂಧುವಾಗಿದೆಯೆಂದು ವಾದಿಸಿದಾಗ ಕಾರ್ಯವಿಧಾನ
49. ಕಂಪನಿಗಳಿಂದ ಅಪರಾಧಗಳು
50. ಕೆಲವು ಅಪರಾಧಗಳ ಸಂಜ್ಞಾನ ಮತ್ತು ಶೋಧನೆ ಹಾಗೂ ಅಭಿಗ್ರಹಣಕ್ಕಾಗಿ ಪೊಲೀಸ್ ಅಧಿಕಾರಿಯ ಅಧಿಕಾರಗಳು
51. ಪ್ರಾಸಿಕ್ಯೂಷನ್ನಿನ ಪ್ರತಿವಾದದ ವೆಚ್ಚಗಳು
52. ಪ್ರಾಸಿಕ್ಯೂಷನ್‌ಗೆ ಕಾಲಪರಿಮಿತಿ
53. ಅಪರಾಧ ನಡೆದ ಬಗ್ಗೆ ಮಾಹಿತಿ
54. ಭಾರತದ ಹೊರಗಡೆ ಮಾಡಿದ ಕೃತ್ಯಗಳಿಗೆ ಭಾರತದಲ್ಲಿ ದುಷ್ಪ್ರೇರಿಸಿದ್ದಕ್ಕಾಗಿ ದಂಡನೆ

## ಅಧ್ಯಾಯ – IX

### ಸಂಕೀರ್ಣ

55. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
56. ಕೆಲವು ವ್ಯಕ್ತಿಗಳು ಲೋಕನೌಕರರಾಗಿರುವುದು
57. ಭೌಗೋಳಿಕ ಸಂಕೇತದ ನೋಂದಣಿಯ ಸಿಂಧುತ್ವವನ್ನು ಪ್ರಶ್ನಿಸುವುದೇ ಮುಂತಾದ ವ್ಯವಹರಣೆಗಳ ತಡೆ
58. ಕೆಲವು ಸಂದರ್ಭಗಳಲ್ಲಿ ರಿಜಿಸ್ಟರನ್ನು ಸರಿಪಡಿಸಲು ಅಪೀಲು ಮಂಡಲಿಗೆ ಅರ್ಜಿ ಸಲ್ಲಿಸುವುದು
59. ಸಂಕೇತಿಸಲಾದ ಸರಕುಗಳ ಮಾರಾಟದ ಮೇಲೆ ಇಂಗಿತ ಭರವಸೆ
60. ರಿಜಿಸ್ಟ್ರಾರನ ಅಧಿಕಾರಗಳು
61. ರಿಜಿಸ್ಟ್ರಾರನು ವಿವೇಚನಾಧಿಕಾರವನ್ನು ಚಲಾಯಿಸುವುದು
62. ರಿಜಿಸ್ಟ್ರಾರನ ಮುಂದಿರುವ ಸಾಕ್ಷ್ಯ
63. ವ್ಯವಹರಣೆಗಳಲ್ಲಿ ಪಕ್ಷಕಾರನಾಗಿದ್ದವನ ಮರಣ
64. ಸಮಯ ವಿಸ್ತರಣೆ
65. ಬಿಟ್ಟುಕೊಡುವುದು
66. ಜಿಲ್ಲಾ ನ್ಯಾಯಾಲಯದ ಮುಂದೆ ಅತಿಲಂಘನಕ್ಕಾಗಿ ಹೂಡಬಹುದಾದ ದಾವೆ, ಇತ್ಯಾದಿ
67. ಅತಿಲಂಘನೆಯಿಂದ ಅಥವಾ ಸರಕುಗಳನ್ನು ಮೋಸದಿಂದ ದಾಟಿಸಿದ್ದಕ್ಕಾಗಿ ದಾವೆಯಲ್ಲಿ ಪರಿಹಾರ
68. ಕೆಲವು ವ್ಯವಹರಣೆಗಳಲ್ಲಿ ಅಧಿಕೃತ ಬಳಕೆದಾರನನ್ನು ಪಕ್ಷಕಾರರನ್ನಾಗಿ ಸೇರಿಸುವುದು
69. ರಿಜಿಸ್ಟರ್‌ನಲ್ಲಿಯ ನಮೂದುಗಳು, ಇತ್ಯಾದಿಗಳ ಸಾಕ್ಷ್ಯ ಮತ್ತು ರಿಜಿಸ್ಟ್ರಾರನು ಮಾಡಿದ ಕಾರ್ಯಗಳು
70. ರಿಜಿಸ್ಟರು, ಇತ್ಯಾದಿಗಳನ್ನು ಹಾಜರುಪಡಿಸುವಂತೆ ರಿಜಿಸ್ಟ್ರಾರನನ್ನು ಮತ್ತು ಇತರೆ ಅಧಿಕಾರಿಗಳನ್ನು ಒತ್ತಾಯಪಡಿಸದಿರುವುದು
71. ಸರಕುಗಳ ಮೇಲೆ ಮೂಲ ಸಂಕೇತವನ್ನು ತೋರಿಸುವಂತೆ ಅಗತ್ಯಪಡಿಸುವ ಅಧಿಕಾರ
72. ಸಿಂಧುತ್ವದ ಪ್ರಮಾಣಪತ್ರ
73. ಕಾನೂನು ವ್ಯವಹರಣೆಗಳ ಬಗ್ಗೆ ಆಧಾರರಹಿತ ಬೆದರಿಕೆಗಳು
74. ನೋಟೀಸು ಜಾರಿಯ ಸಲುವಾಗಿ ವಿಳಾಸ
75. ವ್ಯಾಪಾರ ಪದ್ಧತಿಗಳು, ಇತ್ಯಾದಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳುವುದು
76. ಏಜೆಂಟರು

77. ಸೂಚಿಗಳು
78. ದಸ್ತಾವೇಜುಗಳನ್ನು ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿಡುವುದು
79. ಸಂಸತ್ತಿನ ಮುಂದೆ ರಿಜಿಸ್ಟ್ರಾರನ ವರದಿಗಳನ್ನು ಇಡುವುದು
80. ಫೀಜು ಮತ್ತು ಅಧಿಭಾರ
81. VIII ನೆಯ ಅಧ್ಯಾಯದ ಕೆಲವು ವಿಷಯಗಳ ಸಂಬಂಧದಲ್ಲಿ ಉಳಿಸುವಿಕೆಗಳು
82. ಭೌಗೋಳಿಕ ಸಂಕೇತದ ಸ್ವಾಮ್ಯಕ್ಕೆ ಸಂಬಂಧಿಸಿದ ಘೋಷಣೆಗಳನ್ನು ನೋಂದಣಿ ಅಧಿನಿಯಮ, 1908ರ ಮೇರೆಗೆ ನೋಂದಾಯಿಸದಿರುವುದು
83. ಸರ್ಕಾರದ ಬದ್ಧತೆ
84. ಒಡಂಬಡಿಕೆ ದೇಶಗಳ ನಾಗರಿಕರಿಂದ ನೋಂದಣಿಗಾಗಿ ಬರುವ ಅರ್ಜಿಗಳ ಸಂಬಂಧದ ವಿಶೇಷ ಉಪಬಂಧಗಳು
85. ಪರಸ್ಪರತೆಯ ಉಪಬಂಧ
86. ತೊಂದರೆಗಳನ್ನು ನಿವಾರಿಸಲು ಕೇಂದ್ರ ಸರ್ಕಾರದ ಅಧಿಕಾರಗಳು
87. ನಿಯಮ ರಚನಾಧಿಕಾರ.

# ಸರಕುಗಳ ಭೌಗೋಳಿಕ ಸಂಕೇತ (ನೋಂದಣಿ ಮತ್ತು ರಕ್ಷಣೆ) ಅಧಿನಿಯಮ, 1999

**(1999ರ ಸಂಖ್ಯೆ 48)**

**[30ನೇ ಡಿಸೆಂಬರ್, 1999]**

**ಸರಕುಗಳಿಗೆ ಸಂಬಂಧಿಸಿದಂತೆ ಭೌಗೋಳಿಕ ಸಂಕೇತಗಳ ನೋಂದಣಿಗಾಗಿ ಮತ್ತು ಉತ್ತಮ ರಕ್ಷಣೆಗಾಗಿ ಉಪಬಂಧಿಸುವ ಅಧಿನಿಯಮ.**

ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಸರಕುಗಳ ಭೌಗೋಳಿಕ ಸಂಕೇತ (ನೋಂದಣಿ ಮತ್ತು ರಕ್ಷಣೆ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು ಸಮಗ್ರ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು; ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು, ಮತ್ತು ಅಂಥ ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು ಮತ್ತು ಅರ್ಥ ವಿವರಣೆ.–**(1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಪೀಲು ಮಂಡಲಿ" ಎಂದರೆ ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರ 83ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಅಪೀಲು ಮಂಡಲಿ;

(ಬಿ) "ಅಧಿಕೃತ ಬಳಕೆದಾರ" ಎಂದರೆ 17ನೇ ಪ್ರಕರಣದ ಅಡಿಯಲ್ಲಿ ನೋಂದಾಯಿಸಲಾದ ಒಂದು ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರ;

(ಸಿ) "ಮೋಸಹೋಗುವಷ್ಟು ಸಾಮ್ಯವಿರುವ" ಭೌಗೋಳಿಕ ಸಂಕೇತ ಎಂಬುದನ್ನು ಇನ್ನೊಂದು ಭೌಗೋಳಿಕ ಸಂಕೇತಕ್ಕೆ ವಂಚಿಸುವ ಅಥವಾ ಗೊಂದಲ ಉಂಟು ಮಾಡುವ ಸಂಭವವಿರುವ ಆ ಇತರೆ ಭೌಗೋಳಿಕ ಸಂಕೇತವನ್ನು ಅದು ಸರಿಸುಮಾರು ಹೋಲುವುದಿದ್ದರೆ ಅಂಥ ಭೌಗೋಳಿಕ ಸಂಕೇತವನ್ನು ಮೋಸಹೋಗುವಷ್ಟು ಸಾಮ್ಯವಿರುವುದೆಂದು ಭಾವಿಸತಕ್ಕದ್ದು;

(ಡಿ) "ಜಿಲ್ಲಾ ನ್ಯಾಯಾಲಯ"ವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ (1908ರ 5) ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತದೆ;

(ಇ) ಸರಕುಗಳ ಸಂಬಂಧದಲ್ಲಿ, "ಭೌಗೋಳಿಕ ಸಂಕೇತ" ಎಂದರೆ ಒಂದು ದೇಶದ ರಾಜ್ಯಕ್ಷೇತ್ರದಲ್ಲಿ ಅಥವಾ ಆ ರಾಜ್ಯಕ್ಷೇತ್ರದ ಪ್ರದೇಶದಲ್ಲಿ ಅಥವಾ ಸ್ಥಳದಲ್ಲಿ ಉತ್ಪತ್ತಿಯಾದ ಅಥವಾ ತಯಾರಿಸಲಾದಂಥ ಸರಕುಗಳ ತಿಳಿದ ಗುಣಮಟ್ಟ, ಖ್ಯಾತಿ ಅಥವಾ ಇತರ ಲಕ್ಷಣವನ್ನು ಹೆಚ್ಚಾಗಿ ಅದರ ಭೌಗೋಳಿಕ ಮೂಲದ್ದೆಂದು ಹೇಳಬಹುದಾದ ಕೃಷಿ ಸರಕುಗಳೆಂದು, ಸ್ವಾಭಾವಿಕ ಸರಕುಗಳೆಂದು ಅಥವಾ ತಯಾರಿಸಲಾದ ಸರಕುಗಳೆಂದು ಅಂಥ ಸರಕುಗಳನ್ನು ಗುರುತಿಸುವ ಒಂದು ಸಂಕೇತ ಮತ್ತು ಅಂಥ ರಾಜ್ಯಕ್ಷೇತ್ರದಲ್ಲಿ, ಪ್ರದೇಶದಲ್ಲಿ ಅಥವಾ ಸಂದರ್ಭಾನುಸಾರ, ಸ್ಥಳದಲ್ಲಿ ಅಂಥ ಸರಕುಗಳು ತಯಾರಿಸಲಾದ ಸರಕುಗಳಾಗಿದ್ದ ಸಂದರ್ಭದಲ್ಲಿ, ಸಂಬಂಧಪಟ್ಟ ಸರಕುಗಳ ಉತ್ಪಾದನೆಯ ಅಥವಾ ಸಂಸ್ಕರಣದ ಅಥವಾ ತಯಾರಿಕೆಯ ಯಾವುದೇ ಒಂದು ಚಟುವಟಿಕೆಯನ್ನು ಗುರುತಿಸುವ ಒಂದು ಸಂಕೇತ.

**ವಿವರಣೆ.–** ಯಾವ ಹೆಸರು ಒಂದು ದೇಶದ, ಪ್ರದೇಶದ ಅಥವಾ ಸ್ಥಳದ ಹೆಸರಾಗಿಲ್ಲವೋ ಅದು ಒಂದು ನಿರ್ದಿಷ್ಟ ಭೌಗೋಳಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದ್ದರೆ ಮತ್ತು ಆ ದೇಶದಿಂದ, ಕ್ಷೇತ್ರದಿಂದ ಅಥವಾ ಸಂದರ್ಭಾನುಸಾರ, ಸ್ಥಳದಿಂದ ಉತ್ಪತ್ತಿಯಾಗುವ ನಿರ್ದಿಷ್ಟ ಸರಕುಗಳ ಮೇಲೆ ಅಥವಾ ಅವುಗಳಿಗೆ ಸಂಬಂಧಿಸಿ ಬಳಸಲಾಗಿದ್ದರೆ, ಅದನ್ನು ಸಹ ಭೌಗೋಳಿಕ ಸಂಕೇತ ಎಂಬುದಾಗಿ ಈ ಖಂಡದ ಉದ್ದೇಶಗಳಿಗಾಗಿ ಪರಿಗಣಿಸತಕ್ಕದ್ದು;

(ಎಫ್) "ಸರಕುಗಳು" ಎಂದರೆ ಯಾವುದೇ ಕೃಷಿಸಂಬಂಧಿ, ನೈಸರ್ಗಿಕ ಅಥವಾ ತಯಾರಿಸಲಾದ ಸರಕುಗಳು ಅಥವಾ ಕರಕುಶಲ ಅಥವಾ ಕೈಗಾರಿಕೆಯ ಯಾವುದೇ ಸರಕುಗಳು ಮತ್ತು ಇದರಲ್ಲಿ ಆಹಾರ ಪದಾರ್ಥಗಳು ಒಳಗೊಳ್ಳುತ್ತವೆ;

(ಜಿ) "ಸಂಕೇತ" ಎಂಬುದರಲ್ಲಿ ಸರಕುಗಳು ಯಾವ ಭೌಗೋಳಿಕ ಮೂಲಕ್ಕೆ ಅನ್ವಯಿಸುತ್ತವೋ ಅದನ್ನು ತಿಳಿಸುವ ಅಥವಾ ಸೂಚಿಸುವ ಭೌಗೋಳಿಕ ಅಥವಾ ಆಲಂಕಾರಿಕ ನಿರೂಪಣೆಯನ್ನು ಅಥವಾ ಅವುಗಳ ಯಾವುದೇ ಸಂಯೋಜನೆಯನ್ನು ಒಳಗೊಳ್ಳುತ್ತದೆ.

(ಹೆಚ್) "ಹೆಸರು" ಎಂಬುದರಲ್ಲಿ ಹೆಸರಿನ ಯಾವುದೇ ಸಂಕ್ಷಿಪ್ತಾಕ್ಷರವನ್ನು ಒಳಗೊಳ್ಳುತ್ತದೆ;

(ಐ) "ಪ್ಯಾಕೇಜ್" ಎಂಬುದರಲ್ಲಿ ಯಾವುದೇ ಸಂದೂಕ, ಪೆಟ್ಟಿಗೆ, ಧಾರಕ, ಆವರಣ, ಮಡಿಕೆ, ಭಾಂಡ, ಪಾತ್ರೆ, ಸಂಪುಟ, ಸೀಸೆ, ಹೊದಿಕೆ, ಅಂಟುಚೀಟಿ, ಕಟ್ಟುದಾರ, ಚೀಟಿ, ಸುರುಳಿ, ಚೌಕಟ್ಟು, ಕೋಶ, ಟೋಪಿ, ಮುಚ್ಚಳ, ಬೆಣೆ ಮತ್ತು ಬಿರಡೆ ಒಳಗೊಳ್ಳುವುದು;

(ಜೆ) "ಗೊತ್ತುಪಡಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಲಾದದ್ದು;

(ಕೆ) ಸರಕುಗಳಿಗೆ ಸಂಬಂಧಿಸಿದಂತೆ "ಉತ್ಪಾದಕ" ಎಂದರೆ,–

(i) ಅಂಥ ಸರಕುಗಳು ಬೇಸಾಯದ ಸರಕುಗಳಾಗಿದ್ದರೆ, ಆ ಸರಕುಗಳನ್ನು ಉತ್ಪಾದಿಸುವ ಯಾರೇ ವ್ಯಕ್ತಿ ಮತ್ತು ಅಂಥ ಸರಕನ್ನು ಸಂಸ್ಕರಿಸುವ ಅಥವಾ ಪ್ಯಾಕ್ ಮಾಡುವ ವ್ಯಕ್ತಿಯೂ ಒಳಗೊಳ್ಳುತ್ತಾನೆ;

(ii) ಅಂಥ ಸರಕುಗಳು ನೈಸರ್ಗಿಕ ಸರಕುಗಳಾಗಿದ್ದರೆ, ಆ ಸರಕುಗಳನ್ನು ಉಪಯೋಗಕ್ಕೆ ಬರುವಂತೆ ಮಾಡುವ ಯಾರೇ ವ್ಯಕ್ತಿ;

(iii) ಅಂಥ ಸರಕುಗಳು ಕರಕುಶಲ ಅಥವಾ ಕೈಗಾರಿಕಾ ಸರಕುಗಳಾಗಿದ್ದರೆ

– ಸರಕುಗಳನ್ನು ಮಾಡುವ ಅಥವಾ ತಯಾರಿಸುವ ಯಾರೇ ವ್ಯಕ್ತಿ;

ಮತ್ತು ಅಂಥ ಸರಕುಗಳ ಸಂದರ್ಭಾನುಸಾರ ಉತ್ಪಾದನೆಯಲ್ಲಿ, ಉಪಯೋಗಕ್ಕೆ ಬರುವಂತೆ ಮಾಡುವಲ್ಲಿ ಅಥವಾ ತಯಾರಿಸುವಲ್ಲಿ ವ್ಯಾಪಾರ ಮಾಡುವ ಅಥವಾ ವ್ಯವಹರಿಸುವ ಯಾರೇ ವ್ಯಕ್ತಿ;

(ಎಲ್) "ರಿಜಿಸ್ಟರ್" ಎಂದರೆ 6ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಭೌಗೋಳಿಕ ಸಂಕೇತಗಳ ರಿಜಿಸ್ಟರ್;

(ಎಂ) "ನೋಂದಾಯಿಸಲಾದುದು" ಎಂದರೆ (ಅದರ ವ್ಯಾಕರಣ ವ್ಯತ್ಯಾಸದೊಂದಿಗೆ) ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದದ್ದು;

(ಎನ್) ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದಂತೆ "ನೋಂದಾಯಿತ ಮಾಲೀಕ" ಎಂದರೆ ತತ್ಕಾಲದಲ್ಲಿ ಭೌಗೋಳಿಕ ಸಂಕೇತದ ಮಾಲೀಕನಾಗಿ ನೋಂದಣಿ ಪುಸ್ತಕದಲ್ಲಿ ದಾಖಲಿಸಲಾದ ವ್ಯಕ್ತಿಗಳ ಅಥವಾ ಉತ್ಪಾದಕರ ಯಾವುದೇ ಸಂಘ ಅಥವಾ ಯಾವುದೇ ಸಂಘಟನೆ;

(ಒ) "ರಿಜಿಸ್ಟ್ರಾರ್" ಎಂದರೆ 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಭೌಗೋಳಿಕ ಸಂಕೇತಗಳ ರಿಜಿಸ್ಟ್ರಾರ್;

(ಪಿ) "ನ್ಯಾಯಾಧಿಕರಣ" ಎಂದರೆ ಸಂಬಂಧಿಸಿದ ವ್ಯವಹರಣೆಯು ಯಾವ ರಿಜಿಸ್ಟ್ರಾರರ ಅಥವಾ ಸಂದರ್ಭಾನುಸಾರ, ಅಪೀಲು ಮಂಡಲಿಯ ಮುಂದೆ ಇತ್ಯರ್ಥದಲ್ಲಿದೆಯೋ ಅಂಥ ರಿಜಿಸ್ಟ್ರಾರ್ ಅಥವಾ ಅಪೀಲು ಮಂಡಲಿ.

(2) ಈ ಅಧಿನಿಯಮದಲ್ಲಿ ಬಳಸಲಾದ ಮತ್ತು ಪರಿಭಾಷಿಸಿಲ್ಲದ ಆದರೆ ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ, ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

(3) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ಭೌಗೋಳಿಕ ಸಂಕೇತದ ಬಳಕೆಗೆ ಮಾಡಲಾದ ಯಾವುದೇ ಉಲ್ಲೇಖವನ್ನು ಭೌಗೋಳಿಕ ಸಂಕೇತದ ಮುದ್ರಿತ ಅಥವಾ ಇತರ ದೃಶ್ಯರೂಪಣ ಬಳಕೆಗೆ ಮಾಡಲಾದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು;

(ಬಿ) ಸರಕುಗಳಿಗೆ ಸಂಬಂಧಿಸಿದಂತೆ ಭೌಗೋಳಿಕ ಸಂಕೇತದ ಬಳಕೆಗೆ ಮಾಡಲಾದ ಯಾವುದೇ ಉಲ್ಲೇಖವನ್ನು ಅಂಥ ಸರಕುಗಳ ಮೇಲೆ ಅಥವಾ ಅವುಗಳ ಸಂಬಂಧದಲ್ಲಿ ಯಾವುದೇ ಭೌತಿಕ ಅಥವಾ ಇನ್ನಾವುದೇ ರೀತಿಯಲ್ಲಿ ಭೌಗೋಳಿಕ ಸಂಕೇತಕ್ಕೆ ಮಾಡಲಾದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು;

(ಸಿ) ನೋಂದಾಯಿತ ಭೌಗೋಳಿಕ ಸಂಕೇತಕ್ಕೆ ಮಾಡಲಾದ ಯಾವುದೇ ಉಲ್ಲೇಖವು ರಿಜಿಸ್ಟರಿನಲ್ಲಿ ನೋಂದಾಯಿಸಿದ ಭೌಗೋಳಿಕ ಸಂಕೇತಕ್ಕೆ ಮಾಡಲಾದ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅದನ್ನು ಅರ್ಥೈಸತಕ್ಕದ್ದು;

(ಡಿ) ರಿಜಿಸ್ಟ್ರಾರನಿಗೆ ಮಾಡಲಾದ ಯಾವುದೇ ಉಲ್ಲೇಖವು 3ನೇ ಪ್ರಕರಣದ (2)ನೇ ಉಪಪ್ರಕರಣದ ಅನುಸಾರವಾಗಿ ರಿಜಿಸ್ಟ್ರಾರನ ಕಾರ್ಯಗಳನ್ನು ನಿರ್ವಹಿಸುವ ಯಾರೇ ಅಧಿಕಾರಿಗೆ ಮಾಡಲಾದ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅದನ್ನು ಅರ್ಥೈಸತಕ್ಕದ್ದು.

(ಇ) ಭೌಗೋಳಿಕ ಸಂಕೇತಗಳ ರಿಜಿಸ್ಟರಿಗೆ ಮಾಡಿದ ಯಾವುದೇ ಉಲ್ಲೇಖವು, ಯಾವುದೇ ಭೌಗೋಳಿಕ ಸಂಕೇತಗಳ ರಿಜಿಸ್ಟರಿಗೆ ಮಾಡಲಾದ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅದನ್ನು ಅರ್ಥೈಸತಕ್ಕದ್ದು.

## ಅಧ್ಯಾಯ – II

## ರಿಜಿಸ್ಟರು ಮತ್ತು ನೋಂದಣಿಯ ಷರತ್ತುಗಳು

**3. ಭೌಗೋಳಿಕ ಸಂಕೇತಗಳ ರಿಜಿಸ್ಟ್ರಾರ್.–** (1) ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸ್ವಾಮ್ಯದ ಸನ್ನದುಗಳ, ವಿನ್ಯಾಸಗಳ ಮತ್ತು ವ್ಯಾಪಾರ ಚಿಹ್ನೆಗಳ ಮಹಾ ನಿಯಂತ್ರಕರು ಭೌಗೋಳಿಕ ಸಂಕೇತಗಳ ರಿಜಿಸ್ಟ್ರಾರ್‌ನಾಗಿರತಕ್ಕದ್ದು.

(2) ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂಥ ಪದನಾಮವುಳ್ಳ ಅಧಿಕಾರಿಗಳನ್ನು, ರಿಜಿಸ್ಟ್ರಾರನು ಕಾಲ–ಕಾಲಕ್ಕೆ ಅವರಿಗೆ ನಿರ್ವಹಿಸುವಂತೆ ಅಧಿಕಾರಗಳನ್ನು ನೀಡುವ ಈ ಅಧಿನಿಯಮದ ಮೇರೆಗಿನ ಕಾರ್ಯಗಳನ್ನು ಅವನ ಅಧೀಕ್ಷಣೆ ಮತ್ತು ನಿರ್ದೇಶನದಲ್ಲಿ ನಿರ್ವಹಿಸುವ ಉದ್ದೇಶಕ್ಕಾಗಿ ನೇಮಕ ಮಾಡಬಹುದು.

**4. ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದು ಅಥವಾ ವರ್ಗಾವಣೆ ಮಾಡುವುದು ಇತ್ಯಾದಿಗಳ ಬಗ್ಗೆ ರಿಜಿಸ್ಟ್ರಾರರ ಅಧಿಕಾರ.–** 3ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ರಿಜಿಸ್ಟ್ರಾರನು, ಲಿಖಿತ ಆದೇಶದ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ದಾಖಲಿಸಿ ಸದರಿ ಉಪಪ್ರಕರಣ (2)ರ ಮೇರೆಗೆ ನೇಮಕಗೊಂಡ ಅಧಿಕಾರಿಯ ಮುಂದೆ ಇತ್ಯರ್ಥವಾಗಬೇಕಾದ ಯಾವುದೇ ವಿಷಯವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಹೊಸದಾಗಿಯಾಗಲಿ ಅಥವಾ ಅದನ್ನು ಹಾಗೆ ಹಿಂತೆಗೆದುಕೊಂಡ ಹಂತದಿಂದಾಗಲಿ ತಾನಾಗಿಯೇ ಅಂಥ ವಿಷಯದಲ್ಲಿ ವ್ಯವಹರಿಸಬಹುದು ಅಥವಾ ಹಾಗೆ ನೇಮಕಗೊಂಡ ಮತ್ತೊಬ್ಬ ಅಧಿಕಾರಿಗೆ ವರ್ಗಾಯಿಸಬಹುದು. ಆಗ ಅಂಥ ಅಧಿಕಾರಿಯ ವರ್ಗಾವಣೆಯ ಆದೇಶದಲ್ಲಿರುವ ವಿಶೇಷ ನಿರ್ದೇಶನಗಳಿಗೆ ಒಳಪಟ್ಟು ವಿಷಯವನ್ನು ಹೊಸದಾಗಿಯಾಗಲಿ ಅಥವಾ ಹಾಗೆ ವರ್ಗಾವಣೆ ಮಾಡಿದ ಹಂತದಿಂದಾಗಲಿ ಮುಂದುವರಿಸಬಹುದು.

**5. ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿ ಮತ್ತು ಅದರ ಕಚೇರಿಗಳು.–** (1) ಈ ಅಧಿನಿಯಮದ ಉದ್ದೇಶಕ್ಕಾಗಿ ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿ ಎಂದು ಕರೆಯಲಾಗುವ ಒಂದು ರಿಜಿಸ್ಟ್ರಿಯನ್ನು ಸ್ಥಾಪಿಸತಕ್ಕದ್ದು.

(2) ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಯ ಮುಖ್ಯ ಕಚೇರಿಯು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿರತಕ್ಕದ್ದು, ಮತ್ತು ಭೌಗೋಳಿಕ ಸಂಕೇತಗಳ ನೋಂದಣಿಯ ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸುವಂಥ ಸ್ಥಳಗಳಲ್ಲಿ ಭೌಗೋಳಿಕ ಸಂಕೇತಗಳ ನೋಂದಣಿ ಕಚೇರಿಯ ಶಾಖಾ ಕಚೇರಿಗಳನ್ನು ಸ್ಥಾಪಿಸಬಹುದು.

(3) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿ ಕಚೇರಿಯು ತನ್ನ ಕಾರ್ಯಗಳನ್ನು ಯಾವ ರಾಜ್ಯಕ್ಷೇತ್ರಗಳ ಪರಿಮಿತಿಗಳ ಒಳಗೆ ನಿರ್ವಹಿಸಬಹುದೋ ಅವುಗಳನ್ನು ಗೊತ್ತುಪಡಿಸಬಹುದು.

(4) ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಯ ಒಂದು ಮೊಹರು ಇರತಕ್ಕದ್ದು.

**6. ಭೌಗೋಳಿಕ ಸಂಕೇತಗಳ ರಿಜಿಸ್ಟರು.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಭೌಗೋಳಿಕ ಸಂಕೇತಗಳ ರಿಜಿಸ್ಟರು ಎಂದು ಕರೆಯಲಾಗುವ ಒಂದು ದಾಖಲೆಯನ್ನು ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಯ ಮುಖ್ಯ ಕಚೇರಿಯಲ್ಲಿ ಇಡತಕ್ಕದ್ದು. ಅದರಲ್ಲಿ ಮಾಲೀಕರ ಹೆಸರುಗಳನ್ನು, ವಿಳಾಸಗಳನ್ನು ಮತ್ತು ವಿವರಣೆಗಳನ್ನು ಅಧಿಕೃತ ಬಳಕೆದಾರರ ಹೆಸರುಗಳನ್ನು, ವಿಳಾಸ ಮತ್ತು ವಿವರಣೆ ಸಹಿತವಾಗಿ ಎಲ್ಲಾ ನೋಂದಾಯಿತ ಭೌಗೋಳಿಕ ಸಂಕೇತಗಳನ್ನು ಮತ್ತು ಗೊತ್ತುಪಡಿಸಬಹುದಾದಂತೆ ನೋಂದಾಯಿತ ಭೌಗೋಳಿಕ ಸಂಕೇತಗಳಿಗೆ ಸಂಬಂಧಿಸಿರುವ ಅಂಥ ಯಾವುದೇ ಇತರೆ ವಿಷಯಗಳನ್ನು ನಮೂದಿಸತಕ್ಕದ್ದು ಮತ್ತು ಅಂಥ ರಿಜಿಸ್ಟರುಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಕಂಪ್ಯೂಟರಿನಲ್ಲಿ ನಿರ್ವಹಿಸಬಹುದು.

(2) ಉಪಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ ಗೊತ್ತುಪಡಿಸಬಹುದಾದಂಥ ಸುರಕ್ಷತೆಗಳಿಗೆ ಒಳಪಟ್ಟು ದಾಖಲೆಗಳನ್ನು ರಿಜಿಸ್ಟ್ರಾರನು ಸಂಪೂರ್ಣವಾಗಿ ಅಥವಾ ಭಾಗಶಃ ಗಣಕಯಂತ್ರ ಕಾಂತೀಯ ತಟ್ಟೆಗಳ ದಾಖಲೆಗಳನ್ನು ಅಥವಾ ಧ್ವನಿತಟ್ಟೆಗಳಲ್ಲಿ ಅಥವಾ ಯಾವುದೇ ಇತರ ವಿದ್ಯುನ್ಮಾನ ರೂಪದಲ್ಲಿ ಇಡುವುದು ಕಾನೂನುಬದ್ಧವಾಗಿರತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ಅಂಥ ರಿಜಿಸ್ಟರನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಗಣಕಯಂತ್ರ ಕಾಂತೀಯ ತಟ್ಟೆಗಳಲ್ಲಿ ಅಥವಾ ಧ್ವನಿತಟ್ಟೆಗಳಲ್ಲಿ ಅಥವಾ ಯಾವುದೇ ಇತರೆ ವಿದ್ಯುನ್ಮಾನ ರೂಪದಲ್ಲಿ ನಿರ್ವಹಿಸಲಾಗಿದ್ದಲ್ಲಿ, ರಿಜಿಸ್ಟರ್‌ನಲ್ಲಿನ ಯಾವುದೇ ನಮೂದಿಗೆ ಸಂಬಂಧಿಸಿದ ಈ ಅಧಿನಿಯಮದಲ್ಲಿನ ಉಲ್ಲೇಖವನ್ನು, ಗಣಕಯಂತ್ರ ಕಾಂತೀಯ ತಟ್ಟೆಗಳಲ್ಲಿ ಅಥವಾ ಧ್ವನಿತಟ್ಟೆಗಳಲ್ಲಿ ಅಥವಾ ಸಂದರ್ಭಾನುಸಾರ ಇತರ ವಿದ್ಯುನ್ಮಾನ ರೂಪದಲ್ಲಿ ನಿರ್ವಹಿಸಲಾದ ನಮೂದಿಗೆ ಮಾಡಲಾದ ಉಲ್ಲೇಖವೆಂಬಂತೆ ಅರ್ಥೈಸತಕ್ಕದ್ದು.

(4) ಯಾವುದೇ ಟ್ರಸ್ಟ್‌ನ ವ್ಯಕ್ತ ಅಥವಾ ಇಂಗಿತ ಅಥವಾ ರಚನಾತ್ಮಕ ನೋಟೀಸನ್ನು ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದಲ್ಲ ಮತ್ತು ಅಂಥ ನೋಟೀಸನ್ನು ರಿಜಿಸ್ಟ್ರಾರನು ಸ್ವೀಕರಿಸಲು ಅವಕಾಶವಿರತಕ್ಕದ್ದಲ್ಲ.

(5) ರಿಜಿಸ್ಟರನ್ನು, ಕೇಂದ್ರ ಸರ್ಕಾರದ ಅಧೀಕ್ಷಣೆ ಮತ್ತು ನಿರ್ದೇಶನಕ್ಕೆ ಒಳಪಟ್ಟು, ರಿಜಿಸ್ಟ್ರಾರ್‌ನ ನಿಯಂತ್ರಣ ಮತ್ತು ನಿರ್ವಹಣೆಯಲ್ಲಿ ಇಡತಕ್ಕದ್ದು.

(6) ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಯ ಕಚೇರಿಯ ಪ್ರತಿಯೊಂದು ಶಾಖಾ ಕಚೇರಿಯಲ್ಲಿ ರಿಜಿಸ್ಟರಿನ ಒಂದು ಪ್ರತಿಯನ್ನು ಮತ್ತು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದಂತೆ 78ನೇ ಪ್ರಕರಣದಲ್ಲಿ ನಮೂದಿಸಲಾದಂತಹ ಇತರ ದಸ್ತಾವೇಜುಗಳನ್ನು ಇಡತಕ್ಕದ್ದು.

**7. ರಿಜಿಸ್ಟರಿನ ಭಾಗ ಎ ಮತ್ತು ಭಾಗ ಬಿ.–** (1) 6ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ರಿಜಿಸ್ಟರನ್ನು ಅನುಕ್ರಮವಾಗಿ ಭಾಗ ಎ ಮತ್ತು ಭಾಗ ಬಿ ಎಂದು ಕರೆಯಲಾಗುವ ಎರಡು ಭಾಗಗಳಲ್ಲಿ ವಿಂಗಡಿಸತಕ್ಕದ್ದು.

(2) ಭೌಗೋಳಿಕ ಸಂಕೇತಗಳ ನೋಂದಣಿಗೆ ಸಂಬಂಧಿಸಿರುವ ವಿವರಗಳನ್ನು ಗೊತ್ತುಪಡಿಸಲಾದ ರೀತಿಯಲ್ಲಿ ರಿಜಿಸ್ಟರಿನ ಭಾಗ ಎ ನಲ್ಲಿ ಸೇರಿಸಿಕೊಳ್ಳತಕ್ಕದ್ದು ಮತ್ತು ಅವು ಅದರ ಭಾಗವಾಗಿರತಕ್ಕದ್ದು.

(3) ಅಧಿಕೃತ ಬಳಕೆದಾರರ ನೋಂದಣಿಗೆ ಸಂಬಂಧಿಸಿರುವ ವಿವರಗಳನ್ನು ಮತ್ತು ಗೊತ್ತುಪಡಿಸಲಾದ ರೀತಿಯಲ್ಲಿ ರಿಜಿಸ್ಟರಿನ ಭಾಗ ಬಿ ನಲ್ಲಿ ಸೇರಿಸಿಕೊಳ್ಳತಕ್ಕದ್ದು ಮತ್ತು ಅವು ಅದರ ಭಾಗವಾಗಿರತಕ್ಕದ್ದು.

**8. ನೋಂದಣಿಯು ನಿರ್ದಿಷ್ಟ ಸರಕುಗಳಿಗೆ ಮತ್ತು ಕ್ಷೇತ್ರಕ್ಕೆ ಸಂಬಂಧಿಸಿರುವುದು.**– (1) ಒಂದು ಭೌಗೋಳಿಕ ಸಂಕೇತವನ್ನು, ರಿಜಿಸ್ಟ್ರಾರನು ವರ್ಗೀಕರಿಸಬಹುದಾದಂತಹ ಸರಕುಗಳ ವರ್ಗದಲ್ಲಿ ಅಡಕವಾದ ಎಲ್ಲಾ ಸರಕುಗಳಿಗೆ ಅಥವಾ ಅವುಗಳಲ್ಲಿ ಯಾವುದೇ ಸರಕಿಗೆ ಸಂಬಂಧಿಸಿದಂತೆ ಮತ್ತು ಒಂದು ದೇಶದ ನಿಶ್ಚಿತ ರಾಜ್ಯಕ್ಷೇತ್ರಕ್ಕೆ, ಅಥವಾ ಆ ರಾಜ್ಯಕ್ಷೇತ್ರದ ಪ್ರದೇಶಕ್ಕೆ ಅಥವಾ ಸಂದರ್ಭಾನುಸಾರ, ಸ್ಥಳಕ್ಕೆ ಸಂಬಂಧಿಸಿ ನೋಂದಾಯಿಸಬಹುದು.

(2) ರಿಜಿಸ್ಟ್ರಾರನು, (1)ನೇ ಉಪಪ್ರಕರಣದ ಮೇರೆಗಿನ ಸರಕುಗಳನ್ನು ಭೌಗೋಳಿಕ ಸಂಕೇತಗಳ ನೋಂದಣಿಯ ಉದ್ದೇಶಗಳಿಗಾಗಿ ಇರುವ ಅಂತರಾಷ್ಟ್ರೀಯ ಸರಕುಗಳ ವರ್ಗೀಕರಣಕ್ಕೆ ಅನುಸಾರವಾಗಿ ಸಾಧ್ಯವಾಗಬಹುದಾದಷ್ಟು ವರ್ಗೀಕರಿಸತಕ್ಕದ್ದು.

(3) ರಿಜಿಸ್ಟ್ರಾರನು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸರಕುಗಳ ವರ್ಗೀಕರಣದ ಅಕಾರಾದಿ ಸೂಚಿಯನ್ನು ಗೊತ್ತುಪಡಿಸಿದ ರೀತಿಯಲ್ಲಿ ಪ್ರಕಟಿಸಬಹುದು.

(4) ಯಾವುದೇ ಸರಕುಗಳು ಯಾವ ವರ್ಗದೊಳಗೆ ಬರುವುದೆಂಬ ಬಗ್ಗೆ ಅಥವಾ ನೋಂದಾಯಿಸಬೇಕಾದ ಭೌಗೋಳಿಕ ಸಂಕೇತದ ಸಂಬಂಧದಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ನಿಶ್ಚಿತ ಪ್ರದೇಶದ ಬಗ್ಗೆ ಉದ್ಭವಿಸುವ ಯಾವುದೇ ಪ್ರಶ್ನೆಯನ್ನು ಅಥವಾ ಯಾವುದೇ ಸರಕುಗಳನ್ನು (3)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಲಾದ ಸರಕುಗಳ ಅಕಾರಾದಿ ಸೂಚಿಯಲ್ಲಿ ನಿರ್ದಿಷ್ಟಪಡಿಸದಿದ್ದಲ್ಲಿ ಅದನ್ನು ರಿಜಿಸ್ಟ್ರಾರನು ನಿರ್ಧರಿಸತಕ್ಕದ್ದು. ಆ ವಿಷಯದಲ್ಲಿ ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**9. ಕೆಲವು ಭೌಗೋಳಿಕ ಸಂಕೇತಗಳ ನೋಂದಣಿಯ ನಿಷೇಧ.**– ಯಾವ ಭೌಗೋಳಿಕ ಸಂಕೇತದ,–

(ಎ) ಬಳಕೆಯು ಮೋಸಗೊಳಿಸುವ ಅಥವಾ ಗೊಂದಲ ಉಂಟು ಮಾಡುವ ಸಂಭವವಿರುವುದೋ; ಅಥವಾ

(ಬಿ) ಬಳಕೆಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ವಿರುದ್ಧವಾಗುವ ಸಂಭವ ವಿರುವುದೋ; ಅಥವಾ

(ಸಿ) ಯಾವುದರಲ್ಲಿ ಅಪನಿಂದಾತ್ಮಕ ಅಥವಾ ಅಶ್ಲೀಲ ವಿಷಯವು ಅಡಕವಾಗಿರುವುದೋ ಅಥವಾ ಒಳಗೊಂಡಿರುವುದೋ; ಅಥವಾ

(ಡಿ) ಯಾವುದರಲ್ಲಿ ಭಾರತದ ನಾಗರಿಕರ ಯಾವುದೇ ವರ್ಗದ ಅಥವಾ ಪಂಥದ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸಬಹುದಾದ ಸಂಭವವಿರುವ ಯಾವುದೇ ವಿಷಯವು ಅಡಕವಾಗಿರುವುದೋ ಅಥವಾ ಒಳಗೊಂಡಿರುವುದೋ; ಅಥವಾ

(ಇ) ಯಾವುದು ನ್ಯಾಯಾಲಯದಲ್ಲಿ ಸಂರಕ್ಷಣೆಯ ಹಕ್ಕಿಗೆ ಬಾಧೆಯುಂಟುಮಾಡುವುದೋ; ಅಥವಾ

(ಎಫ್) ಯಾವುದು ಸರಕುಗಳ ವರ್ಗೀಯ ಹೆಸರುಗಳೆಂದು ಅಥವಾ ಸಂಕೇತಗಳೆಂದು ನಿರ್ಧರಿಸಲಾಗಿದ್ದ ಕಾರಣ ಅವುಗಳ ಮೂಲ ದೇಶದಲ್ಲಿ ಸಂರಕ್ಷಿಸಿಲ್ಲದ ಅಥವಾ ಸಂರಕ್ಷಿಸುವುದು ನಿಂತುಹೋದ ಅಥವಾ ಆ ದೇಶದಲ್ಲಿ ಉಪಯೋಗದಲ್ಲಿಲ್ಲದ ಸರಕುಗಳನ್ನು ಸಂಕೇತಿಸುವುದೋ; ಅಥವಾ

(ಜಿ) ಯಾವುದು ಸರಕುಗಳ ಉತ್ಪತ್ತಿಯಾಗುವಂಥ ರಾಜ್ಯಕ್ಷೇತ್ರ, ಪ್ರದೇಶ ಅಥವಾ ಸ್ಥಳ ಇವುಗಳಿಗೆ ಸಂಬಂಧಿಸಿದಂತೆ ಅಕ್ಷರಶಃ ಸತ್ಯವಾಗಿದ್ದರೂ ಆ ಸರಕುಗಳು, ಇನ್ನೊಂದು ರಾಜ್ಯಕ್ಷೇತ್ರದಲ್ಲಿ, ಪ್ರದೇಶದಲ್ಲಿ ಅಥವಾ ಸಂದರ್ಭಾನುಸಾರ, ಸ್ಥಳದಲ್ಲಿ ಉತ್ಪತ್ತಿಯಾಗುವುದೆಂದು ವ್ಯಕ್ತಿಗಳಿಗೆ ಸುಳ್ಳಾಗಿ ಸಂಕೇತಿಸುವುದೋ

– ಅಂಥ ಯಾವುದೇ ಭೌಗೋಳಿಕ ಸಂಕೇತವನ್ನು ಭೌಗೋಳಿಕ ಸಂಕೇತವೆಂಬುದಾಗಿ ನೋಂದಾಯಿಸತಕ್ಕದ್ದಲ್ಲ.

**ವಿವರಣೆ 1.–** ಈ ಪ್ರಕರಣದ ಉದ್ದೇಶಗಳಿಗಾಗಿ, ಸರಕುಗಳಿಗೆ ಸಂಬಂಧಿಸಿದಂತೆ, "ವರ್ಗೀಯ ಹೆಸರುಗಳು ಅಥವಾ ಸಂಕೇತಗಳು" ಎಂದರೆ ಯಾವ ಸರಕುಗಳ ಹೆಸರು, ಅವು ಮೂಲತಃ ಉತ್ಪತ್ತಿಯಾದ ಅಥವಾ ತಯಾರಿಸಲಾದ ಸ್ಥಳಕ್ಕೆ ಅಥವಾ ಪ್ರದೇಶಕ್ಕೆ ಸಂಬಂಧಿಸಿದ್ದರೂ ಅದರ ಮೂಲ ಅರ್ಥವನ್ನು ಕಳೆದುಕೊಂಡಿದ್ದು, ಅಂಥ ಸರಕುಗಳ ಸಾಮಾನ್ಯ ಹೆಸರಾಗಿರುವುದೋ ಮತ್ತು ಆ ಸರಕುಗಳ ಬಗೆ, ಸ್ವರೂಪ, ಪ್ರಕಾರ ಅಥವಾ ಇತರೆ ಗುಣವಿಶೇಷಗಳ ಅಥವಾ ಗುಣಲಕ್ಷಣಗಳ ಹೆಸರಾಗಿ ಅಥವಾ ಸಂಕೇತವಾಗಿ ಬಳಕೆಯಾಗುವುದೋ ಆ ಹೆಸರು ಎಂದು ಅರ್ಥ.

**ವಿವರಣೆ 2.–** ಹೆಸರು ವರ್ಗೀಯವಾಗಿದೆಯೇ ಎಂಬುದನ್ನು ನಿರ್ಧರಿಸುವಲ್ಲಿ, ಆ ಹೆಸರು ನಿಷ್ಪನ್ನವಾದ ಪ್ರದೇಶ ಅಥವಾ ಸ್ಥಳದಲ್ಲಿ ಇರುವ ಸನ್ನಿವೇಶ ಮತ್ತು ಆ ಸರಕುಗಳ ಬಳಕೆಯ ಪ್ರದೇಶ – ಇವುಗಳು ಸೇರಿದಂತೆ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

**10. ಸಮನಾಮದ ಭೌಗೋಳಿಕ ಸಂಕೇತಗಳ ನೋಂದಣಿ.–** 7ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರಶ್ನಿತ ಸಮನಾಮದ ಭೌಗೋಳಿಕ ಸಂಕೇತವನ್ನು, ಸಂಬಂಧಪಟ್ಟ ಸಮನಾಮ ಸಂಕೇತವನ್ನು ಇತರ ಸಮನಾಮ ಸಂಕೇತಗಳಿಂದ ಯಾವ ಕಾರ್ಯ ಸಾಧ್ಯ ಪರಿಸ್ಥಿತಿಯಲ್ಲಿ ವ್ಯತ್ಯಾಸಗೊಳಿಸತಕ್ಕದ್ದೋ ಆ ಪರಿಸ್ಥಿತಿಯನ್ನು ಮತ್ತು ಸಂಬಂಧಪಟ್ಟ ಸರಕುಗಳ ಉತ್ಪಾದಕರಿಗೆ ನ್ಯಾಯಸಮ್ಮತ ವ್ಯವಹಾರವನ್ನು ಸುನಿಶ್ಚಿತಗೊಳಿಸುವ ಅಗತ್ಯವನ್ನು ಪರ್ಯಾಲೋಚಿಸಿದ ತರುವಾಯ, ಆ ಸರಕುಗಳನ್ನು ನೋಂದಾಯಿಸಿದ ಪರಿಣಾಮವಾಗಿ ಅವುಗಳ ಬಳಕೆದಾರರು ಗೊಂದಲಕ್ಕೊಳಗಾಗಲಿಕ್ಕಿಲ್ಲ ಅಥವಾ ದಾರಿತಪ್ಪಲಿಕ್ಕಿಲ್ಲವೆಂದು ರಿಜಿಸ್ಟ್ರಾರನಿಗೆ ಮನವರಿಕೆಯಾದರೆ, ಅವನು ಈ ಅಧಿನಿಯಮದ ಮೇರೆಗೆ ಆ ಸರಕನ್ನು ನೋಂದಾಯಿಸಬಹುದು.

## ಅಧ್ಯಾಯ – III

## ನೋಂದಣಿಯ ಕಾರ್ಯವಿಧಾನ ಮತ್ತು ಅದರ ಅವಧಿ

**11. ನೋಂದಣಿ ಅರ್ಜಿ.–** (1) ಸಂಬಂಧಿಸಿದ ಸರಕುಗಳ ಉತ್ಪಾದಕರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಸ್ಥಾಪಿಸಲಾದ ವ್ಯಕ್ತಿಗಳ ಅಥವಾ ಉತ್ಪಾದಕರ ಯಾವುದೇ ಸಂಸ್ಥೆ ಅಥವಾ ಯಾವುದೇ ಸಂಘ ಅಥವಾ ಪ್ರಾಧಿಕಾರ, ಅಂಥ ಸರಕುಗಳ ಸಂಬಂಧದಲ್ಲಿ ಒಂದು ಭೌಗೋಳಿಕ ಸಂಕೇತವನ್ನು ನೋಂದಾಯಿಸಲು ಬಯಸಿದಲ್ಲಿ, ಭೌಗೋಳಿಕ ಸಂಕೇತದ ನೋಂದಣಿಗಾಗಿ ಗೊತ್ತುಪಡಿಸಬಹುದಾದಂಥ ನಮೂನೆ, ರೀತಿ ಮತ್ತು ಫೀಜುಗಳೊಂದಿಗೆ ಲಿಖಿತದಲ್ಲಿ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯು, ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು, –

(ಎ) ಭೌಗೋಳಿಕ ಪರಿಸರಕ್ಕೆ ಅನನ್ಯವಾಗಿ ಅಥವಾ ಅಗತ್ಯವಾಗಿ ಇರಬೇಕಾಗಿರುವ ನಿರ್ದಿಷ್ಟ ಗುಣ, ಗೌರವ ಅಥವಾ ಇತರೆ ಗುಣಲಕ್ಷಣಗಳ ಸಂಬಂಧದಲ್ಲಿ, ಅಂಥ ಕ್ಷೇತ್ರ, ಪ್ರದೇಶ ಅಥವಾ ಸಂದರ್ಭಾನುಸಾರ, ಸ್ಥಳದಲ್ಲಿ ಉಂಟಾಗುವ ಅಂತರ್ನಿಹಿತ ಸ್ವಾಭಾವಿಕ ಮತ್ತು ಮಾನವೀಯ ಅಂಶಗಳು ಮತ್ತು ಉತ್ಪಾದನೆ, ಸಂಸ್ಕರಣೆ ಅಥವಾ ತಯಾರಿಕೆಯು ಸಂಬಂಧಪಟ್ಟ ದೇಶದ ರಾಜ್ಯ ಕ್ಷೇತ್ರ ಅಥವಾ ಪ್ರದೇಶ ಅಥವಾ ಸಂದರ್ಭಾನುಸಾರ, ಸ್ಥಳದಿಂದ ಸರಕುಗಳು ಉತ್ಪತ್ತಿಯಾಗಿವೆಯೆಂಬುದನ್ನು ಹೆಸರಿಸಲು ಭೌಗೋಳಿಕ ಸಂಕೇತವು ಯಾವ ರೀತಿಯಲ್ಲಿ ನಿರ್ವಹಿಸುವುದು ಎಂಬ ವಿವರಣೆ;

(ಬಿ) ಭೌಗೋಳಿಕ ಸಂಕೇತವು ಯಾವ ಸರಕುಗಳ ವರ್ಗಕ್ಕೆ ಅನ್ವಯಿಸತಕ್ಕದ್ದೋ ಆ ಸರಕುಗಳ ವರ್ಗ;

(ಸಿ) ಸರಕುಗಳನ್ನು ಉತ್ಪತ್ತಿ ಮಾಡುವ ಅಥವಾ ತಯಾರಿಸುವ ದೇಶದ ರಾಜ್ಯಕ್ಷೇತ್ರ ಅಥವಾ ದೇಶದಲ್ಲಿನ ಪ್ರದೇಶ ಅಥವಾ ಸ್ಥಳದ ಭೌಗೋಳಿಕ ನಕ್ಷೆ;

(ಡಿ) ಭೌಗೋಳಿಕ ಸಂಕೇತವು ಪದಗಳನ್ನು ಅಥವಾ ಆಲಂಕಾರಿಕ ಅಂಶಗಳನ್ನು ಅಥವಾ ಅವೆರಡನ್ನು ಒಳಗೊಂಡಿರುವವೋ ಹೇಗೆ ಎನ್ನುವುದರ ತೋರಿಕೆಯ ಬಗೆಗಿನ ವಿವರಗಳು;

(ಇ) ಭೌಗೋಳಿಕ ಸಂಕೇತದ ನೋಂದಣಿಯೊಂದಿಗೆ ಪ್ರಾರಂಭಿಕವಾಗಿ ನೋಂದಾಯಿಸಲು ಪ್ರಸ್ತಾವಿಸಲಾದ, ಗೊತ್ತುಪಡಿಸಲಾದಂತೆ ಸಂಬಂಧಪಟ್ಟ ಸರಕುಗಳ ಉತ್ಪಾದಕರ ಬಗೆಗಿನ ವಿವರಗಳೇನಾದರೂ ಇದ್ದರೆ ಅವುಗಳನ್ನು ಒಳಗೊಂಡ ಒಂದು ವಿವರಣೆ; ಮತ್ತು

(ಎಫ್) ಗೊತ್ತುಪಡಿಸಬಹುದಾದಂಥ ಇತರ ವಿವರಗಳು.

(3) ಸರಕುಗಳ ಬೇರೆ ಬೇರೆ ವರ್ಗಗಳ ಭೌಗೋಳಿಕ ಸಂಕೇತದ ನೋಂದಣಿಗಾಗಿ ಅಂಥ ಸರಕುಗಳ ಪ್ರತಿಯೊಂದು ವರ್ಗದ ಸಂಬಂಧದಲ್ಲಿ ಸಂದಾಯ ಮಾಡುವ ಫೀಜಿನೊಂದಿಗೆ ಒಂದೇ ಅರ್ಜಿಯನ್ನು ಸಲ್ಲಿಸಬಹುದು.

(4) ಭೌಗೋಳಿಕ ಸಂಕೇತವು ಸಂಬಂಧಿಸಿರುವ ದೇಶದ ರಾಜ್ಯಕ್ಷೇತ್ರದ ಪರಿಮಿತಿಯೊಳಗೆ ಅಥವಾ ಆ ದೇಶದಲ್ಲಿನ ಪ್ರದೇಶ ಅಥವಾ ಸ್ಥಳವು, ಯಾವ ಪ್ರಾದೇಶಿಕ ಪರಿಮಿತಿಗಳೊಳಗೆ ಬರುತ್ತದೆಯೋ ಆ ಭೌಗೋಳಿಕ ಸಂಕೇತಗಳ ನೋಂದಣಿ ಕಚೇರಿಯಲ್ಲಿ (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಅಂಥ ರಾಜ್ಯಕ್ಷೇತ್ರ, ಪ್ರದೇಶವು, ಕ್ಷೇತ್ರವು ಅಥವಾ ಸಂದರ್ಭಾನುಸಾರ, ಸ್ಥಳವು ಭಾರತದೊಳಗೆ ಇರದಿದ್ದಲ್ಲಿ, ಅರ್ಜಿಯಲ್ಲಿ ತಿಳಿಯಪಡಿಸಲಾದಂತೆ ಭಾರತದಲ್ಲಿ ವ್ಯವಹರಿಸುವ ವಿಳಾಸದಲ್ಲಿ ನಮೂದಿಸಲಾದ ಸ್ಥಳವು ಯಾರ ಪ್ರಾದೇಶಿಕ ಪರಿಮಿತಿಯೊಳಗೆ ಬರುತ್ತದೆಯೋ ಆ ಭೌಗೋಳಿಕ ಸಂಕೇತದ ನೋಂದಣಿ ಕಚೇರಿಯಲ್ಲಿ ಆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ರಿಜಿಸ್ಟ್ರಾರನ ಮೂಲಕ ಪರೀಕ್ಷಿಸತಕ್ಕದ್ದು.

(6) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಿಜಿಸ್ಟ್ರಾರನು ಅರ್ಜಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬಹುದು ಅಥವಾ ಅಂಗೀಕರಿಸಬಹುದು ಅಥವಾ ಅವನು ಸೂಕ್ತವೆಂದು ಭಾವಿಸುವಂಥ ತಿದ್ದುಪಡಿಗಳು, ಮಾರ್ಪಾಡುಗಳು, ಷರತ್ತುಗಳು ಅಥವಾ ಪರಿಮಿತಿಗಳೇನಾದರು ಇದ್ದರೆ, ಅವುಗಳಿಗೊಳಪಟ್ಟು ಅಂಗೀಕರಿಸಬಹುದು.

(7) ಅರ್ಜಿಯನ್ನು ತಿರಸ್ಕರಿಸಿದ ಅಥವಾ ಷರತ್ತಿನ ಮೇಲೆ ಅಂಗೀಕರಿಸಿದ ಸಂದರ್ಭದಲ್ಲಿ, ರಿಜಿಸ್ಟ್ರಾರನು, ಅಂಥ ತಿರಸ್ಕರಣೆಯ ಅಥವಾ ಷರತ್ತಿನ ಮೇಲೆ ಅಂಗೀಕರಿಸಿದ ಕಾರಣಗಳನ್ನು ಮತ್ತು ಅವನು ಈ ತೀರ್ಮಾನಕ್ಕೆ ಬರುವಲ್ಲಿ ತಾನು ಉಪಯೋಗಿಸಿದ ಆಧಾರಗಳನ್ನು ಲಿಖಿತ ರೂಪದಲ್ಲಿ ದಾಖಲಿಸತಕ್ಕದ್ದು.

**12. ಅಂಗೀಕಾರವನ್ನು ಹಿಂತೆಗೆದುಕೊಳ್ಳುವುದು.–** ಭೌಗೋಳಿಕ ಸಂಕೇತದ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಿದ ತರುವಾಯ, ಅದನ್ನು ನೋಂದಾಯಿಸುವ ಮುಂಚೆ ರಿಜಿಸ್ಟ್ರಾರನು, –

(ಎ) ಆ ಅರ್ಜಿಯನ್ನು ತಪ್ಪಾಗಿ ಅಂಗೀಕರಿಸಲಾಗಿದೆಯೆಂದು; ಅಥವಾ

(ಬಿ) ಪ್ರಕರಣದ ಸನ್ನಿವೇಶಗಳಲ್ಲಿ ಭೌಗೋಳಿಕ ಸಂಕೇತವನ್ನು ನೋಂದಾಯಿಸತಕ್ಕದ್ದಲ್ಲವೆಂದು ಅಥವಾ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು ಅಥವಾ ಅರ್ಜಿಯನ್ನು ಯಾವ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು ಅಂಗೀಕರಿಸಲಾಗಿದೆಯೋ ಅಂಥ ಹೆಚ್ಚಿನ ಅಥವಾ ಅವುಗಳಿಂದ ಭಿನ್ನವಾದ ಷರತ್ತುಗಳಿಗೆ ಒಳಪಟ್ಟು ನೋಂದಾಯಿಸತಕ್ಕದ್ದೆಂದು ಸಮಾಧಾನ ಹೊಂದಿದರೆ

–ರಿಜಿಸ್ಟ್ರಾರನು ಬಯಸಿದಲ್ಲಿ, ಅರ್ಜಿದಾರನ ಅಹವಾಲನ್ನು ಆಲಿಸಿದ ನಂತರ ಅಂಗೀಕಾರವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಅರ್ಜಿಯನ್ನು ಅಂಗೀಕರಿಸಿಲ್ಲದಿದ್ದರೆ ಹೇಗೋ ಹಾಗೆ ಮುಂದುವರಿಯಬಹುದು.

**13. ಅರ್ಜಿಯ ಜಾಹೀರಾತು.–** (1) ಭೌಗೋಳಿಕ ಸಂಕೇತದ ನೋಂದಣಿಗಾಗಿ ಅರ್ಜಿಯನ್ನು ಸಂಪೂರ್ಣ ವಾಗಿಯಾಗಲಿ ಅಥವಾ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟಾಗಲಿ ಅಂಗೀಕರಿಸಿದಾಗ ರಿಜಿಸ್ಟ್ರಾರನು ಅಂಗೀಕರಿಸಿದ ನಂತರ ಸಾಧ್ಯವಾದಷ್ಟು ಬೇಗನೆ, ಅದನ್ನು ಯಾವ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು ಅಂಗೀಕರಿಸಲಾಗಿದೆಯೋ ಅಂಥ ಷರತ್ತುಗಳು ಅಥವಾ ಪರಿಮಿತಿಗಳು, ಯಾವುವಾದರು ಇದ್ದರೆ, ಅವುಗಳೊಂದಿಗೆ ಅಂಗೀಕರಿಸಿರುವಂತೆ ಅರ್ಜಿಯನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಜಾಹೀರುಗೊಳಿಸಿ ಅದನ್ನು ಅಂಗೀಕರಿಸುವ ವ್ಯವಸ್ಥೆ ಮಾಡತಕ್ಕದ್ದು.

(2) ಒಂದು ಅರ್ಜಿಯನ್ನು ಜಾಹೀರುಗೊಳಿಸಿದ ನಂತರ, –

(ಎ) ಅರ್ಜಿಯಲ್ಲಿನ ತಪ್ಪನ್ನು ಸರಿಪಡಿಸಿರುವಲ್ಲಿ; ಅಥವಾ

(ಬಿ) ಅರ್ಜಿಯನ್ನು 15ನೇ ಪ್ರಕರಣದ ಮೇರೆಗೆ ತಿದ್ದುಪಡಿ ಮಾಡಲು ಅನುಮತಿಸಿರುವಲ್ಲಿ

– ರಿಜಿಸ್ಟ್ರಾರನು, ತನ್ನ ವಿವೇಚನಾನುಸಾರ ಅರ್ಜಿಯನ್ನು ಪುನಃ ಜಾಹೀರುಗೊಳಿಸುವಂತೆ ಮಾಡಬಹುದು ಅಥವಾ ಅರ್ಜಿಯನ್ನು ಪುನಃ ಜಾಹೀರುಗೊಳಿಸುವ ಬದಲು ಅರ್ಜಿಯಲ್ಲಿ ಸರಿಪಡಿಸಿರುವ ವಿಷಯವನ್ನು ಗೊತ್ತುಪಡಿಸಲಾದ ರೀತಿಯಲ್ಲಿ ಪ್ರಕಟಿಸಬಹುದು.

**14. ನೋಂದಣಿಗೆ ವಿರೋಧ.–** (1) ಯಾರೇ ವ್ಯಕ್ತಿಯು, ನೋಂದಣಿಗಾಗಿ ಅರ್ಜಿಯನ್ನು ಜಾಹೀರುಗೊಳಿಸಿದ ಅಥವಾ ಪುನಃ ಜಾಹೀರುಗೊಳಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಅಥವಾ ನಿಯಮಿಸಬಹುದಾದಂಥ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಲಾದ ಅರ್ಜಿಯ ಮತ್ತು ಶುಲ್ಕ ಸಂದಾಯದ ಮೇಲೆ ಅವನು ಅನುಮತಿಸುವಂತೆ ಒಟ್ಟು ಒಂದು ತಿಂಗಳು ಮೀರದ, ಅಂಥ ಹೆಚ್ಚಿನ ಅವಧಿಯೊಳಗೆ ನೋಂದಣಿಯನ್ನು ವಿರೋಧಿಸುವ ಲಿಖಿತ ನೋಟೀಸನ್ನು ಗೊತ್ತುಪಡಿಸಲಾದ ರೀತಿಯಲ್ಲಿ ರಿಜಿಸ್ಟ್ರಾರ್‌ನಿಗೆ ಸಲ್ಲಿಸಬಹುದು.

(2) ರಿಜಿಸ್ಟ್ರಾರನು, ನೋಂದಣಿಯ ಅರ್ಜಿದಾರನಿಗೆ ನೋಟೀಸಿನ ಒಂದು ಪ್ರತಿಯನ್ನು ಜಾರಿ ಮಾಡತಕ್ಕದ್ದು ಮತ್ತು ವಿರೋಧದ ನೋಟೀಸಿನ ಅಂಥ ಪ್ರತಿಯನ್ನು ಅರ್ಜಿದಾರನು ಸ್ವೀಕರಿಸಿದ ಎರಡು ತಿಂಗಳೊಳಗೆ ಅರ್ಜಿದಾರನು ತನ್ನ ಅರ್ಜಿಯನ್ನು ಅವನು ಯಾವ ಆಧಾರಗಳ ಮೇಲೆ ಅವಲಂಬಿಸಿರುವನೆಂಬುದರ ಕಾರಣಗಳ ಪ್ರತಿ–ವಿವರಣೆಯನ್ನು ನಿಯಮಿಸಲಾದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು ಮತ್ತು ಅರ್ಜಿದಾರನು ಹಾಗೆ ಮಾಡದಿದ್ದರೆ, ಅವನು ತನ್ನ ಅರ್ಜಿಯನ್ನು ಬಿಟ್ಟುಕೊಟ್ಟಿದ್ದಾನೆಂದು ಭಾವಿಸತಕ್ಕದ್ದು.

(3) ಅರ್ಜಿದಾರನು ಅಂಥ ಪ್ರತಿ–ವಿವರಣೆಯನ್ನು ಕಳುಹಿಸಿದ್ದರೆ, ರಿಜಿಸ್ಟ್ರಾರನು ವಿರೋಧದ ನೋಟೀಸನ್ನು ನೀಡಿರುವ ವ್ಯಕ್ತಿಗೆ ಅದರ ಒಂದು ಪ್ರತಿಯನ್ನು ಜಾರಿ ಮಾಡತಕ್ಕದ್ದು.

(4) ಪ್ರತ್ಯರ್ಜಿದಾರನು ಮತ್ತು ಅರ್ಜಿದಾರನು ಯಾವ ಸಾಕ್ಷಿಯ ಮೇಲೆ ಅವಲಂಬಿಸಿರುವನೋ ಅದನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಸಮಯದೊಳಗೆ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು, ಮತ್ತು ಅವರು ಇಚ್ಛಿಸಿದರೆ, ಅವರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ರಿಜಿಸ್ಟ್ರಾರನು ಒಂದು ಅವಕಾಶ ನೀಡತಕ್ಕದ್ದು.

(5) ರಿಜಿಸ್ಟ್ರಾರನು ಅಗತ್ಯವೆನಿಸಿದಲ್ಲಿ, ಪಕ್ಷಕಾರರ ಅಹವಾಲನ್ನು ಆಲಿಸಿದ ತರುವಾಯ ಮತ್ತು ಸಾಕ್ಷಿಯನ್ನು ಪರಿಗಣಿಸಿದ ತರುವಾಯ ನೋಂದಣಿಯನ್ನು, ಷರತ್ತುಗಳು ಅಥವಾ ನಿರ್ಬಂಧಗಳು ಯಾವುದಾದರು ಇದ್ದರೆ, ಅವುಗಳಿಗೆ ಒಳಪಟ್ಟು ಅನುಮತಿಸಬೇಕೇ ಎಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಪ್ರತ್ಯರ್ಜಿದಾರನನ್ನು ಅವಲಂಬಿಸಿರಲಿ ಅಥವಾ ಇಲ್ಲದಿರಲಿ ಎಂಬ ಆಕ್ಷೇಪಣೆಯ ಒಂದು ಆಧಾರವನ್ನು ಗಣನೆಗೆ ತೆಗೆದುಕೊಳ್ಳಬಹುದು.

(6) ವಿರೋಧದ ನೋಟೀಸನ್ನು ನೀಡುವ ವ್ಯಕ್ತಿಯು ಅಥವಾ ಅಂಥ ನೋಟೀಸಿನ ಪ್ರತಿಯನ್ನು ಸ್ವೀಕರಿಸಿದ ತರುವಾಯ ಪ್ರತಿ ವಿವರಣೆ ಕಳುಹಿಸುವ ಅರ್ಜಿದಾರನು ಭಾರತದಲ್ಲಿ ವಾಸಿಸದೆ ಇರುವ ಅಥವಾ ವ್ಯವಹಾರ ನಡೆಸದೆ ಇರುವ ಸಂದರ್ಭದಲ್ಲಿ ರಿಜಿಸ್ಟ್ರಾರನು ತನ್ನ ಮುಂದಿರುವ ವ್ಯವಹರಣೆಯ ಖರ್ಚುಗಳಿಗಾಗಿ ಭದ್ರತೆಯನ್ನು ನೀಡುವಂತೆ ಅವನನ್ನು ಅಗತ್ಯಪಡಿಸಬಹುದು ಮತ್ತು ಅಂಥ ಭದ್ರತೆಯನ್ನು ಯುಕ್ತವಾಗಿ ನೀಡಲು ತಪ್ಪಿದಲ್ಲಿ, ವಿರೋಧವನ್ನಾಗಲಿ ಅಥವಾ ಸಂದರ್ಭಾನುಸಾರ ಅರ್ಜಿಯನ್ನಾಗಲಿ ಬಿಟ್ಟುಕೊಡಲಾಗಿದೆಯೆಂದು ಭಾವಿಸಬಹುದು.

(7) ರಿಜಿಸ್ಟ್ರಾರನು, ಕೋರಿಕೆಯ ಮೇಲೆ, ಅವನು ನ್ಯಾಯಸಮ್ಮತವೆಂದು ಭಾವಿಸುವಂತಹ ನಿಬಂಧನೆಗಳ ಮೇಲೆ ವಿರೋಧದ ನೋಟೀಸಿನಲ್ಲಿಯ ಅಥವಾ ಪ್ರತಿ ವಿವರಣೆಯಲ್ಲಿಯ ಯಾವುದೇ ತಪ್ಪನ್ನು ಸರಿಪಡಿಸಲು ಅಥವಾ ಅದನ್ನು ತಿದ್ದುಪಡಿ ಮಾಡಲು ಅನುಮತಿಸಬಹುದು.

**15. ಸರಿಪಡಿಸುವಿಕೆ ಮತ್ತು ತಿದ್ದುಪಡಿ.–** ರಿಜಿಸ್ಟ್ರಾರನು, 11ನೇ ಪ್ರಕರಣದ ಮೇರೆಗೆ ನೋಂದಣಿಗೆ ಅರ್ಜಿಯನ್ನು ಅಂಗೀಕರಿಸುವ ಮುಂಚೆಯಾಗಲಿ ಅಥವಾ ಅಂಗೀಕರಿಸಿದ ಆ ತರುವಾಯವಾಗಲಿ ಯಾವುದೇ ಸಮಯದಲ್ಲಿ ತಾನು ನ್ಯಾಯಸಮ್ಮತವೆಂದು ಭಾವಿಸುವಂಥ ನಿಬಂಧನೆಗಳ ಮೇಲೆ, ಅರ್ಜಿಯಲ್ಲಿನ ಅಥವಾ ಅದರ ಸಂಬಂಧದಲ್ಲಿಯ ಯಾವುದೇ ತಪ್ಪಿನ ಸರಿಪಡಿಸುವಿಕೆಗೆ ಅನುಮತಿಸಬಹುದು ಅಥವಾ ಅರ್ಜಿಯ ತಿದ್ದುಪಡಿಯನ್ನು ಅನುಮತಿಸಬಹುದು:

ಪರಂತು, ಅರ್ಜಿಯು, ಎರಡು ಅಥವಾ ಹೆಚ್ಚಿನ ಅರ್ಜಿಗಳಾಗಿ ವಿಭಾಗಗೊಳ್ಳುವ ಹಾಗೆ 11ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಂಥ ಒಂದೇ ಅರ್ಜಿಗೆ ತಿದ್ದುಪಡಿಯನ್ನು ಮಾಡಿದರೆ ಮೊದಲ ಅರ್ಜಿಯನ್ನು ಸಲ್ಲಿಸುವ ದಿನಾಂಕವನ್ನೇ ಹಾಗೆ ವಿಭಾಗಗೊಂಡ ಅರ್ಜಿಗಳನ್ನು ಸಲ್ಲಿಸಿರುವ ದಿನಾಂಕವೆಂಬುದಾಗಿ ಭಾವಿಸತಕ್ಕದ್ದು.

**16. ನೋಂದಣಿ.–** (1) 12ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಭೌಗೋಳಿಕ ಸಂಕೇತದ ನೋಂದಣಿಯ ಅರ್ಜಿಯನ್ನು ಅಂಗೀಕರಿಸಿದಾಗ ಮತ್ತು,-

(ಎ) ಅರ್ಜಿಯನ್ನು ವಿರೋಧಿಸಿರದಿದ್ದರೆ ಮತ್ತು ವಿರೋಧದ ನೋಟೀಸಿನ ಸಮಯವು ಮುಕ್ತಾಯ ವಾಗಿದ್ದರೆ; ಅಥವಾ

(ಬಿ) ಅರ್ಜಿಯನ್ನು ವಿರೋಧಿಸಿದ್ದರೆ ಮತ್ತು ವಿರೋಧವನ್ನು ಅರ್ಜಿದಾರರ ಪರವಾಗಿ ತೀರ್ಮಾನಿಸಿದ್ದರೆ

– ರಿಜಿಸ್ಟ್ರಾರನು, ಕೇಂದ್ರ ಸರ್ಕಾರವು ಅನ್ಯಥಾ ನಿರ್ದೇಶಿಸಿದ್ದ ಹೊರತು, ಸದರಿ ಭೌಗೋಳಿಕ ಸಂಕೇತವನ್ನು ಮತ್ತು ಅರ್ಜಿಯಲ್ಲಿ ನಮೂದಿಸಿರುವ ಅಧಿಕೃತ ಬಳಕೆದಾರರು ಯಾರಾದರು ಇದ್ದರೆ, ಅವರನ್ನು ನೋಂದಾಯಿಸತಕ್ಕದ್ದು ಮತ್ತು ಹಾಗೆ ಭೌಗೋಳಿಕ ಸಂಕೇತವನ್ನು ಮತ್ತು ಅಧಿಕೃತ ಬಳಕೆದಾರರನ್ನು ನೋಂದಾಯಿಸಿದಾಗ ಸದರಿ ಅರ್ಜಿಯನ್ನು ಸಲ್ಲಿಸುವ ದಿನಾಂಕದಂದೇ ನೋಂದಾಯಿಸತಕ್ಕದ್ದು ಮತ್ತು ಆ ದಿನಾಂಕವನ್ನು 84ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ನೋಂದಣಿಯ ದಿನಾಂಕವೆಂದು ಪರಿಗಣಿಸತಕ್ಕದ್ದು.

(2) ಭೌಗೋಳಿಕ ಸಂಕೇತಗಳ ನೋಂದಣಿಯ ನಂತರ ರಿಜಿಸ್ಟ್ರಾರನು, ಭೌಗೋಳಿಕ ಸಂಕೇತದೊಂದಿಗೆ ನೋಂದಾಯಿಸಲಾದ ಪ್ರತಿಯೊಬ್ಬ ಅರ್ಜಿದಾರನಿಗೆ ಮತ್ತು ಅಧಿಕೃತ ಬಳಕೆದಾರನಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಭೌಗೋಳಿಕ ಸಂಕೇತಗಳ ನೋಂದಣಿ ಕಚೇರಿಯ ಮೊಹರಿನೊಂದಿಗೆ ಆ ಸಂಬಂಧದಲ್ಲಿ ಒಂದು ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(3) ಭೌಗೋಳಿಕ ಸಂಕೇತದ ನೋಂದಣಿಯನ್ನು, ಅರ್ಜಿದಾರನ ಯಾವುದೇ ತಪ್ಪಿನ ಕಾರಣದಿಂದಾಗಿ ಅರ್ಜಿಯ ದಿನಾಂಕದಿಂದ ಹನ್ನೆರಡು ತಿಂಗಳೊಳಗಾಗಿ ಪೂರ್ಣಗೊಳಿಸದಿದ್ದಲ್ಲಿ, ರಿಜಿಸ್ಟ್ರಾರನು, ನಿಯಮಿಸಲಾದ ರೀತಿಯಲ್ಲಿ ಅರ್ಜಿದಾರನಿಗೆ ನೋಟೀಸು ನೀಡಿದ ತರುವಾಯ, ಆ ನೋಟೀಸಿನಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಿರುವ ಸಮಯದೊಳಗೆ ಅದನ್ನು ಪೂರ್ಣಗೊಳಿಸಿದ ಹೊರತು ಆ ಅರ್ಜಿಯನ್ನು ಬಿಟ್ಟುಬಿಡಲಾಗಿದೆಯೆಂದು ಪರಿಗಣಿಸಬಹುದು.

(4) ರಿಜಿಸ್ಟ್ರಾರನು, ಲಿಪಿಕ ತಪ್ಪನ್ನು ಅಥವಾ ಸ್ಪಷ್ಟ ದೋಷವನ್ನು ಸರಿಪಡಿಸುವ ಉದ್ದೇಶಕ್ಕಾಗಿ ರಿಜಿಸ್ಟರನ್ನು ಅಥವಾ ನೋಂದಣಿಯ ಪ್ರಮಾಣ ಪತ್ರವನ್ನು ತಿದ್ದುಪಡಿ ಮಾಡಬಹುದು.

**17. ಅಧಿಕೃತ ಬಳಕೆದಾರರಾಗಿ ನೋಂದಾಯಿಸಲು ಅರ್ಜಿ.–** (1) 16ನೇ ಪ್ರಕರಣದ ಮೇರೆಗೆ ಯಾವ ಸರಕುಗಳ ಸಂಬಂಧದಲ್ಲಿ ಭೌಗೋಳಿಕ ಸಂಕೇತವನ್ನು ನೋಂದಾಯಿಸಲಾಗಿದೆಯೋ ಆ ಸರಕುಗಳ ಉತ್ಪಾದಕರೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯು, ಅಂಥ ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನಾಗಿ ನೋಂದಾಯಿಸಿಕೊಳ್ಳುವುದಕ್ಕಾಗಿ ಗೊತ್ತುಪಡಿಸಲಾದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಲಿಖಿತ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಗೆ, ಅಂಥ ವ್ಯಕ್ತಿಯು ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸರಕುಗಳ ಉತ್ಪಾದಕನಾಗಿದ್ದಾನೆಯೇ ಎಂಬುದನ್ನು ನಿರ್ಧರಿಸಲು ರಿಜಿಸ್ಟ್ರಾರನು ಗೊತ್ತುಪಡಿಸಬಹುದಾದಂತಹ ಮತ್ತು ಅಗತ್ಯಪಡಿಸಬಹುದಾದಂತಹ ವಿವರಣೆ ಮತ್ತು ವಿಷಯಗಳ ದಸ್ತಾವೇಜುಗಳನ್ನು ಲಗತ್ತಿಸಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡತಕ್ಕದ್ದು.

(3) ಈ ಕೆಳಕಂಡವುಗಳಿಗೆ ಸಂಬಂಧಿಸಿದ ಈ ಅಧ್ಯಾಯದ ಉಪಬಂಧಗಳು,-

(ಎ) ಅರ್ಜಿಯನ್ನು ಸಲ್ಲಿಸುವುದು ಮತ್ತು ಪರೀಕ್ಷಿಸುವುದು;

(ಬಿ) ನೋಂದಣಿಯ ನಿರಾಕರಣೆ ಮತ್ತು ಅಂಗೀಕಾರ;

(ಸಿ) ಅರ್ಜಿಯ ಅಂಗೀಕಾರವನ್ನು ಹಿಂದಕ್ಕೆ ಪಡೆಯುವುದು;

(ಡಿ) ಅರ್ಜಿಯನ್ನು ಜಾಹೀರುಗೊಳಿಸುವುದು;

(ಇ) ನೋಂದಣಿಯನ್ನು ವಿರೋಧಿಸುವುದು;

(ಎಫ್) ಅರ್ಜಿಯಲ್ಲಿನ ತಪ್ಪನ್ನು ಸರಿಪಡಿಸುವುದು ಅಥವಾ ಅರ್ಜಿಯನ್ನು ತಿದ್ದುಪಡಿ ಮಾಡುವುದು; ಮತ್ತು

(ಜಿ) ನೋಂದಾಯಿಸುವುದು

– (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ಮತ್ತು ಅಧಿಕೃತ ಬಳಕೆದಾರರ ನೋಂದಣಿಯ ಸಂಬಂಧದಲ್ಲಿ ನೋಂದಣಿ ಅರ್ಜಿಗೆ ಮತ್ತು ಭೌಗೋಳಿಕ ಸಂಕೇತದ ನೋಂದಣಿಗೆ ಅನ್ವಯಿಸುವ ರೀತಿಯಲ್ಲಿಯೇ ಅನ್ವಯಿಸತಕ್ಕದ್ದು.

**18. ನೋಂದಣಿಯ ಅವಧಿ, ನವೀಕರಣ, ತೆಗೆದು ಹಾಕುವುದು ಮತ್ತು ಪೂರ್ವಸ್ಥಿತಿಗೆ ತರುವುದು.–** (1) ಭೌಗೋಳಿಕ ಸಂಕೇತದ ನೋಂದಣಿಯು ಹತ್ತು ವರ್ಷಗಳ ಅವಧಿಯವರೆಗೆ ಇರತಕ್ಕದ್ದು, ಆದರೆ ಅದನ್ನು ಈ ಪ್ರಕರಣದ ಉಪಬಂಧಗಳಿಗನುಸಾರ ಕಾಲ ಕಾಲಕ್ಕೆ ನವೀಕರಿಸಬಹುದು.

(2) ಅಧಿಕೃತ ಬಳಕೆದಾರನ ನೋಂದಣಿಯು ಹತ್ತು ವರ್ಷಗಳ ಅವಧಿ ಅಥವಾ ಅಧಿಕೃತ ಬಳಕೆದಾರನನ್ನು ಯಾವ ಭೌಗೋಳಿಕ ಸಂಕೇತದ ಸಂಬಂಧದಲ್ಲಿ ನೋಂದಾಯಿಸಲಾಗಿದೆಯೋ ಆ ನೋಂದಣಿಯು ಮುಕ್ತಾಯವಾಗುವ ದಿನಾಂಕದವರೆಗಿನ ಅವಧಿ – ಇವೆರಡರಲ್ಲಿ ಯಾವುದು ಮುಂಚಿತವೋ ಆ ಅವಧಿಯವರೆಗೆ ಇರತಕ್ಕದ್ದು.

(3) ನೋಂದಾಯಿತ ಮಾಲೀಕನು ಅಥವಾ ಅಧಿಕೃತ ಬಳಕೆದಾರನು ನಿಯಮಿಸಲಾದ ರೀತಿಯಲ್ಲಿ ಮತ್ತು ನಿಯಮಿಸಲಾದ ಅವಧಿಯೊಳಗೆ ಮತ್ತು ನಿಯಮಿಸಲಾದ ಫೀಜಿನ ಸಂದಾಯಕ್ಕೆ ಒಳಪಟ್ಟು ಅರ್ಜಿಯನ್ನು ಸಲ್ಲಿಸಿದ ಮೇಲೆ ರಿಜಿಸ್ಟ್ರಾರನು, ಸಂದರ್ಭಾನುಸಾರ ಭೌಗೋಳಿಕ ಸಂಕೇತದ ಅಥವಾ ಅಧಿಕೃತ ಬಳಕೆದಾರರ, ನೋಂದಣಿಯನ್ನು ಸಂದರ್ಭಾನುಸಾರ ಮೂಲ ನೋಂದಣಿಯ ಅಥವಾ ನೋಂದಣಿಯ ಕೊನೆ ನವೀಕರಣ ಮುಕ್ತಾಯಗೊಂಡ ದಿನಾಂಕದಿಂದ (ಈ ಪ್ರಕರಣದಲ್ಲಿ ಆ ದಿನಾಂಕವು ಕೊನೆ ನೋಂದಣಿಯ ಮುಕ್ತಾಯದ ದಿನಾಂಕವೆಂದು ಉಲ್ಲೇಖಿತವಾಗಿದೆ) ಹತ್ತು ವರ್ಷಗಳ ಅವಧಿಗಾಗಿ ನವೀಕರಿಸತಕ್ಕದ್ದು.

(4) ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕೆದಾರನ ಕೊನೆಯ ನೋಂದಣಿ ಮುಕ್ತಾಯವಾಗುವ ಮುಂಚೆ ಗೊತ್ತುಪಡಿಸಲಾದ ಸಮಯದಲ್ಲಿ, ರಿಜಿಸ್ಟ್ರಾರನು ನೋಂದಾಯಿತ ಮಾಲೀಕನಿಗೆ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕದಾರನಿಗೆ ಮುಕ್ತಾಯದ ದಿನಾಂಕ ಮತ್ತು ಫೀಜಿನ ಸಂದಾಯ ಮತ್ತು ಅನ್ಯಥಾ ಯಾವ ಷರತ್ತುಗಳ ಮೇಲೆ ನೋಂದಣಿಯ ನವೀಕರಣವನ್ನು ಪಡೆಯಬಹುದೋ ಅವುಗಳ ಬಗ್ಗೆ ನಿಯಮಿಸಿದ ರೀತಿಯಲ್ಲಿ ನೋಟೀಸನ್ನು ಕಳಿಸತಕ್ಕದ್ದು ಮತ್ತು ಆ ಕುರಿತು ಗೊತ್ತುಪಡಿಸಲಾದ ಸಮಯದ ಅವಧಿ ಮುಕ್ತಾಯವಾದಾಗ, ಆ ಷರತ್ತುಗಳನ್ನು ಯುಕ್ತವಾಗಿ ಪಾಲಿಸದಿದ್ದರೆ, ರಿಜಿಸ್ಟ್ರಾರನು ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ ಅಧಿಕೃತ ಬಳಕೆದಾರನನ್ನು ರಿಜಿಸ್ಟರಿನಿಂದ ತೆಗೆದುಹಾಕಬಹುದು:

ಪರಂತು, ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕೆದಾರನ ಕೊನೆಯ ನೋಂದಣಿಯು ಮುಕ್ತಾಯಗೊಂಡ ಅಂದಿನಿಂದ ಆರು ತಿಂಗಳೊಳಗೆ ನಿಯಮಿಸಲಾದ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ನಿಯಮಿಸಲಾದ ಫೀಜು ಮತ್ತು ಸರ್‌ಚಾರ್ಜು ಸಂದಾಯ ಮಾಡಲಾಗಿದ್ದರೆ, ರಿಜಿಸ್ಟ್ರಾರನು ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕೆದಾರನನ್ನು, ರಿಜಿಸ್ಟರಿನಿಂದ ತೆಗೆದುಹಾಕತಕ್ಕದ್ದಲ್ಲ ಮತ್ತು ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ ಅಧಿಕೃತ ಬಳಕೆದಾರನ ನೋಂದಣಿಯನ್ನು (3)ನೇ ಉಪಪ್ರಕರಣದ ಮೇರೆಗೆ ಹತ್ತು ವರ್ಷಗಳ ಅವಧಿಗಾಗಿ ನವೀಕರಿಸತಕ್ಕದ್ದು.

(5) ನಿಯಮಿಸಲಾದ ಫೀಜು ಸಂದಾಯ ಮಾಡದಿರುವುದಕ್ಕಾಗಿ ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕೆದಾರನನ್ನು ರಿಜಿಸ್ಟರಿನಿಂದ ತೆಗೆದು ಹಾಕಿರುವಲ್ಲಿ, ರಿಜಿಸ್ಟ್ರಾರನು ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕೆದಾರನನ್ನು ಕೊನೆಯ ನೋಂದಣಿಯು ಮುಕ್ತಾಯಗೊಂಡ ಆರು ತಿಂಗಳ ನಂತರ ಮತ್ತು ಒಂದು ವರ್ಷದ ಒಳಗೆ, ನಿಯಮಿಸಲಾದ ನಮೂನೆಯಲ್ಲಿನ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ಮೇಲೆ, ಪೂರ್ವಸ್ಥಿತಿಗೆ ತರುವುದು ನ್ಯಾಯಸಮ್ಮತವೆಂದು ಮನಗಂಡರೆ,

ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕೆದಾರನನ್ನು ರಿಜಿಸ್ಟರಿಗೆ ಸೇರಿಸತಕ್ಕದ್ದು ಮತ್ತು ಭೌಗೋಳಿಕ ಸಂಕೇತ ಅಥವಾ ಸಂದರ್ಭಾನುಸಾರ, ಅಧಿಕೃತ ಬಳಕೆದಾರನ ನೋಂದಣಿಯನ್ನು, ಸಾಮಾನ್ಯವಾಗಿಯಾಗಲಿ ಅಥವಾ ವಿಧಿಸುವುದಕ್ಕೆ ಯೋಗ್ಯವೆಂದು ಭಾವಿಸುವಂಥ ಷರತ್ತು ಅಥವಾ ನಿಬಂಧನೆಗೊಳಪಟ್ಟಾಗಲಿ ಕೊನೆಯ ನೋಂದಣಿಯ ಮುಕ್ತಾಯದಿಂದ ಹತ್ತು ವರ್ಷಗಳ ಅವಧಿಗಾಗಿ ನವೀಕರಿಸತಕ್ಕದ್ದು.

**19. ನವೀಕರಣದ ಫೀಜನ್ನು ಸಂದಾಯ ಮಾಡಲು ತಪ್ಪಿದುದಕ್ಕೆ ರಿಜಿಸ್ಟರಿನಿಂದ ತೆಗೆದುದರ ಪರಿಣಾಮ.**–ನವೀಕರಣದ ಫೀಜಿನ ಸಂದಾಯ ಮಾಡಲು ತಪ್ಪಿದುದಕ್ಕಾಗಿ ರಿಜಿಸ್ಟರಿನಿಂದ ಭೌಗೋಳಿಕ ಸಂಕೇತವನ್ನು ತೆಗೆದುಹಾಕಿರುವಲ್ಲಿ, ಹಾಗೆ ತೆಗೆದುಹಾಕಿದ ದಿನಾಂಕದ ನಂತರ ಮುಂದಿನ ಒಂದು ವರ್ಷದ ಅವಧಿಯಲ್ಲಿ ಮತ್ತೊಂದು ಭೌಗೋಳಿಕ ಸಂಕೇತದ ನೋಂದಣಿಗಾಗಿ ಯಾವುದೇ ಅರ್ಜಿ ಸಲ್ಲಿಸುವ ಉದ್ದೇಶವೇನೇ ಇದ್ದರೂ, ನ್ಯಾಯಾಧಿಕರಣವು,–

(ಎ) ಅದನ್ನು ತೆಗೆದುಹಾಕಿದ ನಿಕಟಪೂರ್ವದ ಎರಡು ವರ್ಷಗಳೊಳಗಾಗಿ ಭೌಗೋಳಿಕ ಸಂಕೇತದ ವಾಸ್ತವಿಕ ವ್ಯಾಪಾರ ಬಳಕೆ ಆಗಿಲ್ಲವೆಂದು; ಅಥವಾ

(ಬಿ) ತೆಗೆದುಹಾಕಲಾದ ಭೌಗೋಳಿಕ ಸಂಕೇತದ ಯಾವುದೇ ಹಿಂದಿನ ಬಳಕೆಯ ಕಾರಣದಿಂದ ನೋಂದಣಿ ಅರ್ಜಿಯ ವಿಷಯವಾಗಿರುವ ಭೌಗೋಳಿಕ ಸಂಕೇತದ ಬಳಕೆಯಿಂದ ಯಾವುದೇ ಮೋಸ ಅಥವಾ ಗೊಂದಲ ಉಂಟಾಗಲಿಕ್ಕಿಲ್ಲವೆಂದು

– ಮನಗಂಡ ಹೊರತು, ಈಗಾಗಲೇ ರಿಜಿಸ್ಟರಿನಲ್ಲಿ ಭೌಗೋಳಿಕ ಸಂಕೇತವು ಇದೆಯೆಂಬುದಾಗಿ ಭಾವಿಸತಕ್ಕದ್ದು.

## ಅಧ್ಯಾಯ – IV

## ನೋಂದಣಿಯ ಪರಿಣಾಮ

**20. ನೋಂದಣಿಯಾಗದ ಭೌಗೋಳಿಕ ಸಂಕೇತದ ಅತಿಲಂಘನೆಗಾಗಿ ಯಾವುದೇ ಕ್ರಮವಿಲ್ಲದಿರುವಿಕೆ.**– (1) ಯಾರೇ ವ್ಯಕ್ತಿಯು ಒಂದು ನೋಂದಾಯಿಸಿರದ ಭೌಗೋಳಿಕ ಸಂಕೇತದ ಅತಿಲಂಘನೆಯನ್ನು ತಡೆಯುವ ಅಥವಾ ಅದಕ್ಕಾಗಿ ನಷ್ಟಪರಿಹಾರವನ್ನು ವಸೂಲು ಮಾಡುವ ಯಾವುದೇ ವ್ಯವಹರಣೆಯನ್ನು ಹೂಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿರುವುದು ಯಾವುದೂ, ಮತ್ತೊಬ್ಬ ವ್ಯಕ್ತಿಯ ಸರಕುಗಳನ್ನು ಮೋಸದಿಂದ ಮಾರುವುದಕ್ಕಾಗಿ ಅಥವಾ ಅದರ ಸಂಬಂಧದ ಪರಿಹಾರಗಳಿಗಾಗಿ ಯಾರೇ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವ ಹಕ್ಕಿನ ಮೇಲೆ ಪರಿಣಾಮ ಬೀರುತ್ತದೆಂದು ಭಾವಿಸತಕ್ಕದ್ದಲ್ಲ.

**21. ನೋಂದಣಿಯಿಂದ ಪ್ರದತ್ತವಾದ ಹಕ್ಕುಗಳು.**– (1) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಭೌಗೋಳಿಕ ಸಂಕೇತದ ನೋಂದಣಿಯು ಸಿಂಧುವಾಗಿದ್ದರೆ, ಈ ಕೆಳಕಂಡ ಹಕ್ಕುಗಳನ್ನು ನೀಡತಕ್ಕದ್ದು,–

(ಎ) ಭೌಗೋಳಿಕ ಸಂಕೇತದ ನೋಂದಾಯಿತ ಮಾಲೀಕನಿಗೆ ಮತ್ತು ಅದರ ಅಧಿಕೃತ ಬಳಕೆದಾರ ಅಥವಾ ಬಳಕೆದಾರರಿಗೆ ಈ ಅಧಿನಿಯಮದಿಂದ ಉಪಬಂಧಿಸಿದ ರೀತಿಯಲ್ಲಿ ಭೌಗೋಳಿಕ ಸಂಕೇತದ ಉಲ್ಲಂಘನೆಯ ಸಂಬಂಧದಲ್ಲಿ ಪರಿಹಾರ ಪಡೆಯುವ ಹಕ್ಕು;

(ಬಿ) ಅದರ ಅಧಿಕೃತ ಬಳಕೆದಾರನಿಗೆ ಯಾವ ಸರಕುಗಳ ಸಂಬಂಧದಲ್ಲಿ ಭೌಗೋಳಿಕ ಸಂಕೇತವನ್ನು ನೋಂದಾಯಿಸಲಾಗಿದೆಯೋ ಅವುಗಳಿಗೆ ಸಂಬಂಧಿಸಿದಂತೆ ಭೌಗೋಳಿಕ ಸಂಕೇತವನ್ನು ಸಂಪೂರ್ಣವಾಗಿ ಬಳಸುವ ಹಕ್ಕು.

(2) (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನೀಡಲಾದ ಭೌಗೋಳಿಕ ಸಂಕೇತದ ಬಳಕೆಯ ಅನನ್ಯ ಹಕ್ಕು, ಯಾವ ಷರತ್ತು ಮತ್ತು ಪರಿಮಿತಿಗೆ ನೋಂದಣಿಯು ಒಳಪಟ್ಟಿರುವುದೋ ಅಂಥ ಷರತ್ತು ಮತ್ತು ಪರಿಮಿತಿಗೆ ಒಳಪಟ್ಟಿರತಕ್ಕದ್ದು.

(3) ಒಂದೇ ವಿಧವಾಗಿರುವ ಅಥವಾ ಬಹುಮಟ್ಟಿಗೆ ಪರಸ್ಪರ ಒಂದನ್ನೊಂದು ಹೋಲುವಂತಿರುವ ಭೌಗೋಳಿಕ ಸಂಕೇತಗಳನ್ನು ಬಳಸುವ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಅಧಿಕೃತ ಬಳಕೆದಾರರಾಗಿರುವಲ್ಲಿ, ಆ ಯಾವುದೇ ಭೌಗೋಳಿಕ

ಸಂಕೇತಗಳನ್ನು ಬಳಸುವ ಸಂಪೂರ್ಣ ಹಕ್ಕನ್ನು (ಅವರವರ ಹಕ್ಕುಗಳು ರಿಜಿಸ್ಟರಿನಲ್ಲಿ ನಮೂದಾಗಿರುವ ಯಾವುವೇ ಷರತ್ತುಗಳು ಅಥವಾ ಪರಿಮಿತಿಗಳಿಗೆ ಒಳಪಡುವಷ್ಟರ ಮಟ್ಟಿಗೆ ಹೊರತು) ಕೇವಲ ಭೌಗೋಳಿಕ ಸಂಕೇತಗಳನ್ನು ನೋಂದಣಿ ಮಾಡಿಸಿದ್ದೇವೆ ಎಂಬ ಕಾರಣ ಮಾತ್ರದಿಂದಲೇ ಆ ವ್ಯಕ್ತಿಗಳು ಪರಸ್ಪರ ಅಂಥ ಇತರೆ ವ್ಯಕ್ತಿಯ ವಿರುದ್ಧ ಆರ್ಜಿಸಿದ್ದೇವೆಂದು ಭಾವಿಸತಕ್ಕದ್ದಲ್ಲ, ಆದರೆ, ಅಂಥ ಪ್ರತಿಯೊಬ್ಬ ವ್ಯಕ್ತಿಯೂ ಅನನ್ಯ ಅಧಿಕೃತ ಬಳಕೆದಾರನಾಗಿದ್ದರೆ ಹೇಗೋ ಹಾಗೆ ಇತರೆ ವ್ಯಕ್ತಿಗಳ ವಿರುದ್ಧ ಅನ್ಯಥಾ ಅವೇ ಹಕ್ಕುಗಳನ್ನು ಹೊಂದಿರತಕ್ಕದ್ದು.

**22. ನೋಂದಾಯಿತ ಭೌಗೋಳಿಕ ಸಂಕೇತಗಳ ಅತಿಲಂಘನೆ.–** (1) ಅಧಿಕೃತ ಬಳಕೆದಾರನಲ್ಲದ ಯಾರೇ ಒಬ್ಬ ವ್ಯಕ್ತಿಯು ನೋಂದಾಯಿತ ಭೌಗೋಳಿಕ ಸಂಕೇತವನ್ನು ಈ ಕೆಳಕಂಡ ರೀತಿಯಲ್ಲಿ ಬಳಸಿದಾಗ ಅದನ್ನು ಅತಿಲಂಘಿಸಿದಂತಾಗುತ್ತದೆ,–

(ಎ) ಯಾವುವೇ ಸರಕುಗಳ ಉತ್ಪಾದನೆಯ ಮೂಲವಲ್ಲದ ಬೇರೆ ಭೌಗೋಳಿಕ ಪ್ರದೇಶದಲ್ಲಿ ಅದು ಉತ್ಪಾದನೆಯಾಗಿದೆ ಎಂಬುದನ್ನು ತಿಳಿಸುವ ಅಥವಾ ಸೂಚಿಸುವುದರ ಮೂಲಕ ಆ ಸರಕುಗಳ ಭೌಗೋಳಿಕ ಮೂಲದ ಬಗ್ಗೆ ವ್ಯಕ್ತಿಗಳನ್ನು ತಪ್ಪು ದಾರಿಗೆಳೆಯುವಂತಿದ್ದು, ಅಂಥ ಸರಕುಗಳನ್ನು ಹೆಸರಿಸುವಾಗ ಅಥವಾ ಹಾಜರುಪಡಿಸುವಾಗ ಯಾವುದೇ ರೀತಿಯಲ್ಲಿ ಅಂಥ ಭೌಗೋಳಿಕ ಸಂಕೇತವನ್ನು ಬಳಸಿದಾಗ; ಅಥವಾ

(ಬಿ) ನೋಂದಾಯಿತ ಭೌಗೋಳಿಕ ಸಂಕೇತದ ಸಂಬಂಧದಲ್ಲಿ ಸರಕುಗಳನ್ನು ಮೋಸದಿಂದ ದಾಟಿಸುವುದೂ ಸೇರಿದಂತೆ ಅನುಚಿತ ಸ್ಪರ್ಧೆಗೆ ಇಳಿಯುವ ರೀತಿಯಲ್ಲಿ ಯಾವುದೇ ಭೌಗೋಳಿಕ ಸಂಕೇತವನ್ನು ಬಳಸಿದಾಗ.

**ವಿವರಣೆ 1.–** ಈ ಖಂಡದ ಉದ್ದೇಶಗಳಿಗಾಗಿ, "ಅನುಚಿತ ಸ್ಪರ್ಧೆಯ ಕೃತ್ಯ" ಎಂದರೆ ಕೈಗಾರಿಕಾ ಅಥವಾ ವಾಣಿಜ್ಯ ವಿಷಯಗಳಲ್ಲಿ ಪ್ರಾಮಾಣಿಕ ಪದ್ಧತಿಗೆ ವಿರುದ್ಧವಾದ ಸ್ಪರ್ಧೆಯ ಯಾವುದೇ ಕೃತ್ಯ.

**ವಿವರಣೆ 2.–** ಈ ಮುಂದಿನ ಕೃತ್ಯಗಳನ್ನು, ಎಂದರೆ:–

(i) ಸ್ಪರ್ಧಿಯ ಸಂಸ್ಥೆ, ಸರಕುಗಳು ಅಥವಾ ಕೈಗಾರಿಕಾ ಅಥವಾ ವಾಣಿಜ್ಯ ಚಟುವಟಿಕೆಗಳಲ್ಲಿ ಯಾವುದೇ ರೀತಿಯಿಂದಾಗಲಿ ಗೊಂದಲವನ್ನು ಉಂಟುಮಾಡುವಂಥ ಸ್ವರೂಪ ಹೊಂದಿರುವ ಎಲ್ಲಾ ಕೃತ್ಯಗಳು;

(ii) ಸ್ಪರ್ಧಿಯ ಸಂಸ್ಥೆ, ಸರಕುಗಳು ಅಥವಾ ಕೈಗಾರಿಕಾ ಅಥವಾ ವಾಣಿಜ್ಯ ಚಟುವಟಿಕೆಗಳಿಗೆ ಕಳಂಕ ತರುವಂಥ ಸ್ವರೂಪದ ವ್ಯಾಪಾರದಲ್ಲಿ ಸುಳ್ಳು ಆಪಾದನೆಗಳು;

(iii) ಸರಕುಗಳ ಸ್ವರೂಪ, ತಯಾರಿಕಾ ವಿಧಾನ, ಗುಣಲಕ್ಷಣ, ಅವರ ಉದ್ದೇಶದ ಸೂಕ್ತತೆ ಅಥವಾ ಪರಿಮಾಣ – ಇವುಗಳಿಗೆ ಸಂಬಂಧಿಸಿದಂತೆ ಜನರನ್ನು ತಪ್ಪು ದಾರಿಗೆಳೆಯುವ ಹಾಗೆ ವ್ಯಾಪಾರದಲ್ಲಿ ಭೌಗೋಳಿಕ ಸಂಕೇತಗಳನ್ನು ಬಳಸುವುದು

– ಇವು ಅನುಚಿತ ಸ್ಪರ್ಧಾ ಕೃತ್ಯಗಳೆಂಬುದಾಗಿ ಭಾವಿಸತಕ್ಕದ್ದೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಸ್ಪಷ್ಟೀಕರಿಸಲಾಗಿದೆ;

(ಸಿ) ಸರಕುಗಳು ಉತ್ಪಾದನೆಯಾಗುವ ರಾಜ್ಯಕ್ಷೇತ್ರ, ಪ್ರದೇಶ ಅಥವಾ ಸ್ಥಳದ ಬಗ್ಗೆ ಅಂಥ ನೋಂದಾಯಿತ ಭೌಗೋಳಿಕ ಸಂಕೇತವು ಅಕ್ಷರಶಃ ಸತ್ಯವಾಗಿದ್ದರೂ ಸಹ ಆ ರಾಜ್ಯಕ್ಷೇತ್ರದ, ಪ್ರದೇಶದ ಅಥವಾ ಸ್ಥಳದ ಮೂಲ ಉತ್ಪಾದನಾ ಸರಕುಗಳೆಂದು ಜನರಿಗೆ ತಪ್ಪಾಗಿ ನಿರೂಪಿಸುವ ಹಾಗೆ ಅಂಥ ಸರಕುಗಳಿಗೆ ಮತ್ತೊಂದು ಭೌಗೋಳಿಕ ಸಂಕೇತವನ್ನು ಬಳಸಿದಾಗ.

(2) ಕೇಂದ್ರ ಸರ್ಕಾರವು, (3)ನೆಯ ಉಪ–ಪ್ರಕರಣದ ಮೇರೆಗೆ ಕೆಲವು ಸರಕುಗಳಿಗೆ ಅಥವಾ ಸರಕುಗಳ ವರ್ಗಗಳಿಗೆ ಹೆಚ್ಚಿನ ಸಂರಕ್ಷಣೆ ಒದಗಿಸುವುದು ಅವಶ್ಯವೆಂದು ಭಾವಿಸಿದರೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ರಕ್ಷಣೆಯ ಉದ್ದೇಶಗಳಿಗಾಗಿ ಅಂಥ ಸರಕುಗಳನ್ನು ಅಥವಾ ಸರಕುಗಳ ವರ್ಗ ಅಥವಾ ವರ್ಗಗಳನ್ನು ನಿರ್ದಿಷ್ಟಪಡಿಸಬಹುದು.

(3) (2)ನೆಯ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ಸರಕುಗಳ ಅಥವಾ ಸರಕುಗಳ ಯಾವುದೇ ವರ್ಗ ಅಥವಾ ವರ್ಗಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ನೋಂದಾಯಿಸಿದ ಭೌಗೋಳಿಕ ಸಂಕೇತವನ್ನು ಬಳಸುವ ಅಧಿಕೃತ ಬಳಕೆದಾರನಲ್ಲದ ಯಾರೇ ವ್ಯಕ್ತಿಯು, ಅಂಥ ಇತರೆ ಭೌಗೋಳಿಕ ಸಂಕೇತದ ಮೂಲಕ ಸೂಚಿಸಿದ ಸ್ಥಳದಲ್ಲಿ ಮೂಲ

ಉತ್ಪಾದನೆಯಾಗದ ಅಂಥ ಸರಕುಗಳಿಗೆ ಅಥವಾ ಸರಕುಗಳ ವರ್ಗಕ್ಕೆ ಅಥವಾ ವರ್ಗಗಳಿಗೆ ಯಾವುದೇ ಇತರೆ ಭೌಗೋಳಿಕ ಸಂಕೇತವನ್ನು ಬಳಸಿದಾಗ ಅಥವಾ ಅಂಥ ಸರಕುಗಳ ನಿಜವಾದ ಮೂಲ ಉತ್ಪಾದನೆ ಸೂಚಿಸುವ ಅಂಥ ಸರಕುಗಳಿಗೆ ಅಥವಾ ಸರಕುಗಳ ವರ್ಗಕ್ಕೆ ಅಥವಾ ವರ್ಗಗಳಿಗೆ ಅಂಥ ಇತರೆ ಭೌಗೋಳಿಕ ಸಂಕೇತವನ್ನು ಬಳಸಿದಾಗ ಅಥವಾ ಮೂಲದ ನಿಜವಾದ ಸ್ಥಳವನ್ನು ಬದಲಾಯಿಸಿದಾಗ ಅಥವಾ "ವಿಧ", "ಶೈಲಿ", "ಅನುಕರಣೆ" ಅಥವಾ ಅಂಥವೇ ಪದಾವಳಿಗಳಂಥ ಪದಾವಳಿಗಳ ಮೂಲಕ ಒಳಗೊಂಡಿರುವ ಅಂಥ ಸರಕುಗಳಿಗೆ ಅಥವಾ ಸರಕುಗಳ ವರ್ಗಕ್ಕೆ ಅಥವಾ ವರ್ಗಗಳಿಗೆ ಅಂಥ ಇತರೆ ಭೌಗೋಳಿಕ ಸಂಕೇತವನ್ನು ಬಳಸಿದಾಗ ಅಂಥ ನೋಂದಾಯಿತ ಭೌಗೋಳಿಕ ಸಂಕೇತವನ್ನು ಅತಿಲಂಘಿಸಿದಂತಾಗುತ್ತದೆ.

(4) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಭೌಗೋಳಿಕ ಸಂಕೇತವನ್ನು ನೋಂದಾಯಿಸಿರುವ ಸರಕುಗಳನ್ನು ಅಂಥ ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನನ್ನು ಹೊರತುಪಡಿಸಿ ಒಬ್ಬ ವ್ಯಕ್ತಿಯು ಕಾನೂನು ಸಮ್ಮತವಾಗಿ ಸ್ವಾಧೀನಪಡಿಸಿಕೊಂಡಿರುವಲ್ಲಿ, ಸಂಸ್ಕರಿಸುವುದು ಅಥವಾ ಪ್ಯಾಕ್ ಮಾಡುವುದೂ ಸೇರಿದಂತೆ ಅಂಥ ವ್ಯಕ್ತಿಯ ಮೂಲಕ ಆ ಸರಕುಗಳ ಇನ್ನೂ ಹೆಚ್ಚಿನ ವ್ಯವಹಾರಗಳನ್ನು ನಡೆಸುವುದರಿಂದ ಸರಕುಗಳನ್ನು ಮಾರುಕಟ್ಟೆಯಲ್ಲಿ ಇಟ್ಟ ನಂತರ ಅವುಗಳ ಸ್ಥಿತಿಯು ಶಿಥಿಲವಾಗಿರುವ ಹೊರತು ಅಂಥ ಭೌಗೋಳಿಕ ಸಂಕೇತವನ್ನು ಅತಿಲಂಘಿಸಿದಂತಾಗುವುದಿಲ್ಲ.

**23. ನೋಂದಣಿಯು ಸಿಂಧುತ್ವದ ಮೊದಲ ನೋಟದ ಸಾಕ್ಷ್ಯವಾಗಿರುವುದು.–** (1) ಒಂದು ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದ ಎಲ್ಲ ಕಾನೂನು ವ್ಯವಹರಣೆಗಳಲ್ಲಿ, ಈ ಅಧಿನಿಯಮದ ಮೇರೆಗೆ ರಿಜಿಸ್ಟರಿನಿಂದ ಈ ಸಂಬಂಧವಾಗಿ ನೀಡಲಾದ ನೋಂದಣಿ ಪ್ರಮಾಣಪತ್ರ ಭೌಗೋಳಿಕ ಸಂಕೇತಗಳ ನೋಂದಣಿ ರಿಜಿಸ್ಟ್ರಿ ಮುದ್ರೆಯೊಂದಿಗೆ ರಿಜಿಸ್ಟರಿನಲ್ಲಿ ನಮೂದಾಗಿರುವ ಪ್ರತಿ ಆಗಿದ್ದು ಅದರ ಸಿಂಧುತ್ವದ ಬಗ್ಗೆ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು ಮತ್ತು ಇನ್ನೂ ಹೆಚ್ಚಿನ ರುಜುವಾತನ್ನು ಅಥವಾ ಮೂಲವನ್ನು ಹಾಜರುಪಡಿಸುವಂತೆ ಕೇಳದೆ ಎಲ್ಲ ನ್ಯಾಯಾಲಯಗಳಲ್ಲಿ ಮತ್ತು ಅಪೀಲು ಮಂಡಲಿಯ ಮುಂದೆ ಅದು ಅಂಗೀಕಾರಾರ್ಹವಾಗತಕ್ಕದ್ದು.

(2) ಈ ಪ್ರಕರಣದಲ್ಲಿರುವುದಾವುದೂ ಒಂದು ನೋಂದಣಿಯಾಗಿಲ್ಲದ ಭೌಗೋಳಿಕ ಸಂಕೇತದ ಸಂಬಂಧದಲ್ಲಿ ಕ್ರಮ ಕೈಗೊಳ್ಳುವ ಹಕ್ಕಿಗೆ ಬಾಧಕ ಉಂಟು ಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

**24. ಹಸ್ತಾಂತರಣ ಅಥವಾ ಪ್ರಸರಣ, ಮುಂತಾದವುಗಳಿಗೆ ನಿಷೇಧ, ಇತ್ಯಾದಿ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ನೋಂದಾಯಿತ ಭೌಗೋಳಿಕ ಸಂಕೇತದ ಯಾವುದೇ ಹಕ್ಕು, ಹಸ್ತಾಂತರ, ಸಾಗಣೆ, ಲೈಸೆನ್ಸ್ ನೀಡಿಕೆ, ಒತ್ತೆ, ಅಡಮಾನ ಅಥವಾ ಯಾವುದೇ ಇತರೆ ಒಪ್ಪಂದದ ವಿಷಯ ವಸ್ತು ಆಗಿರತಕ್ಕದ್ದಲ್ಲ:

ಪರಂತು, ಅಧಿಕೃತ ಬಳಕೆದಾರನು ಮೃತನಾದ ಸಂದರ್ಭದಲ್ಲಿ ನೋಂದಾಯಿತ ಭೌಗೋಳಿಕ ಸಂಕೇತದಲ್ಲಿ ಅವನು ಹೊಂದಿದ್ದ ಹಕ್ಕು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅವನ ಸ್ವಾಮ್ಯದಲ್ಲಿನ ಉತ್ತರಾಧಿಕಾರಿಗೆ ಪ್ರಾಪ್ತವಾಗತಕ್ಕದ್ದು.

## ಅಧ್ಯಾಯ – V

## ವ್ಯಾಪಾರ ಚಿಹ್ನೆಗಳಿಗೆ ಮತ್ತು ಹಿಂದಿನ ಬಳಕೆದಾರರಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು

**25. ಭೌಗೋಳಿಕ ಸಂಕೇತವನ್ನು ವ್ಯಾಪಾರ ಚಿಹ್ನೆಗಳಾಗಿ ನೋಂದಾಯಿಸಲು ನಿಷೇಧ.–** ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಆ ಅಧಿನಿಯಮದ 3ನೆಯ ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಾರನು, ತಾನಾಗಿಯೇ ಆಗಲಿ ಅಥವಾ ಆಸಕ್ತ ಪಕ್ಷಕಾರನ ಕೋರಿಕೆಯ ಮೇಲಾಗಲಿ, ಈ ಕೆಳಕಂಡಂತಿರುವ ವ್ಯಾಪಾರ ಚಿಹ್ನೆಯ ನೋಂದಣಿಯನ್ನು ನಿರಾಕರಿಸತಕ್ಕದ್ದು ಅಥವಾ ಅಸಿಂಧುಗೊಳಿಸತಕ್ಕದ್ದು,–

(ಎ) ದೇಶದ ರಾಜ್ಯಕ್ಷೇತ್ರದಲ್ಲಿ ಅಥವಾ ಆ ಕ್ಷೇತ್ರದ ಪ್ರದೇಶ ಅಥವಾ ಸ್ಥಳದಲ್ಲಿ ಉತ್ಪಾದನೆಯಾಗುವ ಸರಕುಗಳ ಅಥವಾ ಸರಕುಗಳ ವರ್ಗ ಅಥವಾ ವರ್ಗಗಳ ಸಂಬಂಧದಲ್ಲಿ ಅಂಥ ಭೌಗೋಳಿಕ ಸಂಕೇತವನ್ನು ಸೂಚಿಸುವಂಥ ಭೌಗೋಳಿಕ ಸಂಕೇತವನ್ನು ಒಳಗೊಂಡಿರುವಲ್ಲಿ ಅಥವಾ ಹೊಂದಿರುವಲ್ಲಿ, ಅಂಥ ಸರಕುಗಳ ವ್ಯಾಪಾರ ಚಿಹ್ನೆಗಳಲ್ಲಿ ಅಂಥ ಭೌಗೋಳಿಕ ಸಂಕೇತಗಳನ್ನು ಬಳಸುವುದರಿಂದ, ಅಂಥ ಸರಕುಗಳ ಅಥವಾ ಸರಕುಗಳ

ವರ್ಗ ಅಥವಾ ವರ್ಗಗಳ ನಿಜವಾದ ಸ್ಥಳದ ಬಗ್ಗೆ ಜನರಲ್ಲಿ ಗೊಂದಲ ಉಂಟು ಮಾಡುವ ಅಥವಾ ಅವರನ್ನು ತಪ್ಪು ದಾರಿಗೆ ಎಳೆಯುವಂಥ ಸ್ವರೂಪ ಹೊಂದಿರುವುದು ;

(ಬಿ) 22ನೆಯ ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ಸರಕುಗಳನ್ನು ಅಥವಾ ಸರಕುಗಳ ವರ್ಗ ಅಥವಾ ವರ್ಗಗಳನ್ನು ಗುರುತಿಸುವ ಭೌಗೋಳಿಕ ಸಂಕೇತವನ್ನು ಒಳಗೊಂಡಿರುವುದು ಅಥವಾ ಹೊಂದಿರುವುದು.

**26. ಕೆಲವು ವ್ಯಾಪಾರ ಚಿಹ್ನೆಗಳಿಗೆ ರಕ್ಷಣೆ.–** (1) ಒಂದು ವ್ಯಾಪಾರ ಚಿಹ್ನೆ ಭೌಗೋಳಿಕ ಸಂಕೇತವನ್ನು ಒಳಗೊಂಡಿರುವಲ್ಲಿ ಅಥವಾ ಹೊಂದಿರುವಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ವ್ಯಾಪಾರ ಚಿಹ್ನೆಗಳಿಗೆ ಸಂಬಂಧಿಸಿದ ಕಾನೂನು ಮೇರೆಗೆ ಸದ್ಭಾವನೆಯಿಂದ ಅರ್ಜಿ ಸಲ್ಲಿಸಿರುವಲ್ಲಿ ಅಥವಾ ನೋಂದಾಯಿಸಿರುವಲ್ಲಿ, ಅಥವಾ, –

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯಾಗಲಿ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಅಂಥ ಭೌಗೋಳಿಕ ಸಂಕೇತದ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸುವ ದಿನಾಂಕಕ್ಕೆ ಮುಂಚೆಯಾಗಲಿ, ಅಂಥ ವ್ಯಾಪಾರ ಚಿಹ್ನೆಯ ಹಕ್ಕುಗಳನ್ನು ಸದ್ಭಾವನೆಯಿಂದ ಬಳಸುವ ಮೂಲಕ ಸ್ವಾಧೀನಪಡಿಸಿಕೊಂಡಿರುವಲ್ಲಿ

– ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ವ್ಯಾಪಾರ ಚಿಹ್ನೆಯು ಅಂಥ ಭೌಗೋಳಿಕ ಸಂಕೇತಕ್ಕೆ ತದ್ವತ್ತಾಗಿದೆ ಅಥವಾ ಸದೃಶ್ಯವಾಗಿದೆ ಎಂಬ ಆಧಾರದ ಮೇಲೆ, ತತ್ಕಾಲದಲ್ಲಿ ಜಾರಿಯಲ್ಲಿರುವ ವ್ಯಾಪಾರ ಚಿಹ್ನೆಗಳಿಗೆ ಸಂಬಂಧಿಸಿದ ಕಾನೂನಿನ ಮೇರೆಗೆ ಅಂಥ ವ್ಯಾಪಾರ ಚಿಹ್ನೆಯ ನೋಂದಣಿಯ ನೋಂದಣಿ ಅರ್ಹತೆ ಅಥವಾ ಸಿಂಧುತ್ವಕ್ಕೆ ಅಥವಾ ಅಂಥ ವ್ಯಾಪಾರಿ ಚಿಹ್ನೆಯ  ಬಳಕೆಯ ಹಕ್ಕಿಗೆ ಬಾಧಕವುಂಟುಮಾಡತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಜನವರಿ 1, 1995ರಂದು ಅಥವಾ ಅದಕ್ಕೂ ಮುಂಚೆ ಭಾರತದ ಯಾವುದೇ ಭಾಗದಲ್ಲಿ ಅಂಥ ಸರಕುಗಳು ಅದೇ ಹೆಸರಿನ ಅದೇ ಭಾಷೆಯಲ್ಲಿ ರೂಢಿಗತವಾಗಿ ಅಂಥ ಭೌಗೋಳಿಕ ಸಂಕೇತವು ತದ್ವತ್ತಾಗಿರುವ ಸರಕುಗಳ ಅಥವಾ ಸರಕುಗಳ ವರ್ಗ ಅಥವಾ ವರ್ಗಗಳಿಗೆ ಸಂಬಂಧಿಸಿದಂತೆ ಭೌಗೋಳಿಕ ಸಂಕೇತದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದಲ್ಲ.

(3) ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ವ್ಯಾಪಾರ ನಡೆಯುತ್ತಿರುವಾಗ ತನ್ನ ಹೆಸರನ್ನು ಅಥವಾ ವ್ಯಾಪಾರದಲ್ಲಿಯ ತನ್ನ ಪೂರ್ವಿಕರ ಹೆಸರನ್ನು ಅಂಥ ಹೆಸರು ಜನರಿಗೆ ಗೊಂದಲ ಉಂಟುಮಾಡುವ ಅಥವಾ ಅವರನ್ನು ತಪ್ಪು ದಾರಿಗೆಳೆಯುವ ರೀತಿಯಲ್ಲಿ ಬಳಸಿರುವ ಹೊರತು, ಆ ವ್ಯಕ್ತಿಯ ಹೆಸರನ್ನು ಅಥವಾ ವ್ಯಾಪಾರದಲ್ಲಿಯ ಆ ವ್ಯಕ್ತಿಯ ಪೂರ್ವಿಕರ ಹೆಸರನ್ನು ಬಳಸಿಕೊಳ್ಳುವ ಯಾರೇ ವ್ಯಕ್ತಿಯ ಹಕ್ಕಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999 ರಲ್ಲಿ ಅಥವಾ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಂದು ವ್ಯಾಪಾರ ಚಿಹ್ನೆಯನ್ನು ಬಳಸುವ ಅಥವಾ ನೋಂದಾಯಿಸುವ ಸಂಬಂಧದಲ್ಲಿ, ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಯಾವುದೇ ಭೌಗೋಳಿಕ ಸಂಕೇತದ ಬಳಕೆ ಅಥವಾ ನೋಂದಣಿಯು ಅತಿಲಂಘನೆಯಾದ ಸಂಬಂಧದಲ್ಲಿ ನೋಂದಾಯಿತ ಮಾಲೀಕನಿಗೆ ಅಥವಾ ನೋಂದಾಯಿತ ಅಧಿಕೃತ ಬಳಕೆದಾರನಿಗೆ ತಿಳಿದುಬಂದ ದಿನಾಂಕದಿಂದ ಐದು ವರ್ಷ ಗತಿಸಿದ ತರುವಾಯ ಅಥವಾ ಆ ದಿನಾಂಕದಿಂದ ಸದರಿ ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಮೇರೆಗೆ ಆ ವ್ಯಾಪಾರದ ಚಿಹ್ನೆಯನ್ನು ಪ್ರಕಟಿಸಲಾಗಿದೆಯಂಬ ಷರತ್ತಿಗೊಳಪಟ್ಟು, ಸದರಿ ವ್ಯಾಪಾರ ಚಿಹ್ನೆಗಳ ಅಧಿನಿಯಮದ ಮೇರೆಗೆ ವ್ಯಾಪಾರ ಚಿಹ್ನೆ ನೋಂದಣಿಯಾದ ದಿನಾಂಕದ ನಂತರ ಅಂಥ ದಿನಾಂಕವು ಅಂಥ ಮಾಲೀಕನಿಗೆ ಅಥವಾ ಅಧಿಕೃತ ಬಳಕೆದಾರನಿಗೆ ಅಂಥ ಅತಿಲಂಘನೆಯ ಬಗ್ಗೆ ತಿಳಿದು ಬಂದ ದಿನಾಂಕಕ್ಕಿಂತ ಮುಂಚೆಯೇ ಆಗಿದ್ದರೆ ಮತ್ತು ಅಂಥ ಭೌಗೋಳಿಕ ಸಂಕೇತವನ್ನು ದುರ್ಭಾವನೆಯಿಂದ ಬಳಸಿರದಿದ್ದರೆ ಅಥವಾ ನೋಂದಾಯಿಸಿರದಿದ್ದರೆ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

## ಅಧ್ಯಾಯ – VI

### ರಿಜಿಸ್ಟರನ್ನು ಸರಿಪಡಿಸುವುದು ಮತ್ತು ತಿದ್ದುಪಾಟು ಮಾಡುವುದು

**27. ನೋಂದಣಿಯನ್ನು ರದ್ದುಪಡಿಸುವ ಅಥವಾ ವ್ಯತ್ಯಯಮಾಡುವ ಮತ್ತು ರಿಜಿಸ್ಟರನ್ನು ಸರಿಪಡಿಸುವ ಅಧಿಕಾರ.–** (1) ಬಾಧಿತನಾದ ಯಾರೇ ವ್ಯಕ್ತಿಯು, ಅಪೀಲು ಮಂಡಲಿಗೆ ಅಥವಾ ರಿಜಿಸ್ಟ್ರಾರನಿಗೆ ನಿಯಮಿಸಿದ ರೀತಿಯಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ನ್ಯಾಯಾಧಿಕರಣವು ಭೌಗೋಳಿಕ ಸಂಕೇತದ ಯಾವುದೇ ಉಲ್ಲಂಘನೆಯ ಅಥವಾ ಅದರ ಸಂಬಂಧದಲ್ಲಿ ರಿಜಿಸ್ಟರಿನಲ್ಲಿ ನಮೂದಿಸಿರುವ ಷರತ್ತುಗಳನ್ನು ಪಾಲಿಸಲು ತಪ್ಪಿದ್ದಕ್ಕಾಗಿ ಭೌಗೋಳಿಕ ಸಂಕೇತದ ಅಥವಾ ಅಧಿಕೃತ ಬಳಕೆದಾರನ ನೋಂದಣಿಯನ್ನು ರದ್ದುಪಡಿಸಲು ಅಥವಾ ವ್ಯತ್ಯಯಮಾಡಲು ತಾನು ಸೂಕ್ತವೆಂದು ಭಾವಿಸುವಂಥ ಆದೇಶ ಹೊರಡಿಸಬಹುದು.

(2) ಯಾವುದೇ ನಮೂದು ರಿಜಿಸ್ಟರಿನಲ್ಲಿ ಇಲ್ಲದಿರುವ ಅಥವಾ ಬಿಟ್ಟುಹೋಗಿರುವ ಅಥವಾ ಸಾಕಷ್ಟು ಕಾರಣವಿಲ್ಲದೆ ರಿಜಿಸ್ಟರಿನಲ್ಲಿ ಯಾವುದೇ ನಮೂದು ಮಾಡಿರುವ ಅಥವಾ ಯಾವುದೇ ನಮೂದು ರಿಜಿಸ್ಟರಿನಲ್ಲಿ ತಪ್ಪಾಗಿ ಉಳಿದಿರುವ ಅಥವಾ ರಿಜಿಸ್ಟರಿನಲ್ಲಿನ ಯಾವುದೇ ನಮೂದಿನಲ್ಲಿ ತಪ್ಪು ಅಥವಾ ದೋಷ ಇವುಗಳ ಕಾರಣದಿಂದ ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಿದ ರೀತಿಯಲ್ಲಿ ಅಪೀಲು ಮಂಡಲಿಗೆ ಅಥವಾ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸಬಹುದು ಮತ್ತು ನ್ಯಾಯಾಧಿಕರಣವು ಅದು ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಅಂಥ ನಮೂದನ್ನು ಮಾಡುವ, ತೊಡೆದುಹಾಕುವ ಅಥವಾ ವ್ಯತ್ಯಯಗೊಳಿಸುವಂಥ ಆದೇಶ ಮಾಡಬಹುದು.

(3) ನ್ಯಾಯಾಧಿಕರಣವು, ಈ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಯಲ್ಲಿ ರಿಜಿಸ್ಟರನ್ನು ಸರಿಪಡಿಸುವ ಸಂಬಂಧದಲ್ಲಿ ತೀರ್ಮಾನಿಸುವುದಕ್ಕೆ ಅವಶ್ಯವೆನಿಸಬಹುದಾದ ಅಥವಾ ವಿಹಿತವೆನಿಸಬಹುದಾದ ಯಾವುದೇ ವಿಷಯವನ್ನು ತೀರ್ಮಾನಿಸಬಹುದು.

(4) ನ್ಯಾಯಾಧಿಕರಣವು, ತಾನಾಗಿಯೇ ಸಂಬಂಧಪಟ್ಟ ಪಕ್ಷಕಾರರಿಗೆ ನಿಯಮಿಸಿದ ರೀತಿಯಲ್ಲಿ ನೋಟೀಸು ನೀಡಿದ ತರುವಾಯ ಮತ್ತು ಅವರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ, (1)ನೆಯ ಉಪಪ್ರಕರಣ ಅಥವಾ (2)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಆದೇಶವನ್ನು ಮಾಡಬಹುದು.

(5) ರಿಜಿಸ್ಟರನ್ನು ಸರಿಪಡಿಸುವ ಅಪೀಲು ಮಂಡಲಿಯ ಯಾವುದೇ ಆದೇಶದಲ್ಲಿ, ಸರಿಪಡಿಸುವಿಕೆಯ ಆ ನೋಟೀಸನ್ನು ನಿಯಮಿಸಿದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಜಾರಿ ಮಾಡತಕ್ಕದ್ದೆಂದು ನಿರ್ದೇಶಿಸತಕ್ಕದ್ದು ಮತ್ತು ಅವನು ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ ತದನುಸಾರ ರಿಜಿಸ್ಟರನ್ನು ಸರಿಪಡಿಸತಕ್ಕದ್ದು.

**28. ರಿಜಿಸ್ಟರನ್ನು ಸರಿಪಡಿಸುವಿಕೆ.–** ನೋಂದಾಯಿತ ಮಾಲೀಕ ಅಥವಾ ಅಧಿಕೃತ ಬಳಕೆದಾರನು ನಿಯಮಿಸಿದ ರೀತಿಯಲ್ಲಿ ಅರ್ಜಿ ಸಲ್ಲಿಸಿದ ಮೇಲೆ ರಿಜಿಸ್ಟ್ರಾರನು, –

(ಎ) ಭೌಗೋಳಿಕ ಸಂಕೇತದ ನೋಂದಾಯಿತ ಮಾಲೀಕ ಅಥವಾ ಸಂದರ್ಭಾನುಸಾರ ಅಧಿಕೃತ ಬಳಕೆದಾರರ ಹೆಸರು, ವಿಳಾಸ ಅಥವಾ ವಿವರಣೆಯಲ್ಲಿನ ಅಥವಾ ರಿಜಿಸ್ಟರಿನಲ್ಲಿರುವ ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದ ಯಾವುದೇ ಇತರೆ ನಮೂದಿನಲ್ಲಿನ ಯಾವುದೇ ತಪ್ಪನ್ನು ಸರಿಪಡಿಸಬಹುದು;

(ಬಿ) ರಿಜಿಸ್ಟರಿನಲ್ಲಿ ಭೌಗೋಳಿಕ ಸಂಕೇತದ ಮಾಲೀಕರಾಗಿ ನೋಂದಾಯಿಸಿಕೊಂಡಿರುವ ವ್ಯಕ್ತಿಗಳ ಅಥವಾ ಉತ್ಪಾದಕರ ಸಂಘದ ಅಥವಾ ಯಾವುದೇ ಸಂಸ್ಥೆಯ ಅಥವಾ ಸಂದರ್ಭಾನುಸಾರ ಪ್ರಾಧಿಕಾರದ ಹೆಸರು, ವಿಳಾಸ ಅಥವಾ ವಿವರಣೆಯಲ್ಲಿ ಯಾವುದೇ ಬದಲಾವಣೆಯನ್ನು ನಮೂದು ಮಾಡಬಹುದು;

(ಸಿ) ರಿಜಿಸ್ಟರಿನಲ್ಲಿರುವ ಭೌಗೋಳಿಕ ಸಂಕೇತದ ನಮೂದನ್ನು ರದ್ದುಪಡಿಸಬಹುದು;

(ಡಿ) ಭೌಗೋಳಿಕ ಸಂಕೇತವನ್ನು ನೋಂದಾಯಿಸಲಾಗಿರುವವುಗಳಿಂದ ಯಾವ ಸರಕುಗಳು ಅಥವಾ ಸರಕುಗಳ ವರ್ಗ ಅಥವಾ ವರ್ಗಗಳ ಸಂಬಂಧದಲ್ಲಿ ಒಂದು ಭೌಗೋಳಿಕ ಸಂಕೇತವನ್ನು ನೋಂದಾಯಿಸ ಲಾಗಿದೆಯೋ ಅವನ್ನು ರಿಜಿಸ್ಟರಿನಿಂದ ಹೊಡೆದು ಹಾಕಬಹುದು

– ಮತ್ತು ನೋಂದಣಿಯ ಪ್ರಮಾಣಪತ್ರದಲ್ಲಿ ಯಾವುದೇ ತತ್ಪರಿಣಾಮವಾದ ತಿದ್ದುಪಡಿ ಅಥವಾ ವ್ಯತ್ಯಯ ಮಾಡಬಹುದು ಮತ್ತು ಆ ಉದ್ದೇಶಕ್ಕಾಗಿ, ನೋಂದಣಿ ಪ್ರಮಾಣ ಪತ್ರವನ್ನು ತನ್ನ ಮುಂದೆ ಹಾಜರುಪಡಿಸುವಂತೆ ಅಗತ್ಯಪಡಿಸಬಹುದು.

**29. ನೋಂದಾಯಿತ ಭೌಗೋಳಿಕ ಸಂಕೇತಗಳನ್ನು ವ್ಯತ್ಯಾಸ ಮಾಡುವುದು.–** (1) ಭೌಗೋಳಿಕ ಸಂಕೇತದ ನೋಂದಾಯಿತ ಮಾಲೀಕನು, ಭೌಗೋಳಿಕ ಸಂಕೇತದ ಅನನ್ಯತೆಗೆ ಗಮನಾರ್ಹವಾಗಿ ಬಾಧಕವಾಗದ ಹಾಗೆ ಭೌಗೋಳಿಕ ಸಂಕೇತದಲ್ಲಿ ಯಾವುದೇ ರೀತಿಯಲ್ಲಿ ಸೇರ್ಪಡೆಗೆ ಅಥವಾ ಅದನ್ನು ಮಾರ್ಪಾಟುಗೊಳಿಸುವುದಕ್ಕೆ ಅನುಮತಿ ಕೋರಿ ನಿಯಮಿಸಿದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸಬಹುದು, ಮತ್ತು ರಿಜಿಸ್ಟ್ರಾರನು ಅನುಮತಿಯನ್ನು ನಿರಾಕರಿಸಬಹುದು ಅಥವಾ ತಾನು ವಿಹಿತವೆಂದು ಭಾವಿಸುವ ರೀತಿಯಲ್ಲಿನ ಅಂಥ ನಿಬಂದನೆಗಳು ಮತ್ತು ಅಂಥ ಪರಿಮಿತಿಗಳಿಗೊಳಪಟ್ಟು ಅದನ್ನು ಮಂಜೂರು ಮಾಡಬಹುದು.

(2) ರಿಜಿಸ್ಟ್ರಾರನು, ಯಾವುದೇ ಸಂದರ್ಭದಲ್ಲಿ ನಿಯಮಿಸಿದ ರೀತಿಯಲ್ಲಿ ಈ ಪ್ರಕರಣದ ಮೇರೆಗೆ ಅರ್ಜಿಯನ್ನು ಜಾಹೀರುಗೊಳಿಸುವುದು ಯುಕ್ತವೆಂದು ಮನಗಂಡರೆ ಹಾಗೆ ಮಾಡಬಹುದು ಮತ್ತು ಅವನು ಹಾಗೆ ಮಾಡಿದಲ್ಲಿ, ಜಾಹೀರುಮಾಡಿದ ದಿನಾಂಕದಿಂದ ನಿಯಮಿಸಿದ ಕಾಲದೊಳಗಾಗಿ ಯಾರೇ ವ್ಯಕ್ತಿಯು ಅರ್ಜಿಯ ವಿರುದ್ಧ ನಿಯಮಿಸಿದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ನೋಟೀಸು ಸಲ್ಲಿಸಿದರೆ ರಿಜಿಸ್ಟ್ರಾರನು, ಹಾಗೆ ಅಗತ್ಯವಾದರೆ, ಪಕ್ಷಕಾರರ ಅಹವಾಲನ್ನು ಆಲಿಸಿದ ನಂತರ, ವಿಷಯವನ್ನು ತೀರ್ಮಾನಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಅನುಮತಿಯನ್ನು ನೀಡಿರುವಲ್ಲಿ, ಅರ್ಜಿಯನ್ನು (2)ನೆಯ ಉಪಪ್ರಕರಣದ ಮೇರೆಗೆ ಈಗಾಗಲೇ ಜಾಹೀರುಗೊಳಿಸಿರುವ ಹೊರತು, ಮಾರ್ಪಾಟಾದ ಭೌಗೋಳಿಕ ಸಂಕೇತವನ್ನು ನಿಯಮಿಸಿದ ರೀತಿಯಲ್ಲಿ ಜಾಹೀರುಪಡಿಸತಕ್ಕದ್ದು.

**30. ಸರಕುಗಳ ವರ್ಗೀಕರಣವನ್ನು ತಿದ್ದುಪಡಿ ಮಾಡಲು ಅಥವಾ ಪ್ರತಿಯೋಜಿಸಲು ರಿಜಿಸ್ಟರಿನಲ್ಲಿ ನಮೂದುಗಳ ಅಳವಡಿಕೆ.–** (1) ರಿಜಿಸ್ಟ್ರಾರನು, ರಿಜಿಸ್ಟರನ್ನು ತಿದ್ದುಪಡಿ ಮಾಡಬೇಕಾದ ಅಥವಾ ಯಾವುವೇ ಸರಕುಗಳ ಸಂಬಂಧದಲ್ಲಿ ಭೌಗೋಳಿಕ ಸಂಕೇತದ ನೋಂದಣಿಗೆ ಪೂರ್ವ ದಿನಾಂಕ ಹಾಕುವುದಕ್ಕೆ ನಿಕಟಪೂರ್ವದಲ್ಲಿ ಭೌಗೋಳಿಕ ಸಂಕೇತದ ನೋಂದಣಿಯನ್ನು ಮಾಡಿದ ಯಾವುದೇ ಸರಕುಗಳಿಗೆ ಅಥವಾ ಸರಕುಗಳ ವರ್ಗಗಳಿಗೆ ಸೇರ್ಪಡೆಯಾಗುವ ಪರಿಣಾಮ ಹೊಂದಿರುವ (ಒಂದು ವರ್ಗದಲ್ಲಿ ಅಥವಾ ಹೆಚ್ಚು ವರ್ಗಗಳಲ್ಲಿ) ರಿಜಿಸ್ಟರಿನಲ್ಲಿ ಯಾವುದೇ ತಿದ್ದುಪಡಿ ಮಾಡತಕ್ಕದ್ದಲ್ಲ:

ಪರಂತು, ಹಾಗೆ ಈ ಉಪಪ್ರಕರಣವನ್ನು ಪಾಲಿಸುವುದರಿಂದ ಕ್ಲಿಷ್ಟತೆ ಉಂಟಾಗುವುದೆಂದು ಮತ್ತು ಸೇರ್ಪಡೆ ಮಾಡುವಿಕೆಯಿಂದ ಅಥವಾ ಸಂದರ್ಭಾನುಸಾರ, ಪೂರ್ವ ದಿನಾಂಕ ಹಾಕುವುದರಿಂದ ಸರಕುಗಳ ಗಣನೀಯ ಪ್ರಮಾಣದ ಮೇಲೆ ಬಾಧಕ ಉಂಟಾಗುವುದಿಲ್ಲವೆಂದು ಮತ್ತು ಯಾರೇ ವ್ಯಕ್ತಿಯ ಹಕ್ಕುಗಳಿಗೆ ಗಮನಾರ್ಹ ಪ್ರತಿಕೂಲ ಉಂಟಾಗುವುದಿಲ್ಲವೆಂದು ರಿಜಿಸ್ಟ್ರಾರನು, ಮನಗಂಡರೆ ಅದು ಅನ್ವಯಿಸತಕ್ಕದ್ದಲ್ಲ.

(2) ರಿಜಿಸ್ಟರನ್ನು ಹಾಗೆ ತಿದ್ದುಪಡಿ ಮಾಡುವ ಒಂದು ಪ್ರಸ್ತಾವವನ್ನು, ಬಾಧಿತರಾದ ನೋಂದಾಯಿತ ಮಾಲೀಕನ ಮತ್ತು ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನ ಗಮನಕ್ಕೆ ತರತಕ್ಕದ್ದು ಮತ್ತು ನಿಯಮಿಸಿದ ರೀತಿಯಲ್ಲಿ ಜಾಹೀರುಗೊಳಿಸತಕ್ಕದ್ದು ಮತ್ತು ಪ್ರಸ್ತಾವಿತ ತಿದ್ದುಪಡಿಯು (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುತ್ತದೆಂಬ ಕಾರಣದ ಮೇಲೆ ಬಾಧಿತನಾದ ಯಾರೇ ವ್ಯಕ್ತಿಯು ರಿಜಿಸ್ಟ್ರಾರನ ಮುಂದೆ ಅದನ್ನು ವಿರೋಧಿಸಬಹುದು.

## ಅಧ್ಯಾಯ - VII

## ಅಪೀಲು ಮಂಡಲಿಗೆ ಅಪೀಲುಗಳನ್ನು ಸಲ್ಲಿಸುವುದು

**31. ಅಪೀಲು ಮಂಡಲಿಗೆ ಅಪೀಲುಗಳನ್ನು ಸಲ್ಲಿಸುವುದು.–** (1) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ರಿಜಿಸ್ಟ್ರಾರನ ಆದೇಶದಿಂದ ಅಥವಾ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಯಾವ ಆದೇಶ ಅಥವಾ ತೀರ್ಮಾನದ ವಿರುದ್ಧ ಅಪೀಲು ಸಲ್ಲಿಸಲಾಗುವುದೋ ಅದನ್ನು ಅಪೀಲು ಸಲ್ಲಿಸುವಂಥ ವ್ಯಕ್ತಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಅಪೀಲು ಮಂಡಲಿಗೆ ಅಪೀಲು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿರುವ ಅವಧಿಯು ಮುಗಿದ ಮೇಲೆ ಅಪೀಲು ಸಲ್ಲಿಸಿದರೆ ಅದನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ನಿರ್ದಿಷ್ಟಪಡಿಸಿದ್ದ ಅವಧಿಯೊಳಗಾಗಿ ಅಪೀಲು ಸಲ್ಲಿಸಲು ಆಗದಿರುವುದಕ್ಕೆ ಸಾಕಷ್ಟು ಕಾರಣಗಳಿದ್ದವೆಂದು ಅಪೀಲು ಮಂಡಲಿಗೆ ಅಪೀಲುದಾರನು ಮನವರಿಕೆ ಮಾಡಿಕೊಟ್ಟರೆ, ಅದರ ನಿರ್ದಿಷ್ಟ ಅವಧಿ ಮುಗಿದ ಮೇಲೂ ಅಪೀಲನ್ನು ಅಂಗೀಕರಿಸಬಹುದು.

(3) ಅಪೀಲು ಮಂಡಲಿಗೆ ಸಲ್ಲಿಸುವ ಅಪೀಲು, ನಿಯಮಿಸಿದ ನಮೂನೆಯಲ್ಲಿರತಕ್ಕದ್ದು ಮತ್ತು ನಿಯಮಿಸಿದ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಯಾವ ಆದೇಶದ ಅಥವಾ ತೀರ್ಮಾನದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಅದರ ಒಂದು ಪ್ರತಿಯನ್ನು ಮತ್ತು ನಿಯಮಿಸಿರಬಹುದಾದಂಥ ಫೀಜನ್ನು ಒಳಗೊಂಡಿರತಕ್ಕದ್ದು.

**32. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ, ಇತ್ಯಾದಿ.–** ಯಾವುದೇ ನ್ಯಾಯಾಲಯವು ಅಥವಾ ಇತರೆ ಪ್ರಾಧಿಕಾರವು 31ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿಷಯಗಳ ಸಂಬಂಧದಲ್ಲಿ ಯಾವುದೇ ಅಧಿಕಾರ ವ್ಯಾಪ್ತಿಯನ್ನು, ಕ್ಷೇತ್ರಾಧಿಕಾರವನ್ನು ಅಥವಾ ಅಧಿಕಾರವನ್ನು ಚಲಾಯಿಸಲು ಅಧಿಕಾರ ಹೊಂದಿರತಕ್ಕದ್ದಲ್ಲ ಅಥವಾ ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

**33. ಅಪೀಲು ಮಂಡಲಿಯ ಕಾರ್ಯವಿಧಾನ.–** ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರ 84ನೆಯ ಪ್ರಕರಣದ (2), (3), (4), (5), (6)ನೆಯ ಉಪಪ್ರಕರಣಗಳ, 87ನೆಯ ಪ್ರಕರಣದ, 92ನೆಯ ಪ್ರಕರಣದ, 95ನೆಯ ಪ್ರಕರಣದ ಮತ್ತು 96ನೆಯ ಪ್ರಕರಣದ ಉಪಬಂಧಗಳನ್ನು, ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವುಗಳಿಗೆ ಅನ್ವಯಿಸಿದ ರೀತಿಯಲ್ಲಿಯೇ ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಪೀಲು ಮಂಡಲಿಗೆ ಸಹ ಅದೇ ರೀತಿ ಅನ್ವಯವಾಗತಕ್ಕದ್ದು.

**34. ಅಪೀಲು ಮಂಡಲಿಯ ಮುಂದಿರುವ ಅರ್ಜಿಗಳನ್ನು ಸರಿಪಡಿಸುವುದಕ್ಕಾಗಿ ಅರ್ಜಿ ಸಲ್ಲಿಸುವ ಕಾರ್ಯವಿಧಾನ, ಇತ್ಯಾದಿ.–** (1) 27ನೆಯ ಪ್ರಕರಣದ ಮೇರೆಗೆ ಅಪೀಲು ಮಂಡಲಿಗೆ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಸಲ್ಲಿಸುವ ಅರ್ಜಿಯು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗಿನ ಒಂದು ನೋಂದಾಯಿತ ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದಂತೆ ಅಪೀಲು ಮಂಡಲಿಯ ಪ್ರತಿಯೊಂದು ಆದೇಶದ ಅಥವಾ ತೀರ್ಪಿನ ಪ್ರಮಾಣಿತ ಪ್ರತಿಯನ್ನು ಅಪೀಲು ಮಂಡಲಿಯ ಮೂಲಕ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು ಮತ್ತು ರಿಜಿಸ್ಟ್ರಾರನು ಮಂಡಲಿಯ ಆದೇಶವನ್ನು ಜಾರಿಗೆ ತರತಕ್ಕದ್ದು ಮತ್ತು ಅಂಥ ಆದೇಶದ ಅನುಸಾರ ರಿಜಿಸ್ಟರಿನ ನಮೂದುಗಳನ್ನು ತಿದ್ದುಪಡಿ ಮಾಡತಕ್ಕದ್ದೆಂದು ಅಥವಾ ಅದನ್ನು ಸರಿಪಡಿಸತಕ್ಕದ್ದೆಂದು ನಿರ್ದೇಶಿತನಾದಾಗ ಮಾಡತಕ್ಕದ್ದು.

**35. ಕಾನೂನು ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ಹಾಜರಾತಿ.–** (1) ರಿಜಿಸ್ಟ್ರಾರನು,–

(ಎ) ಅಪೀಲು ಮಂಡಲಿಯ ಮುಂದೆ ಇರುವ ಯಾವ ಕಾನೂನು ವ್ಯವಹರಣೆಗಳಲ್ಲಿ ಕೋರಲಾದ ಪರಿಹಾರವು ರಿಜಿಸ್ಟರಿನ ಮಾರ್ಪಾಟು ಅಥವಾ ಸರಿಪಡಿಕೆಯನ್ನು ಒಳಗೊಂಡಿರುವುದೋ ಅಥವಾ ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಯ ಆಚರಣೆಗೆ ಸಂಬಂಧಪಟ್ಟಂಥ ಯಾವುದೇ ಪ್ರಶ್ನೆಯನ್ನು ಎತ್ತಲಾಗಿದೆಯೋ ಆ ಯಾವುವೇ ಕಾನೂನು ವ್ಯವಹರಣೆಗಳಲ್ಲಿ ;

(ಬಿ) ಭೌಗೋಳಿಕ ಸಂಕೇತದ ಅಥವಾ ಅಧಿಕೃತ ಬಳಕೆದಾರನ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯನ್ನು,-

(i) ವಿರೋಧಿಸಿರದಿದ್ದರೆ ಮತ್ತು ಅದನ್ನು ರಿಜಿಸ್ಟ್ರಾರನಿಂದ ನಿರಾಕರಿಸಿರಲಿ ಅಥವಾ ಯಾವುದೇ ತಿದ್ದುಪಡಿಗಳು, ಮಾರ್ಪಾಟುಗಳು, ಷರತ್ತುಗಳು ಅಥವಾ ಪರಿಮಿತಿಗಳಿಗೊಳಪಟ್ಟು ಅಂಗೀಕರಿಸಿರಲಿ; ಅಥವಾ

(ii) ವಿರೋಧಿಸಿದ್ದರೆ ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವನ ಹಾಜರಾತಿಯ ಅವಶ್ಯಕತೆ ಇದೆ ಎಂದು ರಿಜಿಸ್ಟ್ರಾರನು ಪರಿಗಣಿಸಿದರೆ

– ರಿಜಿಸ್ಟ್ರಾರನ ಆದೇಶದ ವಿರುದ್ಧ ಮಂಡಲಿಗೆ ಸಲ್ಲಿಸಿದ ಯಾವುದೇ ಅಪೀಲಿನಲ್ಲಿ ಹಾಜರಾಗಲು ಮತ್ತು ಅಹವಾಲು ಹೇಳಿಕೊಳ್ಳಲು ರಿಜಿಸ್ಟ್ರಾರನಿಗೆ ಹಕ್ಕು ಇರತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಹಾಜರಾಗುವಂತೆ ಮಂಡಲಿಯು ನಿರ್ದೇಶಿಸಿದಾಗ ಅವನು ಹಾಜರಾಗತಕ್ಕದ್ದು.

(2) ಅಪೀಲು ಮಂಡಲಿಯು ಅನ್ಯಥಾ ನಿರ್ದೇಶಿಸಿದ ಹೊರತು, ರಿಜಿಸ್ಟ್ರಾರನು ಹಾಜರಾಗುವುದರ ಬದಲು, ಅವನು ತನ್ನ ಮುಂದಿರುವ ವಿವಾದದ ವಿಷಯಕ್ಕೆ ಸಂಬಂಧಿಸಿದಂತೆ ವ್ಯವಹರಣೆಗಳಲ್ಲಿ ತಾನೂ ಸೂಕ್ತವೆಂದು ಭಾವಿಸುವ ಅಥವಾ ಅವುಗಳಿಗೆ ಬಾಧಕವೆನಿಸುವ ಯಾವುವೇ ತೀರ್ಮಾನದ ಕಾರಣಗಳ ಅಥವಾ ಅಂಥ ಪ್ರಕರಣಗಳಲ್ಲಿ ಭೌಗೋಳಿಕ ಸಂಕೇತಗಳ ನೋಂದಣಿ ಕಚೇರಿಯ ಪದ್ಧತಿಗಳ ಅಥವಾ ಅಂಥ ವಿಷಯಗಳಿಗೆ ಸಂಬಂಧಿಸಿದ ಮತ್ತು ರಿಜಿಸ್ಟ್ರಾರನಾಗಿ ತನ್ನ ತಿಳಿವಳಿಕೆಗೆ ಬಂದ ಇತರೆ ವಿಷಯಗಳ ಸಂಬಂಧದಲ್ಲಿ ಸಹಿ ಮಾಡಿದ ಲಿಖಿತ ವಿವರಣೆಯನ್ನು ಸಲ್ಲಿಸಬಹುದು ಮತ್ತು ಅಂಥ ವಿವರಣೆಯು ವ್ಯವಹರಣೆಯಲ್ಲಿ ಸಾಕ್ಷ್ಯವಾಗಿರತಕ್ಕದ್ದು.

**36. ಅಪೀಲು ಮಂಡಲಿಯ ಮುಂದಿರುವ ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ವೆಚ್ಚಗಳು.**– ಅಪೀಲು ಮಂಡಲಿಯ ಮುಂದಿರುವ ಈ ಅಧಿನಿಯಮದ ಮೇರೆಗಿನ ಎಲ್ಲ ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ವೆಚ್ಚಗಳು ಮಂಡಲಿಯ ವಿವೇಚನಾನುಸಾರ ಒಳಪಟ್ಟಿರತಕ್ಕದ್ದು, ಆದರೆ ಯಾರೇ ಪಕ್ಷಕಾರ ವೆಚ್ಚಗಳನ್ನು ಸಂದಾಯ ಮಾಡುವಂತೆ ರಿಜಿಸ್ಟ್ರಾರನಿಗೆ ಆದೇಶ ನೀಡತಕ್ಕದ್ದಲ್ಲ.

## ಅಧ್ಯಾಯ – VIII

## ಅಪರಾಧಗಳು, ದಂಡಗಳು ಮತ್ತು ಕಾರ್ಯವಿಧಾನ

**37. ಭೌಗೋಳಿಕ ಸಂಕೇತಗಳನ್ನು ಅನ್ವಯಿಸುವ ಅರ್ಥ.**– (1) ಒಬ್ಬ ವ್ಯಕ್ತಿಯು,-

(ಎ) ಆ ಸರಕುಗಳಿಗೇ ಅನ್ವಯಿಸಿದರೆ; ಅಥವಾ

(ಬಿ) ಯಾವ ಪ್ಯಾಕೇಜ್‌ನೊಂದಿಗೆ ಮಾರಾಟ ಮಾಡಲಾಗುವುದೋ ಅಥವಾ ಮಾರಾಟಕ್ಕೆ ಇಡಲಾಗುವುದೋ ಅಥವಾ ಮಾರಾಟಕ್ಕಾಗಿ ಅಥವಾ ವ್ಯಾಪಾರದ ಅಥವಾ ತಯಾರಿಕೆಯ ಉದ್ದೇಶಕ್ಕಾಗಿ ಸ್ವಾಧೀನದಲ್ಲಿ ಇಡಲಾಗಿದೆಯೋ ಆ ಪ್ಯಾಕೇಜ್‌ಗೆ ಅನ್ವಯಿಸಿದರೆ; ಅಥವಾ

(ಸಿ) ಮಾರಾಟ ಮಾಡಲಾಗುವ ಅಥವಾ ಮಾರಾಟಕ್ಕಾಗಿ ಇಡಲಾಗುವ ಅಥವಾ ಮಾರಾಟಕ್ಕಾಗಿ ಅಥವಾ ವ್ಯಾಪಾರದ ಅಥವಾ ತಯಾರಿಕೆಯ ಯಾವುದೇ ಉದ್ದೇಶಕ್ಕಾಗಿ ಸ್ವಾಧೀನದಲ್ಲಿಡಲಾಗುವ ಯಾವುದೇ ಸರಕುಗಳನ್ನು ಭೌಗೋಳಿಕ ಸಂಕೇತವನ್ನು ಅನ್ವಯಿಸುವ ಯಾವುದೇ ಪ್ಯಾಕೇಜ್‌ನಲ್ಲಿ ಅಥವಾ ಧಾರಕದಲ್ಲಿ ಇಟ್ಟರೆ, ಆವರಿಸಿಟ್ಟರೆ ಅಥವಾ ಲಗತ್ತಿಸಿಟ್ಟರೆ; ಅಥವಾ

(ಡಿ) ಒಂದು ಭೌಗೋಳಿಕ ಸಂಕೇತವನ್ನು ಯಾವ ಸರಕುಗಳ ಸಂಬಂಧದಲ್ಲಿ ಅದನ್ನು ಬಳಸಲಾಗಿದೆಯೋ ಆ ಸರಕುಗಳನ್ನು ಅದರ ಮೂಲಕ ಹೆಸರಿಸಲಾಗಿದೆ ಅಥವಾ ವಿವರಿಸಲಾಗಿದೆ ಎಂದು ತರ್ಕಸಮ್ಮತವಾಗಿ ನಂಬಲು ಸಂಭವವಿರುವಂಥ ರೀತಿಯಲ್ಲಿ ಬಳಸಿದರೆ; ಅಥವಾ

(ಇ) ಯಾವುದೇ ಚಿಹ್ನೆ, ಜಾಹೀರಾತು, ಖರೀದಿ ಪಟ್ಟಿ, ಸರಕುಪಟ್ಟಿ, ವಾಣಿಜ್ಯ ಪತ್ರ, ವ್ಯವಹಾರ ಕಾಗದ, ಬೆಲೆ ಪಟ್ಟಿ ಅಥವಾ ಇತರೆ ವಾಣಿಜ್ಯ ದಸ್ತಾವೇಜುಗಳಲ್ಲಿ ಬಳಸುವ ಸರಕುಗಳ ಸಂಬಂಧದಲ್ಲಿ ಭೌಗೋಳಿಕ ಸಂಕೇತವನ್ನು ಬಳಸಿದರೆ ಮತ್ತು ಹಾಗೆ ಬಳಸಿದ ಭೌಗೋಳಿಕ ಸಂಕೇತವನ್ನು ಉಲ್ಲೇಖಿಸಿ ಮಾಡಲಾದ ವಿನಂತಿ ಅಥವಾ ಆದೇಶಕ್ಕನುಸಾರವಾಗಿ ಸರಕುಗಳನ್ನು ತಲುಪಿಸಿದರೆ

– ಸರಕುಗಳಿಗೆ ಭೌಗೋಳಿಕ ಸಂಕೇತವು ಅನ್ವಯಿಸುವುದೆಂದು ಭಾವಿಸತಕ್ಕದ್ದು.

(2) ಒಂದು ಭೌಗೋಳಿಕ ಸಂಕೇತವನ್ನು ಯಾವುದೇ ಸರಕುಗಳಿಗೆ ಯಾವುದೇ ಪ್ಯಾಕೇಜ್‌ಗಳಿಗೆ ಅಥವಾ ಯಾವುವೇ ಇತರ ವಸ್ತುಗಳಿಗೆ ನೇಯ್ದಿರಲಿ, ಮುದ್ರೆ ಒತ್ತಿರಲಿ, ಅನ್ಯಥಾ ಕಟ್ಟಿರಲಿ ಅಥವಾ ಲಗತ್ತಿಸಿರಲಿ ಅಥವಾ ಜೋಡಿಸಿರಲಿ ಅದನ್ನು ಸರಕುಗಳಿಗೆ ಅನ್ವಯಿಸಿರುವುದಾಗಿ ಭಾವಿಸತಕ್ಕದ್ದು.

**38. ಭೌಗೋಳಿಕ ಸಂಕೇತಗಳನ್ನು ಸುಳ್ಳಾಗಿ ನಿರೂಪಿಸುವುದು ಮತ್ತು ತಪ್ಪಾಗಿ ಅನ್ವಯಿಸುವುದು.–** (1) ಒಬ್ಬ ವ್ಯಕ್ತಿಯು ಈ ಕೆಳಕಂಡಂತೆ ಮಾಡಿದರೆ,–

(ಎ) ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನ ಸಮ್ಮತಿ ಇಲ್ಲದೆ ಅಂಥ ಭೌಗೋಳಿಕ ಸಂಕೇತವನ್ನು ಮಾಡಿದರೆ ಅಥವಾ ಮೋಸ ಹೋಗುವಷ್ಟು ಸಾಮ್ಯವಿರುವ ಭೌಗೋಳಿಕ ಸಂಕೇತವನ್ನು ಮಾಡಿದರೆ; ಅಥವಾ

(ಬಿ) ಮಾರ್ಪಾಟು ಮಾಡುವ, ಸೇರಿಸುವ, ಅಳಿಸಿ ಹಾಕುವ ಅಥವಾ ಇತರೆ ರೀತಿಯಲ್ಲಿ ಯಾವುದೇ ನಿಜವಾದ ಭೌಗೋಳಿಕ ಸಂಕೇತವನ್ನು ಸುಳ್ಳಾಗಿ ನಿರೂಪಿಸಿದರೆ

– ಭೌಗೋಳಿಕ ಸಂಕೇತಗಳನ್ನು ಸುಳ್ಳಾಗಿ ನಿರೂಪಿಸಿದ್ದಾನೆಂದು ಭಾವಿಸತಕ್ಕದ್ದು.

(2) ಒಬ್ಬ ವ್ಯಕ್ತಿಯು ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನ ಸಮ್ಮತಿ ಇಲ್ಲದೆ, ಈ ಕೆಳಕಂಡಂತೆ ಮಾಡಿದರೆ,–

(ಎ) ಸರಕುಗಳಿಗೆ ಅಥವಾ ಸರಕುಗಳನ್ನು ಒಳಗೊಂಡಿರುವ ಯಾವುದೇ ಪ್ಯಾಕೇಜ್‌ಗೆ ಅಂಥ ಭೌಗೋಳಿಕ ಸಂಕೇತವನ್ನು ಅಥವಾ ಮೋಸಹೋಗುವಷ್ಟು ಸಾಮ್ಯವಿರುವ ಭೌಗೋಳಿಕ ಸಂಕೇತವನ್ನು ಅನ್ವಯಿಸಿದರೆ;

(ಬಿ) ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನ ನಿಜವಾದ ಸರಕುಗಳನ್ನು ಹೊರತುಪಡಿಸಿ ಯಾವುದೇ ಸರಕುಗಳ ಪ್ಯಾಕೇಜ್ ಮಾಡುವ, ಭರ್ತಿಮಾಡುವ ಅಥವಾ ಸುತ್ತಿಡುವ ಉದ್ದೇಶಕ್ಕಾಗಿ ಅಂಥ ಅಧಿಕೃತ ಬಳಕೆದಾರನ ಭೌಗೋಳಿಕ ಸಂಕೇತಕ್ಕೆ ತದ್ರೂಪದ ಅಥವಾ ಮೋಸಹೋಗುವಷ್ಟು ಸಾಮ್ಯವಿರುವ ಭೌಗೋಳಿಕ ಸಂಕೇತ ವನ್ನೊಳಗೊಂಡ ಯಾವುದೇ ಪ್ಯಾಕೇಜನ್ನು ಬಳಸಿದರೆ

– ಅಂಥ ಸರಕುಗಳಿಗೆ ಭೌಗೋಳಿಕ ಸಂಕೇತವನ್ನು ಸುಳ್ಳಾಗಿ ಅನ್ವಯಿಸಿದ್ದಾನೆಂದು ಭಾವಿಸತಕ್ಕದ್ದು.

(3) (1)ನೇಯ ಉಪಪ್ರಕರಣದಲ್ಲಿ ನಮೂದಿಸಲಾದಂತೆ ಸುಳ್ಳಾಗಿ ನಿರೂಪಿಸಲಾದ ಅಥವಾ (2)ನೇಯ ಉಪಪ್ರಕರಣದಲ್ಲಿ ನಮೂದಿಸಲಾದಂತೆ ಸುಳ್ಳಾಗಿ ಅನ್ವಯಿಸಲಾದ ಯಾವುದೇ ಭೌಗೋಳಿಕ ಸಂಕೇತವನ್ನು ಈ ಅಧಿನಿಯಮದಲ್ಲಿ ಸುಳ್ಳು ಭೌಗೋಳಿಕ ಸಂಕೇತ ಎಂಬುದಾಗಿ ಉಲ್ಲೇಖಿಸಲಾಗಿದೆ.

(4) ಒಂದು ಭೌಗೋಳಿಕ ಸಂಕೇತವನ್ನು ಸುಳ್ಳಾಗಿ ನಿರೂಪಿಸಿದ್ದಕ್ಕಾಗಿ ಅಥವಾ ಸರಕುಗಳಿಗೆ ಭೌಗೋಳಿಕ ಸಂಕೇತವನ್ನು ಸುಳ್ಳಾಗಿ ಅನ್ವಯಿಸಿದ್ದಕ್ಕಾಗಿ ಯಾವುದೇ ಕಾನೂನು ವ್ಯವಹರಣೆಯಲ್ಲಿ, ಮಾಲೀಕನ ಅನುಮತಿಯನ್ನು ರುಜುವಾತುಪಡಿಸುವ ಹೊಣೆಗಾರಿಕೆಯು ಆಪಾದಿತನ ಮೇಲೆ ಇರತಕ್ಕದ್ದು.

**39. ಸುಳ್ಳು ಭೌಗೋಳಿಕ ಸಂಕೇತಗಳನ್ನು ಅನ್ವಯಿಸಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು,–

(ಎ) ಯಾವುದೇ ಭೌಗೋಳಿಕ ಸಂಕೇತವನ್ನು ಸುಳ್ಳಾಗಿ ನಿರೂಪಿಸಿದರೆ; ಅಥವಾ

(ಬಿ) ಸರಕುಗಳಿಗೆ ಯಾವುದೇ ಭೌಗೋಳಿಕ ಸಂಕೇತವನ್ನು ಸುಳ್ಳಾಗಿ ಅನ್ವಯಿಸಿದರೆ; ಅಥವಾ

(ಸಿ) ಭೌಗೋಳಿಕ ಸಂಕೇತವನ್ನು ಸುಳ್ಳಾಗಿ ನಿರೂಪಿಸುವ ಅಥವಾ ಸುಳ್ಳಾಗಿ ನಿರೂಪಿಸಲು ಬಳಸುವ ಉದ್ದೇಶಕ್ಕಾಗಿ ಯಾವುದೇ ಬಣ್ಣ, ಪಡಿಯಚ್ಚು, ಯಂತ್ರ, ಪ್ಲೇಟ್ ಅಥವಾ ಇತರೆ ಉಪಕರಣವನ್ನು ತಯಾರಿಸಿದರೆ, ವಿಲೇ ಮಾಡಿದರೆ ಅಥವಾ ಅವುಗಳನ್ನು ತನ್ನ ವಶದಲ್ಲಿಟ್ಟಿದ್ದರೆ; ಅಥವಾ

(ಡಿ) ಯಾವುದೇ ಸರಕುಗಳನ್ನು ತಯಾರಿಸಿದ ಅಥವಾ ಉತ್ಪಾದಿಸಿದ ದೇಶ ಅಥವಾ ಸ್ಥಳವನ್ನು ಸೂಚಿಸುವ ಅಥವಾ ಯಾರು ಅಂಥ ಸರಕುಗಳನ್ನು ತಯಾರಿಸಿ ಅಂಥ ತಯಾರಕರ ಅಥವಾ ಯಾರಿಗಾಗಿ ಸರಕುಗಳನ್ನು ತಯಾರಿಸಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು 71ನೆಯ ಪ್ರಕರಣದ ಮೇರೆಗೆ ಅನ್ವಯಿಸಬೇಕೆಂದು ಅಗತ್ಯಪಡಿಸಿದಾಗ ಅಂಥ ದೇಶ, ಸ್ಥಳ, ಹೆಸರು ಮತ್ತು ವಿಳಾಸಗಳನ್ನು ತಪ್ಪಾಗಿ ಸೂಚಿಸಿದರೆ; ಅಥವಾ

(ಇ) 71ನೆಯ ಪ್ರಕರಣದ ಮೇರೆಗೆ ಅನ್ವಯಿಸಬೇಕೆಂದು ಅಗತ್ಯಪಡಿಸಿದ ಯಾವುದೇ ಸರಕುಗಳಿಗೆ ಅನ್ವಯಿಸುವಾಗ ಮೂಲ ಸಂಕೇತವನ್ನು ಅಕ್ರಮವಾಗಿ ತಿದ್ದಿದರೆ, ಬದಲಾಯಿಸಿದರೆ ಅಥವಾ ಅಳಿಸಿ ಹಾಕಿದರೆ; ಅಥವಾ

(ಎಫ್) ಈ ಪ್ರಕರಣದಲ್ಲಿ ಮೇಲೆ ನಮೂದಿಸಿದ ಯಾವುವೇ ಕೃತ್ಯಗಳ ಪೈಕಿ ಯಾವುದೇ ಕೃತ್ಯವನ್ನು ಮಾಡಿಸಲು ಕಾರಣನಾದರೆ

– ಅವನು ಮೋಸ ಮಾಡುವ ಉದ್ದೇಶದಿಂದ ನಡೆದುಕೊಳ್ಳಲಿಲ್ಲವೆಂದು ಸಾಬೀತುಪಡಿಸಿದ ಹೊರತು, ಆರು ತಿಂಗಳಿಗಿಂತ ಕಡಿಮೆಯಾಗತಕ್ಕದ್ದಲ್ಲದ, ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಿಂತ ಕಡಿಮೆಯಾಗತಕ್ಕದ್ದಲ್ಲದ ಆದರೆ ಎರಡು ಲಕ್ಷ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು, ತೀರ್ಪಿನಲ್ಲಿ ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ತಿಳಿಸಿ, ಆರು ತಿಂಗಳಿಗಿಂತ ಕಡಿಮೆ ಅವಧಿಯ ಕಾರಾವಾಸವನ್ನು ಅಥವಾ ಐವತ್ತು ಸಾವಿರ ರೂಪಾಯಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**40. ಸುಳ್ಳು ಭೌಗೋಳಿಕ ಸಂಕೇತವನ್ನು ಅನ್ವಯಿಸಿ ಸರಕುಗಳನ್ನು ಮಾರಿದ್ದಕ್ಕಾಗಿ ದಂಡನೆ.–** ಯಾವುದೇ ಸುಳ್ಳು ಭೌಗೋಳಿಕ ಸಂಕೇತವನ್ನು ಅನ್ವಯಿಸಿರುವ ಸರಕುಗಳನ್ನು ಅಥವಾ ವಸ್ತುಗಳನ್ನು ಮಾರುವ, ಬಾಡಿಗೆಗೆ ಕೊಡುವ ಅಥವಾ ಮಾರಾಟಕ್ಕಾಗಿ ಇಡುವ ಅಥವಾ ಕಂತಿನ ಮೇಲೆ ನೀಡುವ ಅಥವಾ ಮಾರಾಟಕ್ಕಾಗಿ ತನ್ನ ವಶದಲ್ಲಿ ಇಟ್ಟುಕೊಳ್ಳುವ ಅಥವಾ ಅವುಗಳಿಗೆ 71ನೆಯ ಪ್ರಕರಣದ ಮೇರೆಗೆ ಅಗತ್ಯಪಡಿಸಿರುವಂತೆ ಅವುಗಳನ್ನು ಯಾವ ದೇಶ ಅಥವಾ ಸ್ಥಳದಲ್ಲಿ ಮಾಡಿದೆಯೋ ಅಥವಾ ಉತ್ಪಾದಿಸಲಾಗಿದೆಯೋ ಆ ದೇಶ ಅಥವಾ ಸ್ಥಳ ಅಥವಾ ತಯಾರಕರ ಅಥವಾ ಸರಕುಗಳನ್ನು ಯಾರಿಗಾಗಿ ತಯಾರಿಸಲಾಗಿದೆಯೋ ಅವನ ಹೆಸರು ಮತ್ತು ವಿಳಾಸವನ್ನು ಅಥವಾ ಹಾಗೆ ಅಗತ್ಯಪಡಿಸಿದಂತೆ ಸಂಕೇತಗಳನ್ನು ತಿಳಿಸಿರದ ಯಾರೇ ವ್ಯಕ್ತಿಯು,–

(ಎ) ಈ ಪ್ರಕರಣದ ವಿರುದ್ಧ ಅಪರಾಧವನ್ನು ತಡೆಯಲು ಎಲ್ಲ ಯುಕ್ತ ಮುಂಜಾಗ್ರತೆಗಳನ್ನು ತೆಗೆದುಕೊಂಡಿದ್ದೇನೆಂದು ಅಪರಾಧ ನಡೆದ ಸಮಯದಲ್ಲಿ ಭೌಗೋಳಿಕ ಸಂಕೇತದ ನೈಜತೆಯನ್ನು ಸಂದೇಹಿಸಲು ಕಾರಣವಿದ್ದಿಲ್ಲವೆಂದು ಅಥವಾ ಸರಕುಗಳ ಸಂಬಂಧದಲ್ಲಿ ಯಾವುದೇ ಅಪರಾಧವನ್ನು ಎಸಗಿಲ್ಲವೆಂದು; ಅಥವಾ

(ಬಿ) ಪ್ರಾಸಿಕ್ಯೂಟರ್‌ನ ಒತ್ತಾಯದ ಮೇಲೆ ಅಥವಾ ಅವನ ಪರವಾಗಿ ಮಾಡಲಾದ ಅಂಥ ಸರಕುಗಳನ್ನು ಅಥವಾ ವಸ್ತುಗಳನ್ನು ಯಾರಿಂದ ಪಡೆದಿದ್ದನೋ ಅಂಥವರನ್ನು ಕುರಿತು ತನಗೆ ಲಭ್ಯವಿರುವ ಎಲ್ಲಾ ಮಾಹಿತಿಯನ್ನು ಒದಗಿಸಿದ್ದೇನೆಂದು; ಅಥವಾ

(ಸಿ) ಇತರೆ ರೀತಿಯಲ್ಲಿ ಅರಿಯದೆ ಕಾರ್ಯವನ್ನೆಸಗಿದೆನೆಂದು ರುಜುವಾತುಪಡಿಸಿದ್ದ ಹೊರತು

– ಆರು ತಿಂಗಳಿಗೆ ಕಡಿಮೆಯಾಗತಕ್ಕದ್ದಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಿಂತ ಕಡಿಮೆಯಾಗತಕ್ಕದ್ದಲ್ಲದ ಆದರೆ ಎರಡು ಲಕ್ಷ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು, ತೀರ್ಪಿನಲ್ಲಿ ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ನಮೂದಿಸಿ, ಆರು ತಿಂಗಳಿಗಿಂತ ಕಡಿಮೆ ಅವಧಿಯ ಕಾರಾವಾಸ ಅಥವಾ ಐವತ್ತು ಸಾವಿರ ರೂಪಾಯಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**41. ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವಾದ ಮೇಲೆ ಹೆಚ್ಚಿಸಿದ ದಂಡನೆ.–** 39ನೇ ಪ್ರಕರಣ ಅಥವಾ 40ನೇ ಪ್ರಕರಣದ ಮೇರೆಗೆ ಯಾರನ್ನು ಈಗಾಗಲೇ ಒಂದು ಅಪರಾಧದ ಅಪರಾಧಿಯೆಂದು ನಿರ್ಣಯಿಸಲಾಗಿದೆಯೋ ಅಂಥ ಯಾವುದೇ ಅಪರಾಧಕ್ಕಾಗಿ ಪುನಃ ಅಪರಾಧಿಯೆಂದು ನಿರ್ಣಯಿಸಿದಾಗ ಎರಡನೆಯ ಮತ್ತು ಪ್ರತಿಯೊಂದು ತರುವಾಯದ ಅಪರಾಧಕ್ಕಾಗಿ ಒಂದು ವರ್ಷಕ್ಕಿಂತ ಕಡಿಮೆಯಾಗತಕ್ಕದ್ದಲ್ಲದ, ಆದರೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಾಗತಕ್ಕದ್ದಲ್ಲದ ಆದರೆ ಎರಡು ಲಕ್ಷ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು, ತೀರ್ಪಿನಲ್ಲಿ ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ನಮೂದಿಸಿ, ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ಅಥವಾ ಒಂದು ಲಕ್ಷ ರೂಪಾಯಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು:

ಮತ್ತೂ ಪರಂತು, ಈ ಪ್ರಕರಣದ ಉದ್ದೇಶಗಳಿಗಾಗಿ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಯಾವುದೇ ಅಪರಾಧ ನಿರ್ಣಯದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**42. ಭೌಗೋಳಿಕ ಸಂಕೇತವು ನೋಂದಣಿಯಾಗಿದೆಯೆಂದು ಸುಳ್ಳಾಗಿ ನಿರೂಪಿಸಿದ್ದಕ್ಕಾಗಿ ದಂಡನೆ.–** (1) ಯಾರೇ ವ್ಯಕ್ತಿಯು, –

(ಎ) ನೋಂದಾಯಿತ ಭೌಗೋಳಿಕ ಸಂಕೇತವಾಗಿಲ್ಲದ ಒಂದು ಭೌಗೋಳಿಕ ಸಂಕೇತದ ಸಂಬಂಧದಲ್ಲಿ ಅದು ನೋಂದಾಯಿತ ಭೌಗೋಳಿಕ ಸಂಕೇತವಾಗಿದೆಯೆಂಬುದಾಗಿ; ಅಥವಾ

(ಬಿ) ಯಾವ ಸರಕುಗಳ ಸಂಬಂಧದಲ್ಲಿ ಭೌಗೋಳಿಕ ಸಂಕೇತವು ನೋಂದಾಯಿತವಾಗಿಲ್ಲವೋ ಆ ಸರಕುಗಳ ಸಂಬಂಧದಲ್ಲಿ ಅದು ನೋಂದಾಯಿತವಾಗಿದೆಯೆಂಬುದಾಗಿ; ಅಥವಾ

(ಸಿ) ಒಂದು ಭೌಗೋಳಿಕ ಸಂಕೇತದ ನೋಂದಣಿಯು, ರಿಜಿಸ್ಟರಿನಲ್ಲಿ ನಮೂದಿಸಲಾದ ಪರಿಸ್ಥಿತಿಗಳನ್ನು ಗಮನಿಸಲಾಗಿ ಯಾವ ಪರಿಸ್ಥಿತಿಗಳಲ್ಲಿ ಭೌಗೋಳಿಕ ಸಂಕೇತದ ಅನನ್ಯ ಬಳಕೆಯ ಹಕ್ಕನ್ನು ನೀಡುವುದಿಲ್ಲವೋ ಆ ಯಾವುದೇ ಪರಿಸ್ಥಿತಿಯಲ್ಲಿ ಅದನ್ನು ನೀಡುವುದೆಂಬುದಾಗಿ

– ಯಾವುದೇ ನಿರೂಪಣೆಯನ್ನು ಮಾಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು (1)ನೆಯ ಉಪಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ "ನೋಂದಾಯಿಸಿದ ಭೌಗೋಳಿಕ ಸಂಕೇತ" ಅಥವಾ ನೋಂದಣಿಯನ್ನು ವ್ಯಕ್ತವಾಗಿಯಾಗಲಿ ಅಥವಾ ಇಂಗಿತವಾಗಿಯಾಗಲಿ ಉಲ್ಲೇಖಿಸಿರುವ ಯಾವುದೇ ಇತರೆ ಅಭಿವ್ಯಕ್ತಿ ಅಥವಾ "ನೋಂ.ಭೌ.ಸಂ." ಅಂಥ ಚಿಹ್ನೆಯ ಪದಗಳನ್ನು ಭೌಗೋಳಿಕ ಸಂಕೇತಕ್ಕೆ ಸಂಬಂಧಪಟ್ಟಂತೆ ಭಾರತದಲ್ಲಿ ಬಳಸುವಾಗ, ಈ ಕೆಳಕಂಡ ಸಂದರ್ಭಗಳಲ್ಲಿ ಹೊರತು, –

(ಎ) ಭಾರತದ ಹೊರಗಿನ ಯಾವ ದೇಶದ ಕಾನೂನಿನ ಮೇರೆಗೆ ಉಲ್ಲೇಖಿಸಲಾದ ನೋಂದಣಿಯು ವಾಸ್ತವವಾಗಿ ಜಾರಿಯಲ್ಲಿರುವುದೋ ಆ ದೇಶದ ಕಾನೂನಿನ ಮೇರೆಗೆ ನೋಂದಣಿಗೆ ಆ ಪದ ಅಥವಾ ಪದಾವಳಿ, ಸಂಕೇತ ಅಥವಾ ಚಿಹ್ನೆ – ಇವುಗಳನ್ನು ಎಷ್ಟು ಗಾತ್ರದ ಅಕ್ಷರಗಳಲ್ಲಿ ನಿರೂಪಿಸಲಾಗಿದೆಯೋ ಕನಿಷ್ಠ ಅಷ್ಟು ಗಾತ್ರದ ಅಕ್ಷರಗಳಲ್ಲಿ ಆ ಪದ ಅಥವಾ ಪದಾವಳಿ, ಸಂಕೇತ ಅಥವಾ ಚಿಹ್ನೆಗಳು ಇತರ ನೇರ ಸಹಯೋಗದೊಂದಿಗೆ ಭಾರತದ ಹೊರಗಿನ ಯಾವ ದೇಶದ ಕಾನೂನಿನ ಮೇರೆಗೆ ಉಲ್ಲೇಖಿಸಲಾದ ನೋಂದಣಿಯು ವಾಸ್ತವವಾಗಿ ಜಾರಿಯಲ್ಲಿರುವುದೋ ಆ ದೇಶದಲ್ಲಿ ಬಳಸಿರುವಲ್ಲಿ; ಅಥವಾ

(ಬಿ) ಆ ಇತರ ಪದಾವಳಿ, ಸಂಕೇತ ಅಥವಾ ಚಿಹ್ನೆಯು ಸ್ವತಃ (ಎ) ಖಂಡದಲ್ಲಿ ನಮೂದಿಸಿದಂಥ ನೋಂದಣಿಗೆ ಮಾಡಿದ ಉಲ್ಲೇಖವೆಂಬುದಾಗಿ ಸೂಚಿಸುವ ಹಾಗೆ ಇರುವಲ್ಲಿ; ಅಥವಾ

(ಸಿ) ಭಾರತದ ಹೊರಗಿನ ದೇಶದ ಕಾನೂನಿನ ಮೇರೆಗೆ ನೋಂದಣಿಯಾದ ಭೌಗೋಳಿಕ ಸಂಕೇತದ ಸಂಬಂಧದಲ್ಲಿ ಮತ್ತು ಆ ದೇಶದಲ್ಲಿಯ ಬಳಕೆಗಾಗಿ ಆ ದೇಶಕ್ಕೆ ರಫ್ತು ಮಾಡುವ ಸರಕುಗಳ ಸಂಬಂಧದಲ್ಲಿ ಮಾತ್ರ ಅಂಥ ಪದವನ್ನು ಬಳಸಲಾಗಿರುವಲ್ಲಿ

– ರಿಜಿಸ್ಟರಿನಲ್ಲಿನ ನೋಂದಣಿಗೆ ಮಾಡಲಾದ ಉಲ್ಲೇಖವೆಂದು ತಾತ್ಪರ್ಯವಾಗುವುದಾಗಿ ಭಾವಿಸತಕ್ಕದ್ದು.

**43. ಒಂದು ವ್ಯವಹಾರದ ಸ್ಥಳವನ್ನು ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಗೆ ಸಂಬಂಧಪಟ್ಟಿರುವುದೆಂದು ಅನುಚಿತವಾಗಿ ವರ್ಣಿಸಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ತನ್ನ ವ್ಯವಹಾರ ಸ್ಥಳದ ಮೇಲೆ ಅಥವಾ ಅವನು ನೀಡಿದ ಯಾವುದೇ ದಸ್ತಾವೇಜಿನ ಮೇಲೆ ಅಥವಾ ಅನ್ಯಥಾ ಅವನ ವ್ಯವಹಾರ ಸ್ಥಳವು ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿ ಎಂದು ಅಥವಾ ಅದರೊಂದಿಗೆ ಅಧಿಕೃತವಾಗಿ ಸಂಬಂಧ ಹೊಂದಿದೆಯೆಂದು ಸಕಾರಣವಾಗಿ ನಂಬಲು ಕಾರಣವಾಗುವಂಥ ಪದಗಳನ್ನು ಬಳಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**44. ರಿಜಿಸ್ಟರಿನಲ್ಲಿ ನಮೂದುಗಳನ್ನು ಸುಳ್ಳಾಗಿಸಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ರಿಜಿಸ್ಟರಿನಲ್ಲಿ ಸುಳ್ಳು ನಮೂದನ್ನು ಮಾಡಿದ ಅಥವಾ ಮಾಡುವಂತೆ ಪ್ರೇರೇಪಿಸಿದ ಅಥವಾ ರಿಜಿಸ್ಟರಿನಲ್ಲಿ ನಮೂದು ಮಾಡಬೇಕಾದ ಪ್ರತಿಯನ್ನು ಸುಳ್ಳು ತಾತ್ಪರ್ಯ ಬರುವಂಥ ರೀತಿಯಲ್ಲಿ ಬರೆದರೆ, ನಮೂದು ಅಥವಾ ಬರಹವು ತಪ್ಪು ಎಂದು ಗೊತ್ತಿದ್ದರೂ ಅಂಥ ಯಾವುದೇ ಬರಹದ ಸಾಕ್ಷ್ಯವಾಗಿ ಹಾಜರುಪಡಿಸಿದರೆ ಅಥವಾ ನೀಡಿದರೆ ಅಥವಾ ಹಾಜರುಪಡಿಸುವಂತೆ ಅಥವಾ ನೀಡುವಂತೆ ಪ್ರೇರೇಪಿಸಿದರೆ ಅಂಥ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**45. ಕೆಲವು ಪ್ರಕರಣಗಳಲ್ಲಿ ಅಪರಾಧವಾಗದಿರುವುದು.–** 39ನೆಯ, 40ನೆಯ ಮತ್ತು 41ನೆಯ ಪ್ರಕರಣಗಳ ಉಪಬಂಧಗಳು, ಒಂದು ನೋಂದಾಯಿತ ಭೌಗೋಳಿಕ ಸಂಕೇತದ ಅಥವಾ ಅಂಥ ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನ ಸಂಬಂಧದಲ್ಲಿ, ಈ ಅಧಿನಿಯಮದ ಮೂಲಕ ಸೃಜಿಸಿದ ಅಥವಾ ಅಂಗೀಕರಿಸಿದ ಹಕ್ಕುಗಳಿಗೊಳಪಟ್ಟಿರತಕ್ಕದ್ದು ಮತ್ತು ಯಾವುದೇ ಕಾರ್ಯ ಅಥವಾ ಕಾರ್ಯದ ಲೋಪವನ್ನು, ಈ ಕೆಳಕಂಡ ಸಂದರ್ಭಗಳಲ್ಲಿ ಅಪರಾಧವೆಂದು ಭಾವಿಸತಕ್ಕದ್ದಲ್ಲ,–

(ಎ) ಆಪಾದಿಸಲಾದ ಅಪರಾಧವು ನೋಂದಾಯಿಸಿದ ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದ್ದಾಗಿದ್ದರೆ ಮತ್ತು ಈ ಅಧಿನಿಯಮದ ಮೇರೆಗೆ ಅಂಥ ಕಾರ್ಯ ಅಥವಾ ಕಾರ್ಯಲೋಪಕ್ಕೆ ಅನುಮತಿ ನೀಡಿದ್ದಾಗ ; ಮತ್ತು

(ಬಿ) ಆಪಾದಿಸಲಾದ ಅಪರಾಧವು ನೋಂದಾಯಿಸಿದ ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದ್ದಾಗಿದ್ದರೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನು ಮೇರೆಗೆ ಅಂಥ ಕಾರ್ಯ ಅಥವಾ ಕಾರ್ಯಲೋಪಕ್ಕೆ ಅನುಮತಿ ನೀಡಿದ್ದಾಗ.

**46. ಸರಕುಗಳ ಮುಟ್ಟುಗೋಲು.–** (1) ಒಬ್ಬ ವ್ಯಕ್ತಿಯು 39ನೆಯ ಪ್ರಕರಣದ ಅಥವಾ 40ನೆಯ ಪ್ರಕರಣದ ಅಥವಾ 41ನೆಯ ಪ್ರಕರಣದ ಮೇರೆಗೆ ಒಬ್ಬ ನಿರ್ಣೀತ ಅಪರಾಧಿಯಾಗಿರುವಲ್ಲಿ ಅಥವಾ ಉದ್ದೇಶಪೂರ್ವಕವಲ್ಲದೆ ಅಥವಾ ಮೋಸಗೊಳಿಸುವ ಉದ್ದೇಶವಿಲ್ಲದೆ ಅವನು ಕಾರ್ಯವೆಸಗಿದನೆಂದು ರುಜುವಾತು ಆದ ಮೇಲೆ 39ನೆಯ ಪ್ರಕರಣ ಅಥವಾ 40ನೆಯ ಪ್ರಕರಣದ ಮೇರೆಗೆ ಅಥವಾ ಆ ಪ್ರಕರಣದ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಇವುಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳು ರುಜುವಾತು ಆದ ಮೇಲೆ 40ನೆಯ ಪ್ರಕರಣದ ಮೇರೆಗೆ ಅಪರಾಧದ ನಿರ್ದೋಷಿಯೆಂದು ನಿರ್ಣಯಿಸಿರುವಲ್ಲಿ, ಅವನನ್ನು ದೋಷಿಯೆಂದು ನಿರ್ಣಯಿಸುವ ಅಥವಾ ನಿರ್ದೋಷಿಯೆಂದು ನಿರ್ಣಯಿಸುವ ನ್ಯಾಯಾಲಯವು, ಅಪರಾಧವನ್ನೆಸಗಿದ ಅಥವಾ ಆದರೆ ಮೇಲೆ ಹೇಳಿದ ಅಂಥ ರುಜುವಾತು ಆಗದೆ ಹೋಗಿದ್ದರೆ ಎಸಗಬಹುದಾಗಿದ್ದ ಅಪರಾಧದ ಸಂಬಂಧದಲ್ಲಿ ಎಲ್ಲ ಸರಕುಗಳನ್ನು ಮತ್ತು ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ನಿರ್ದೇಶಿಸಬಹುದು.

(2) ಅಪರಾಧ ನಿರ್ಣಯವಾದ ಮೇಲೆ ಮುಟ್ಟುಗೋಲು ಹಾಕಿಕೊಳ್ಳುವುದನ್ನು ನಿರ್ದೇಶಿಸಿರುವಲ್ಲಿ ಮತ್ತು ಅಪರಾಧ ನಿರ್ಣಯದ ವಿರುದ್ಧ ಅಪೀಲು ಸಲ್ಲಿಸಿದಾಗ, ಮುಟ್ಟುಗೋಲು ಹಾಕಿಕೊಳ್ಳುವುದರ ವಿರುದ್ಧವೂ ಸಹ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(3) ಖುಲಾಸೆಯಾದ ಮೇಲೆ ಮುಟ್ಟುಗೋಲು ಹಾಕಿಕೊಳ್ಳುವುದನ್ನು ನಿರ್ದೇಶಿಸಿದಾಗ ಮತ್ತು ಅಂಥ ನಿರ್ದೇಶನಕ್ಕೆ ಸಂಬಂಧಿಸಿದ ಸರಕುಗಳ ಅಥವಾ ವಸ್ತುಗಳ ಮೌಲ್ಯವು ಐವತ್ತು ರೂಪಾಯಿಗೆ ಮೀರುವಂತಿದ್ದಾಗ, ಹಾಗೆ ಮುಟ್ಟುಗೋಲು ಹಾಕಿಕೊಳ್ಳಲು ಯಾವ ನ್ಯಾಯಾಲಯ ನಿರ್ದೇಶಿಸಿದೆಯೋ ಆ ನ್ಯಾಯಾಲಯದ ಶಿಕ್ಷೆಯ ವಿರುದ್ಧ ಅಪೀಲು ಹೂಡಬಹುದಾದ ಪ್ರಕರಣಗಳಲ್ಲಿ ಯಾವ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರುವುದೋ ಆ ನ್ಯಾಯಾಲಯಕ್ಕೆ ನಿರ್ದೇಶನದ ದಿನಾಂಕದಿಂದ 30 ದಿನಗಳೊಳಗಾಗಿ ಮುಟ್ಟುಗೋಲಿನ ವಿರುದ್ಧ ಅಪೀಲು ಸಲ್ಲಿಸಬಹುದು.

(4) ಅಪರಾಧ ನಿರ್ಣಯವಾದ ಮೇಲೆ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ನಿರ್ದೇಶಿಸಿದಾಗ ಅಂಥ ವ್ಯಕ್ತಿಯನ್ನು ಅಪರಾಧ ನಿರ್ಣೀತನೆಂದು ಯಾವ ನ್ಯಾಯಾಲಯದ ಮುಂದೆ ನಿರ್ಣಯಿಸಲಾಗಿದೆಯೋ ಆ ನ್ಯಾಯಾಲಯವು ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಮುಟ್ಟುಗೋಲು ಹಾಕಿಕೊಂಡ ಯಾವುದೇ ವಸ್ತುವನ್ನು ನಾಶಗೊಳಿಸಬೇಕೆಂದು ಅಥವಾ ಇತರೆ ರೀತಿಯಲ್ಲಿ ವಿಲೇ ಮಾಡಬೇಕೆಂದು ಆದೇಶಿಸಬಹುದು.

**47. ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ನಿಯೋಜನೆಗೊಂಡ ಕೆಲವು ವ್ಯಕ್ತಿಗಳಿಗೆ ವಿನಾಯಿತಿ.–** 39ನೆಯ ಪ್ರಕರಣದ ಮೇರೆಗೆ ಒಂದು ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಯು, ಈ ಕೆಳಕಂಡ ರೀತಿಯಲ್ಲಿ ರುಜುವಾತು ಪಡಿಸಿದಲ್ಲಿ ಅವನನ್ನು ನಿರ್ದೋಷಿಯೆಂದು ಖುಲಾಸೆಮಾಡತಕ್ಕದ್ದು,–

(ಎ) ಅವನ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಅವನು ಇತರೆ ವ್ಯಕ್ತಿಗಳ ಪರವಾಗಿ ಭೌಗೋಳಿಕ ಸಂಕೇತಗಳನ್ನು ಅನ್ವಯಿಸಲು ಅಥವಾ ಸಂದರ್ಭಾನುಸಾರ, ಭೌಗೋಳಿಕ ಸಂಕೇತಗಳನ್ನು ಮಾಡುವುದಕ್ಕೆ ಅಥವಾ ಮಾಡಲು ಬಳಸುವುದಕ್ಕಾಗಿ ಬಣ್ಣಗಳನ್ನು, ಪಡಿಯಚ್ಚುಗಳನ್ನು, ಯಂತ್ರಗಳನ್ನು, ಪ್ಲೇಟುಗಳನ್ನು ಅಥವಾ ಇತರೆ ಉಪಕರಣಗಳನ್ನು ಮಾಡಲು ನಿಯೋಜಿತನಾಗಿರುವನೆಂದು;

(ಬಿ) ಅವನು ತನ್ನ ಪ್ರಭಾರದ ವಿಷಯದಲ್ಲಿ ಹಾಗೆ ನಿಯೋಜನೆಗೊಂಡಿರುವುದಾಗಿ ಮತ್ತು ಸರಕುಗಳ ಮಾರಾಟವನ್ನು ಅವಲಂಬಿಸಿ ಲಾಭಾಂಶ ಅಥವಾ ಕಮೀಷನ್ ಮೂಲಕ ಅಂಥ ಸರಕುಗಳಲ್ಲಿ ಅಥವಾ ವಸ್ತುಗಳಲ್ಲಿ ಆಸಕ್ತಿ ಹೊಂದಿಲ್ಲದಿರುವನೆಂದು;

(ಸಿ) ಆಪಾದಿತ ಅಪರಾಧವನ್ನೆಸಗುವ ಸಮಯದಲ್ಲಿ ಅಪರಾಧವಾಗುವುದನ್ನು ತಡೆಯಲು ಎಲ್ಲ ಯುಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದನೆಂದು, ಭೌಗೋಳಿಕ ಸಂಕೇತದ ನೈಜತೆಯ ಬಗ್ಗೆ ಅನುಮಾನ ಪಡಲು ಕಾರಣಗಳಿಲ್ಲವೆಂದು; ಮತ್ತು

(ಡಿ) ಪ್ರಾಸಿಕ್ಯೂಟರನ ಅಥವಾ ಅವನ ಪರವಾದ ಕೋರಿಕೆಯ ಮೇಲೆ, ಅವನು ಯಾರ ಪರವಾಗಿ ಭೌಗೋಳಿಕ ಸಂಕೇತ ಅನ್ವಯಿಸಿರುವನೋ ಆ ವ್ಯಕ್ತಿಗಳ ಸಂಬಂಧದಲ್ಲಿ ಅವನ ಅಧಿಕಾರದಲ್ಲಿರುವ ಎಲ್ಲ ಮಾಹಿತಿಗಳನ್ನು ನೀಡಿರುವನೆಂದು.

**48. ಆಪಾದಿತನು ನೋಂದಣಿಯು ಅಸಿಂಧುವಾಗಿದೆಯೆಂದು ವಾದಿಸಿದಾಗ ಕಾರ್ಯವಿಧಾನ.–** (1) 39ನೆಯ ಪ್ರಕರಣದ ಅಥವಾ 40ನೇ ಪ್ರಕರಣದ ಅಥವಾ 41ನೆಯ ಪ್ರಕರಣದ ಮೇರೆಗೆ ಆಪಾದಿಸಲಾದ ಅಪರಾಧವು ಒಂದು ನೋಂದಾಯಿತ ಭೌಗೋಳಿಕ ಸಂಕೇತಕ್ಕೆ ಸಂಬಂಧಪಟ್ಟಿರುವಾಗ ಮತ್ತು ಭೌಗೋಳಿಕ ಸಂಕೇತದ ನೋಂದಣಿಯು ಅಸಿಂಧುವಾಗಿದೆಯೆಂದು ಆಪಾದಿತನು ವಾದಿಸಿರುವಾಗ, ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು,–

(ಎ) ಅಂಥ ಪ್ರತಿವಾದವು ಮೊದಲನೋಟಕ್ಕೆ ಸಮರ್ಥನೀಯವಾಗಿದೆಯೆಂದು ನ್ಯಾಯಾಲಯವು ಮನಗಂಡರೆ, ಆಪಾದನೆಯ ಬಗ್ಗೆ ಕ್ರಮ ಮುಂದುವರಿಸತಕ್ಕದ್ದಲ್ಲ, ಆದರೆ ನೋಂದಣಿಯು ಅಸಿಂಧುವೆಂಬ ಆಧಾರದ ಮೇಲೆ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಈ ಅಧಿನಿಯಮದ ಮೇರೆಗೆ ಅಪೀಲು ಮಂಡಲಿಯ ಮುಂದೆ ಅರ್ಜಿಯನ್ನು ದಾಖಲ್ಮಾಡುವುದಕ್ಕೆ ಆಪಾದಿತನಿಗೆ ಸಾಧ್ಯವಾಗುವಂತೆ ಆಪಾದಿತನ ವಾದವನ್ನು ದಾಖಲು ಮಾಡಿದ ದಿನಾಂಕದಿಂದ ಮೂರು ತಿಂಗಳವರೆಗೆ ವ್ಯವಹರಣೆಯನ್ನು ಮುಂದೂಡತಕ್ಕದ್ದು;

(ಬಿ) ಹಾಗೆ ನಿಗದಿಪಡಿಸಿದ್ದ ಕಾಲಮಿತಿಯೊಳಗೆ ಅಥವಾ ಸಾಕಷ್ಟು ಕಾರಣಗಳಿಗಾಗಿ ನ್ಯಾಯಾಲಯವು ಅವಕಾಶ ಮಾಡಿಕೊಟ್ಟಂಥ ಹೆಚ್ಚಿನ ಅವಧಿಯೊಳಗೆ, ಅಂಥ ಅರ್ಜಿಯನ್ನು ಸಲ್ಲಿಸಿದ್ದನೆಂದು ಆಪಾದಿತನು

ನ್ಯಾಯಾಲಯಕ್ಕೆ ರುಜುವಾತುಪಡಿಸಿದರೆ, ಪ್ರಾಸಿಕ್ಯೂಷನ್‌ನಲ್ಲಿಯ ಹೆಚ್ಚಿನ ವ್ಯವಹರಣೆಗಳನ್ನು ಸರಿಪಡಿಸುವ ಸಲುವಾಗಿ ಇರುವ ಅಂಥ ಅರ್ಜಿಯು ವಿಲೆ ಆಗುವವರೆಗೆ ಹಾಗೆ ತಡೆಗೊಂಡಿರತಕ್ಕದ್ದು;

(ಸಿ) ಮೂರು ತಿಂಗಳ ಅವಧಿಯೊಳಗಾಗಿ ಅಥವಾ ನ್ಯಾಯಾಲಯವು ಅನುಮತಿಸಿರುವಂಥ ವಿಸ್ತರಿಸಲಾದ ಅವಧಿಯೊಳಗೆ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಅಪೀಲು ಮಂಡಲಿಗೆ ಅರ್ಜಿ ಸಲ್ಲಿಸಲು ಆಪಾದಿತನು ತಪ್ಪಿದರೆ, ನ್ಯಾಯಾಲಯವು ನೋಂದಣಿಯು ಸಿಂಧುವಾಗಿದ್ದಿದ್ದರೆ ಹೇಗೋ ಹಾಗೆ ಪ್ರಕರಣವನ್ನು ಮುಂದುವರಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಪರಾಧದ ದೂರನ್ನು ಸಲ್ಲಿಸುವುದಕ್ಕೆ ಮುಂಚೆಯೇ ಪ್ರಶ್ನೆಯಲ್ಲಿರುವ ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದ ರಿಜಿಸ್ಟರನ್ನು, ಅದರ ನೋಂದಣಿಯು ಅಸಿಂಧುವಾಗಿರುವ ಕಾರಣದ ಮೇಲೆ ಸರಿಪಡಿಸುವುದಕ್ಕಾಗಿ ಈಗಾಗಲೆ ಯುಕ್ತವಾಗಿ ನ್ಯಾಯಾಧಿಕರಣದ ಮುಂದೆ ಯಾವುದೇ ಅರ್ಜಿ ಸಲ್ಲಿಸಿರುವಲ್ಲಿ ಮತ್ತು ಅದು ಬಾಕಿ ಇರುವಲ್ಲಿ, ನ್ಯಾಯಾಲಯವು ಮೇಲೆ ಹೇಳಿದ ಅರ್ಜಿಯ ವಿಲೆಯ ಬಗ್ಗೆ ಪ್ರಾಸಿಕ್ಯೂಷನ್‌ನಲ್ಲಿ ಬಾಕಿ ಇರುವ ಹೆಚ್ಚಿನ ವ್ಯವಹರಣೆಗಳನ್ನು ತಡೆಹಿಡಿಯತಕ್ಕದ್ದು ಮತ್ತು ಅವನ ಭೌಗೋಳಿಕ ಸಂಕೇತದ ನೋಂದಣಿಯ ಮೇಲೆ ಫಿರ್ಯಾದಿಯು ಅವಲಂಬಿತವಾಗಿರುವಷ್ಟರ ಮಟ್ಟಿಗೆ ಸರಿಪಡಿಸಲು ಸಲ್ಲಿಸಿದ ಅರ್ಜಿಯ ಫಲಿತಾಂಶಕ್ಕನುಸಾರವಾಗಿ ಆಪಾದಿತನ ವಿರುದ್ಧದ ಆರೋಪವನ್ನು ನಿರ್ಧರಿಸತಕ್ಕದ್ದು.

**49. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧ ನಡೆದ ಸಮಯದಲ್ಲಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಅದರ ವ್ಯವಹಾರ ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ಬಗ್ಗೆ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ವ್ಯವಹರಣೆಗೆ ಮತ್ತು ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಅವನನ್ನು ಈ ಉಪಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ಆ ಪ್ರಕಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಒಂದು ವ್ಯಾಪಾರೀ ಸಂಸ್ಥೆಯನ್ನು ಅಥವಾ ಇತರೆ ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ವ್ಯಾಪಾರೀ ಸಂಸ್ಥೆಯ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ವ್ಯಾಪಾರಿ ಸಂಸ್ಥೆಯ ಪಾಲುದಾರ.

**50. ಕೆಲವು ಅಪರಾಧಗಳ ಸಂಜ್ಞಾನ ಮತ್ತು ಶೋಧನೆ ಹಾಗೂ ಅಭಿಗ್ರಹಣಕ್ಕಾಗಿ ಪೊಲೀಸ್ ಅಧಿಕಾರಿಯ ಅಧಿಕಾರಗಳು.–** (1) 42ನೆಯ ಪ್ರಕರಣ ಅಥವಾ 43ನೇ ಪ್ರಕರಣ ಅಥವಾ 44ನೇ ಪ್ರಕರಣದ ಮೇರೆಗೆ ಅಪರಾಧವು ನಡೆದಿದೆಯೆಂದು ರಿಜಿಸ್ಟ್ರಾರನು ಲಿಖಿತದಲ್ಲಿ ಅಥವಾ ಅವನಿಂದ ಅಧಿಕೃತಗೊಂಡ ಯಾರೇ ಅಧಿಕಾರಿಯು ಲಿಖಿತ ದೂರಿನ ಮೇಲಲ್ಲದೆ ಯಾವ ನ್ಯಾಯಾಲಯವೂ ಅದರ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, 42ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಸಂಬಂಧದಲ್ಲಿ, ನ್ಯಾಯಾಲಯವು, ಯಾವುದೇ ಸರಕುಗಳ ಸಂಬಂಧದಲ್ಲಿ ನೋಂದಾಯಿತ ಭೌಗೋಳಿಕ ಸಂಕೇತವನ್ನು ನೋಂದಾಯಿಸಲಾಗಿದೆಯೆಂದು ನಿರೂಪಿಸಿದ್ದು

ವಾಸ್ತವವಾಗಿ ಹಾಗೆ ಅದನ್ನು ನೋಂದಾಯಿಸಿಲ್ಲವೆಂಬುದಾಗಿ ರಿಜಿಸ್ಟ್ರಾರನು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ನ್ಯಾಯಾಲಯವು ಆ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದು.

(2) ಮಹಾನಗರ ಮ್ಯಾಜಿಸ್ಟ್ರೇಟ್‌ನ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

(3) 39ನೇ ಪ್ರಕರಣದ ಅಥವಾ 40ನೇ ಪ್ರಕರಣದ ಅಥವಾ 41ನೇ ಪ್ರಕರಣದ ಮೇರೆಗಿನ ಅಪರಾಧಗಳು ಸಂಜ್ಞೇಯ ಅಪರಾಧಗಳಾಗಿರತಕ್ಕದ್ದು.

(4) ಪೊಲೀಸ್ ಉಪಅಧೀಕ್ಷಕನ ಅಥವಾ ತತ್ಸಮಾನ ದರ್ಜೆಗಿಂತ ಕಡಿಮೆ ಇಲ್ಲದ ಯಾರೇ ಪೊಲೀಸ್ ಅಧಿಕಾರಿಯು, (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುವೇ ಅಪರಾಧಗಳನ್ನು ಮಾಡಲಾಗಿದೆಯೆಂದು ಅಥವಾ ಮಾಡಲಾಗುತ್ತಿದೆಯೆಂದು ಅಥವಾ ಮಾಡುವ ಸಂಭವವಿದೆಯೆಂದು ಮನವರಿಕೆಯಾದರೆ, ಅಪರಾಧ ಎಸಗಲು ಕಾರಣವಾದ ಅಂಥ ಸರಕುಗಳನ್ನು, ಬಣ್ಣಗಳು, ಪಡಿಯಚ್ಚು, ಯಂತ್ರ, ಪ್ಲೇಟ್, ಇತರೆ ಉಪಕರಣ ಅಥವಾ ವಸ್ತುಗಳನ್ನು ಅವು ಕಂಡುಬರುವಲ್ಲೆಲ್ಲ ಯಾವುದೇ ವಾರಂಟಿಲ್ಲದೆ ಶೋಧಿಸಬಹುದು ಮತ್ತು ಅಭಿಗ್ರಹಣ ಮಾಡಿಕೊಳ್ಳಬಹುದು ಮತ್ತು ಹಾಗೆ ಅಭಿಗ್ರಹಣ ಮಾಡಿಕೊಂಡ ಎಲ್ಲ ವಸ್ತುಗಳನ್ನು, ಸಾಧ್ಯವಾದಷ್ಟು ಬೇಗನೆ, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ಅಥವಾ ಸಂದರ್ಭಾನುಸಾರ ಮಹಾನಗರ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು:

ಪರಂತು, ಯಾವುದೇ ಶೋಧನೆ ಮತ್ತು ಅಭಿಗ್ರಹಣ ಮಾಡುವುದಕ್ಕೆ ಮುಂಚೆ, ಆ ಪೊಲೀಸ್ ಅಧಿಕಾರಿಯು, ಭೌಗೋಳಿಕ ಸಂಕೇತಕ್ಕೆ ಸಂಬಂಧಪಟ್ಟ ಅಪರಾಧದಲ್ಲಿ ಒಳಗೊಂಡ ವಾಸ್ತವಾಂಶಗಳ ಮೇಲೆ ರಿಜಿಸ್ಟ್ರಾರನ ಅಭಿಪ್ರಾಯ ಪಡೆಯತಕ್ಕದ್ದು ಮತ್ತು ಹಾಗೆ ಪಡೆದ ಅಭಿಪ್ರಾಯಕ್ಕೆ ಅನುಸಾರವಾಗಿ ನಡೆದುಕೊಳ್ಳತಕ್ಕದ್ದು.

(5) 4ನೇ ಉಪಪ್ರಕರಣದ ಮೇರೆಗೆ ಅಭಿಗ್ರಹಣ ಮಾಡಿದಂಥ ಯಾವುದೇ ವಸ್ತುವಿನಲ್ಲಿ ಆಸಕ್ತಿ ಹೊಂದಿರುವ ಯಾರೇ ವ್ಯಕ್ತಿಯು, ಅಂಥ ಅಭಿಗ್ರಹಣ ಮಾಡಿಕೊಂಡ 15 ದಿನಗಳೊಳಗಾಗಿ, ಅಂಥ ವಸ್ತುವನ್ನು ತನಗೆ ವಾಪಸು ಕೊಡುವಂತೆ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಸಂದರ್ಭಾನುಸಾರ, ಮಹಾನಗರ ಮ್ಯಾಜಿಸ್ಟ್ರೇಟನಿಗೆ ಅರ್ಜಿ ಸಲ್ಲಿಸಿಕೊಳ್ಳಬಹುದು ಮತ್ತು ಮ್ಯಾಜಿಸ್ಟ್ರೇಟನು ಅರ್ಜಿಯ ಸುನಾವಣೆಮಾಡಿ ಪ್ರಾಸಿಕ್ಯೂಷನ್ ನಡೆಸಿದ ನಂತರ, ಅರ್ಜಿಯ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶ ಮಾಡತಕ್ಕದ್ದು.

**51. ಪ್ರಾಸಿಕ್ಯೂಷನ್ನಿನ ಪ್ರತಿವಾದದ ವೆಚ್ಚಗಳು.–** ಈ ಅಧಿನಿಯಮದ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ, ನ್ಯಾಯಾಲಯವು, ಪ್ರಕರಣದ ಎಲ್ಲ ಸನ್ನಿವೇಶಗಳನ್ನು ಮತ್ತು ಪಕ್ಷಕಾರರ ವರ್ತನೆಯನ್ನು ಗಮನದಲ್ಲಿಟ್ಟುಕೊಂಡು ನ್ಯಾಯಾಲಯವು ಸೂಕ್ತವೆಂದು ಭಾವಿಸುವಂತೆ ಆಪಾದಿತನು ಫಿರ್ಯಾದಿಗೆ ಅಥವಾ ಫಿರ್ಯಾದಿಯಿಂದ ಆಪಾದಿತನಿಗೆ ಸಂದಾಯ ಮಾಡತಕ್ಕ ವೆಚ್ಚಗಳ ಬಗ್ಗೆ ಆದೇಶ ನೀಡಬಹುದು ಮತ್ತು ಹಾಗೆ ಆದೇಶ ನೀಡಿದ ವೆಚ್ಚಗಳನ್ನು ಅವು ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ವಸೂಲು ಮಾಡಲು ಅವಕಾಶವಿರತಕ್ಕದ್ದು.

**52. ಪ್ರಾಸಿಕ್ಯೂಷನ್‌ಗೆ ಕಾಲಪರಿಮಿತಿ.–** ಈ ಅಧಿನಿಯಮದ ಮೇರೆಗೆ ಆಪಾದಿಸಲಾದ ಅಪರಾಧವನ್ನು ಎಸಗಿದ ತರುವಾಯದ ಮೂರು ವರ್ಷಗಳು ಗತಿಸಿದ ತರುವಾಯ ಅಥವಾ ಪ್ರಾಸಿಕ್ಯೂಟರನು ಅದರ ಶೋಧನೆಯನ್ನು ಮಾಡಿದ ನಂತರ ಎರಡು ವರ್ಷಗಳು ಗತಿಸಿದ ತರುವಾಯ ಇದರಲ್ಲಿ ಯಾವುದು ಮುಂಚಿತವೋ ಅದು ಗತಿಸಿದ ತರುವಾಯ ಆ ಅಪರಾಧದ ಬಗ್ಗೆ ಪ್ರಾಸಿಕ್ಯೂಷನ್ನನ್ನು ಪ್ರಾರಂಭಿಸತಕ್ಕದ್ದಲ್ಲ.

**53. ಅಪರಾಧ ನಡೆದ ಬಗ್ಗೆ ಮಾಹಿತಿ.–** ಈ ಅಧ್ಯಾಯದ ಉಪಬಂಧಗಳನ್ನು ಜಾರಿಗೊಳಿಸುವ ಕರ್ತವ್ಯದಲ್ಲಿ ತೊಡಗಿರುವ ಸರ್ಕಾರಿ ಅಧಿಕಾರಿಯು, ಈ ಅಧಿನಿಯಮದ ವಿರುದ್ಧ ಮಾಡಿದ ಯಾವುದೇ ಅಪರಾಧದ ಸಂಬಂಧದಲ್ಲಿ ಯಾವುದೇ ಮಾಹಿತಿಯನ್ನು ಎಲ್ಲಿಂದ ಪಡೆದನೆನ್ನುವುದನ್ನು ಹೇಳುವಂತೆ ಯಾವುದೇ ನ್ಯಾಯಾಲಯದಲ್ಲಿ ಅವನನ್ನು ಒತ್ತಾಯಿಸತಕ್ಕದ್ದಲ್ಲ.

**54. ಭಾರತದ ಹೊರಗಡೆ ಮಾಡಿದ ಕೃತ್ಯಗಳಿಗೆ ಭಾರತದಲ್ಲಿ ದುಷ್ಪ್ರೇರಿಸಿದ್ದಕ್ಕಾಗಿ ದಂಡನೆ.–** ಯಾವ ಕೃತ್ಯವನ್ನು ಭಾರತದ ಒಳಗಡೆ ಎಸಗಿದರೆ ಅದು ಈ ಅಧಿನಿಯಮದ ಮೇರೆಗೆ ಒಂದು ಅಪರಾಧವಾಗಬಹುದೋ ಅಂತಹ ಯಾವುದೇ

ಕೃತ್ಯವನ್ನು ಭಾರತದ ಒಳಗಡೆ ಇದ್ದು ಭಾರತದ ಹೊರಗಡೆ ಎಸಗಲು ಯಾರೇ ವ್ಯಕ್ತಿಯು ದುಷ್ಪ್ರೇರಣೆ ನೀಡಿದರೆ, ಭಾರತದ ಯಾವುದೇ ಸ್ಥಳದಲ್ಲಿ ಅವನು ಕಂಡುಬಂದರೆ, ಅವನನ್ನು ಹಾಗೆ ದುಷ್ಪ್ರೇರಿಸಿದ್ದಕ್ಕಾಗಿ ಅಧಿವಿಚಾರಣೆಗೆ ಗುರಿಪಡಿಸಬಹುದು ಮತ್ತು ಅವನನ್ನು ಆ ಬಗ್ಗೆ, ಅವನು ದುಷ್ಪ್ರೇರಿಸಿದ ಕೃತ್ಯವನ್ನು ಆ ಸ್ಥಳದಲ್ಲಿ ಅವನೇ ಎಸಗಿದ್ದಿದ್ದರೆ ಯಾವ ಶಿಕ್ಷೆಗೆ ಬದ್ಧನಾಗಿರಬಹುದಾಗಿತ್ತೋ ಅದೇ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

## ಅಧ್ಯಾಯ – IX

### ಸಂಕೀರ್ಣ

**55. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯು ಅಥವಾ ಇತರೆ ಕಾನೂನು ವ್ಯವಹರಣೆಯು ನಡೆಯಲು ಅವಕಾಶವಿರತಕ್ಕದ್ದಲ್ಲ.

**56. ಕೆಲವು ವ್ಯಕ್ತಿಗಳು ಲೋಕನೌಕರರಾಗಿರುವುದು.–** ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತೀಯ ದಂಡ ಸಂಹಿತೆಯ (1860ರ 45) 21ನೆಯ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಒಬ್ಬ ಲೋಕ ನೌಕರನೆಂಬುದಾಗಿ ಭಾವಿಸತಕ್ಕದ್ದು.

**57. ಭೌಗೋಳಿಕ ಸಂಕೇತದ ನೋಂದಣಿಯ ಸಿಂಧುತ್ವವನ್ನು ಪ್ರಶ್ನಿಸುವುದೇ ಮುಂತಾದ ವ್ಯವಹರಣೆಗಳ ತಡೆ.–** (1) ಭೌಗೋಳಿಕ ಸಂಕೇತದ ಅತಿಲಂಘನೆಯ ಯಾವುದೇ ದಾವೆಯಲ್ಲಿ ಪ್ರತಿವಾದಿಯು, ವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತದ ನೋಂದಣಿಯು ಅಸಿಂಧುವಾಗಿದೆಯೆಂದು ವಾದಿಸಿದಲ್ಲಿ ದಾವೆಯ ಅಧಿವಿಚಾರಣೆ ನಡೆಸುವ ನ್ಯಾಯಾಲಯವು, (ಇದರಲ್ಲಿ ಇನ್ನು ಮುಂದೆ ನ್ಯಾಯಾಲಯವೆಂದು ಉಲ್ಲೇಖಿಸಲಾಗಿದೆ), –

(ಎ) ವಾದಿಗೆ ಅಥವಾ ಪ್ರತಿವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತದ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಯಾವುದೇ ವ್ಯವಹರಣೆಗಳು ರಿಜಿಸ್ಟ್ರಾರನ ಮುಂದೆ ಅಥವಾ ಅಪೀಲು ಮಂಡಲಿಯ ಮುಂದೆ ಬಾಕಿ ಇದ್ದರೆ, ಅಂಥ ವ್ಯವಹರಣೆಗಳ ಅಂತಿಮ ವಿಲೆಯವರೆಗೆ ದಾವೆಯನ್ನು ತಡೆಹಿಡಿಯತಕ್ಕದ್ದು;

(ಬಿ) ಅಂಥ ವ್ಯವಹರಣೆಗಳು ಬಾಕಿ ಇಲ್ಲದಿದ್ದರೆ ಮತ್ತು ವಾದಿಗೆ ಅಥವಾ ಪ್ರತಿವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತದ ನೋಂದಣಿಯ ಅಸಿಂಧುತ್ವದ ಸಂಬಂಧದಲ್ಲಿನ ವಾದವು ಮೊದಲ ನೋಟಕ್ಕೆ ಸಮರ್ಥನೀಯವಾಗಿದೆಯೆಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ, ಅದರ ಸಂಬಂಧವಾಗಿ ವಿವಾದಾಂಶವನ್ನು ಎತ್ತತಕ್ಕದ್ದು ಮತ್ತು ಸಂಬಂಧಪಟ್ಟ ಪಕ್ಷಕಾರನು ರಿಜಿಸ್ಟರನ್ನು ಸರಿಪಡಿಸುವಿಕೆಗಾಗಿ ಅಪೀಲು ಮಂಡಲಿಗೆ ಅರ್ಜಿ ಸಲ್ಲಿಸಿಕೊಳ್ಳಲು ಸಾಧ್ಯವಾಗುವಂತೆ ವಿವಾದಾಂಶಗಳನ್ನು ರೂಪಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ದಾವೆಯನ್ನು ಮುಂದಕ್ಕೆ ಹಾಕತಕ್ಕದ್ದು.

(2) ಸಂಬಂಧಪಟ್ಟ ಪಕ್ಷಕಾರನು (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಅಂಥ ಅರ್ಜಿಯನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ಅಥವಾ ನ್ಯಾಯಾಲಯವು ಸಾಕಷ್ಟು ಕಾರಣಗಳಿಗಾಗಿ ಅನುಮತಿಸಿದ ಅಂಥ ವಿಸ್ತರಿಸಿದ ಸಮಯದೊಳಗಾಗಿ ಅರ್ಜಿ ಸಲ್ಲಿಸಿದ್ದೇನೆಂದು ನ್ಯಾಯಾಲಯಕ್ಕೆ ರುಜುವಾತುಪಡಿಸಿದರೆ, ದಾವೆಯ ಅಧಿವಿಚಾರಣೆಯನ್ನು, ಸರಿಪಡಿಸುವಿಕೆಯ ವ್ಯವಹರಣೆಗಳು ಅಂತಿಮವಾಗಿ ವಿಲೆಯಾಗುವತನಕ ತಡೆಹಿಡಿದಿರತಕ್ಕದ್ದು.

(3) ಮೇಲೆ ಹೇಳಿದ ಅಂಥ ಒಂದು ಅರ್ಜಿಯನ್ನು ಹಾಗೆ ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ಅಥವಾ ನ್ಯಾಯಾಲಯವು ಅನುಮತಿಸಿದ ಅಂಥ ವಿಸ್ತರಿಸಿದ ಸಮಯದೊಳಗಾಗಿ ಸಲ್ಲಿಸಿರದಿದ್ದರೆ ಸಂಬಂಧಪಟ್ಟ ಭೌಗೋಳಿಕ ಸಂಕೇತದ ನೋಂದಣಿಯ ಸಿಂಧುತ್ವದ ವಿವಾದಾಂಶವನ್ನು ಬಿಟ್ಟುಕೊಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ನ್ಯಾಯಾಲಯವು ಪ್ರಕರಣದ ಇತರೆ ವಿವಾದಾಂಶಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಮುಂದುವರಿಸತಕ್ಕದ್ದು.

(4) (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸರಿಪಡಿಸುವ ವ್ಯವಹರಣೆಗಳ ಸಂಬಂಧದಲ್ಲಿ ಮಾಡಿದ ಅಂತಿಮ ಆದೇಶಕ್ಕೆ ಪಕ್ಷಕಾರರು ಬದ್ಧರಾಗಿರತಕ್ಕದ್ದು ಮತ್ತು ನ್ಯಾಯಾಲಯವು ಭೌಗೋಳಿಕ ಸಂಕೇತದ ನೋಂದಣಿಯ ಸಿಂಧುತ್ವದ ವಿವಾದಾಂಶಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಅಂಥ ಆದೇಶಕ್ಕೆ ಅನುಸಾರವಾಗಿ ದಾವೆಯನ್ನು ವಿಲೆ ಮಾಡತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಭೌಗೋಳಿಕ ಸಂಕೇತದ ಅತಿಲಂಘನೆಯ ದಾವೆಯನ್ನು ತಡೆಹಿಡಿದಿರುವುದು, ದಾವೆಯ ತಡೆಯ ಅವಧಿಯಲ್ಲಿ ಯಾವುದೇ ನ್ಯಾಯಾಲಯವನ್ನು ವಾದಕಾಲೀನ ಆದೇಶ (ಯಾವುದೇ ನಿರ್ಬಂಧಕಾಜ್ಞೆಯನ್ನು ನೀಡುವುದು, ಲೆಕ್ಕಪತ್ರ ಇಡುವಂತೆ ನಿರ್ದೇಶಿಸುವುದು, ರಿಸೀವರನ ನೇಮಕಾತಿ ಅಥವಾ ಯಾವುದೇ ಸ್ವತ್ತಿನ ಜಪ್ತಿಯೂ ಸೇರಿದಂತೆ) ಮಾಡುವಲ್ಲಿ ನ್ಯಾಯಾಲಯಕ್ಕೆ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ.

**58. ಕೆಲವು ಸಂದರ್ಭಗಳಲ್ಲಿ ರಿಜಿಸ್ಟರನ್ನು ಸರಿಪಡಿಸಲು ಅಪೀಲು ಮಂಡಲಿಗೆ ಅರ್ಜಿ ಸಲ್ಲಿಸುವುದು.–** (1) ನೋಂದಾಯಿತ ಭೌಗೋಳಿಕ ಸಂಕೇತದ ಅತಿಲಂಘನೆಯ ದಾವೆಯಲ್ಲಿ, ವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತದ ನೋಂದಣಿಯ ಸಿಂಧುತ್ವವನ್ನು ಪ್ರತಿವಾದಿಯು ಪ್ರಶ್ನಿಸಿರುವಲ್ಲಿ ಅಥವಾ ಪ್ರತಿವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತದ ನೋಂದಣಿಯ ಸಿಂಧುತ್ವವನ್ನು ಯಾವುದೇ ಅಂಥ ದಾವೆಯಲ್ಲಿ ವಾದಿಯು ಪ್ರಶ್ನಿಸಿರುವಲ್ಲಿ, ಸಂಬಂಧಿಸಿದ ಭೌಗೋಳಿಕ ಸಂಕೇತದ ನೋಂದಣಿಯ ಸಿಂಧುತ್ವದ ವಿವಾದಾಂಶವನ್ನು ರಿಜಿಸ್ಟರಿನ ಸರಿಪಡಿಸುವಿಕೆಗೆ ಸಲ್ಲಿಸಿದ ಅರ್ಜಿಯ ಮೇಲೆ ಮಾತ್ರವೇ ತೀರ್ಮಾನಿಸತಕ್ಕದ್ದು ಮತ್ತು 27ನೇ ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಅರ್ಜಿಯನ್ನು ಅಪೀಲು ಮಂಡಲಿಗೆ ಮಾತ್ರ ಸಲ್ಲಿಸತಕ್ಕದ್ದು, ಆದರೆ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ರಿಜಿಸ್ಟರನ್ನು ಸರಿಪಡಿಸುವ ಅರ್ಜಿಯನ್ನು 27ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನಿಗೆ ಸಲ್ಲಿಸಿರುವಲ್ಲಿ, ಅವನು, ಸೂಕ್ತವೆಂದು ಭಾವಿಸಿದರೆ, ವ್ಯವಹರಣೆಗಳ ಯಾವುದೇ ಹಂತದಲ್ಲಿ ಅರ್ಜಿಯನ್ನು ಅಪೀಲು ಮಂಡಲಿಗೆ ಉಲ್ಲೇಖಿಸಬಹುದು.

**59. ಸಂಕೇತಿಸಲಾದ ಸರಕುಗಳ ಮಾರಾಟದ ಮೇಲೆ ಇಂಗಿತ ಭರವಸೆ.–** ಭೌಗೋಳಿಕ ಸಂಕೇತವನ್ನು ಮಾರಾಟದ ವಸ್ತುಗಳಿಗೆ ಅನ್ವಯಿಸಿರುವಲ್ಲಿ ಅಥವಾ ಯಾವುದೇ ಸರಕುಗಳ ಮಾರಾಟಕ್ಕಾಗಿ ಮಾಡಿಕೊಂಡ ಕರಾರಿಗೆ ಅನ್ವಯಿಸಿರುವಲ್ಲಿ ವಿರುದ್ಧವಾದುದನ್ನು ಮಾರಾಟಗಾರನಿಂದ ಅಥವಾ ಅವನ ಪರವಾಗಿ ಲಿಖಿತದಲ್ಲಿ ಸಹಿ ಮಾಡಿ ವ್ಯಕ್ತಪಡಿಸಿದ ಮತ್ತು ಕರಾರಿನ ಮೇಲೆ ಸರಕುಗಳ ಮಾರಾಟದ ಕಾಲದಲ್ಲಿ ಕೊಟ್ಟಿದ್ದನ್ನು ಕೊಳ್ಳುವವನು ಅಂಗೀಕರಿಸಿದ್ದ ಹೊರತು ಭೌಗೋಳಿಕ ಸಂಕೇತವು ನೈಜವಾದ ಭೌಗೋಳಿಕ ಸಂಕೇತವೆಂದು ಮತ್ತು ಅದನ್ನು ಸುಳ್ಳಾಗಿ ಅನ್ವಯಿಸಿಲ್ಲವೆಂದು ಮಾರಾಟಗಾರನು ಭರವಸೆ ನೀಡಿದ್ದಾಗಿ ಭಾವಿಸತಕ್ಕದ್ದು.

**60. ರಿಜಿಸ್ಟ್ರಾರನ ಅಧಿಕಾರಗಳು.–** ರಿಜಿಸ್ಟ್ರಾರನ ಮುಂದಿರುವ ಈ ಅಧಿನಿಯಮದ ಮೇರೆಗಿನ ಎಲ್ಲ ವ್ಯವಹರಣೆಗಳಲ್ಲಿ,–

(ಎ) ಸಾಕ್ಷ್ಯವನ್ನು ಸ್ವೀಕರಿಸುವ, ಪ್ರಮಾಣ ವಚನವನ್ನು ಬೋಧಿಸುವ, ಸಾಕ್ಷಿದಾರರ ಹಾಜರಿಯನ್ನು ಒತ್ತಾಯಿಸುವ, ದಸ್ತಾವೇಜುಗಳ ಶೋಧನೆ ಮತ್ತು ಹಾಜರುಪಡಿಸುವುದನ್ನು ಒತ್ತಾಯಪಡಿಸುವ ಮತ್ತು ಕಾರ್ಯಾಜ್ಞೆಗಳನ್ನು ಹೊರಡಿಸುವ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು;

(ಬಿ) ರಿಜಿಸ್ಟ್ರಾರನು, 87ನೆಯ ಪ್ರಕರಣದ ಮೇರೆಗೆ ಈ ಸಂಬಂಧವಾಗಿ ಮಾಡಿದ ಯಾವುವೇ ನಿಯಮಗಳಿಗೊಳಪಟ್ಟು, ಅವನು ಯುಕ್ತವೆಂದು ಭಾವಿಸಬಹುದಾದಂತೆ ವೆಚ್ಚಗಳ ಬಗ್ಗೆ ಅಂಥ ಆದೇಶಗಳನ್ನು ಮಾಡಬಹುದು ಮತ್ತು ಅಂಥ ಯಾವುದೇ ಆದೇಶವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿ ಎಂಬ ಹಾಗೆ ಕಾರ್ಯಗತಗೊಳಿಸಲು ಅವಕಾಶವಿರತಕ್ಕದ್ದು.

(ಸಿ) ನಿಯಮಿಸಿದ ರೀತಿಯಲ್ಲಿ ಸಲ್ಲಿಸಲಾದ ಅರ್ಜಿಯ ಮೇಲೆ ರಿಜಿಸ್ಟ್ರಾರನು, ತನ್ನ ಸ್ವಂತ ತೀರ್ಮಾನವನ್ನು ಪುನರಾವಲೋಕನ ಮಾಡಬಹುದು.

**61. ರಿಜಿಸ್ಟ್ರಾರನು ವಿವೇಚನಾಧಿಕಾರವನ್ನು ಚಲಾಯಿಸುವುದು.–** 64ನೆಯ ಪ್ರಕರಣದ ಉಪಬಂಧಗಳಿಗೊಳ ಪಟ್ಟು, ರಿಜಿಸ್ಟ್ರಾರನು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅವನಲ್ಲಿ ನಿಹಿತವಾಗಿರುವ ಯಾವುವೇ ವಿವೇಚನಾಧಿಕಾರ ಅಥವಾ ಇತರೆ ಅಧಿಕಾರವನ್ನು, ಆ ಅಧಿಕಾರವನ್ನು ಚಲಾಯಿಸಬೇಕೆಂದು ಅರ್ಜಿ ಸಲ್ಲಿಸುವ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿರುವ ಹೊರತು (ನಿಯಮಿಸಿದ ಕಾಲದೊಳಗಾಗಿ ಆ ವ್ಯಕ್ತಿಯು ಹಾಗೆ ಅಗತ್ಯಪಡಿಸಿದ್ದರೆ) ಆ ಅಧಿಕಾರಗಳನ್ನು ಅಂಥ ವ್ಯಕ್ತಿಗೆ ಪ್ರತಿಕೂಲವಾಗುವಂತೆ ಚಲಾಯಿಸತಕ್ಕದ್ದಲ್ಲ.

**62. ರಿಜಿಸ್ಟ್ರಾರನ ಮುಂದಿರುವ ಸಾಕ್ಷ್ಯ.–** ಈ ಅಧಿನಿಯಮದ ಮೇರೆಗೆ ಯಾವುದೇ ವ್ಯವಹರಣೆಯಲ್ಲಿ, ರಿಜಿಸ್ಟ್ರಾರನ ಮುಂದೆ ಸಾಕ್ಷ್ಯವನ್ನು ಶಪಥಪತ್ರದ ಮೂಲಕ ನೀಡತಕ್ಕದ್ದು:

ಪರಂತು, ರಿಜಿಸ್ಟ್ರಾರನು ಸೂಕ್ತವೆಂದು ಭಾವಿಸಿದರೆ, ಶಪಥಪತ್ರದ ಮೂಲಕ ತೆಗೆದುಕೊಳ್ಳುವ ಅಂಥ ಸಾಕ್ಷ್ಯಕ್ಕೆ ಬದಲಾಗಿ ಅಥವಾ ಅದರ ಜೊತೆಗೆ ಮೌಖಿಕ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು.

**63. ವ್ಯವಹರಣೆಗಳಲ್ಲಿ ಪಕ್ಷಕಾರನಾಗಿದ್ದವನ ಮರಣ.–** ಈ ಅಧಿನಿಯಮದ ಮೇರೆಗೆ ವ್ಯವಹರಣೆಯ (ಅಪೀಲು ಮಂಡಲಿ ಅಥವಾ ನ್ಯಾಯಾಲಯದ ಮುಂದಿರುವ ವ್ಯವಹರಣೆಯಲ್ಲದ) ಪಕ್ಷಕಾರನಾಗಿರುವ ಒಬ್ಬ ವ್ಯಕ್ತಿಯು ವ್ಯವಹರಣೆ ಇತ್ಯರ್ಥದಲ್ಲಿರುವಾಗಲೇ ಮರಣ ಹೊಂದಿದರೆ, ರಿಜಿಸ್ಟ್ರಾರನಿಗೆ ಕೋರಿಕೆಯನ್ನು ಸಲ್ಲಿಸಿದ ಮೇಲೆ ಮತ್ತು ಮೃತ ವ್ಯಕ್ತಿಯ ಹಿತಾಸಕ್ತಿಯಲ್ಲಿ ಹಸ್ತಾಂತರಣದ ಬಗ್ಗೆ ರುಜುವಾತು ಆದ ಮೇಲೆ, ಅವನ ಸ್ಥಳದಲ್ಲಿ ಹಿತಾಸಕ್ತಿ ಹೊಂದಿದ ಅವನ ಉತ್ತರಾಧಿಕಾರಿಯನ್ನು ವ್ಯವಹರಣೆಯಲ್ಲಿ ಪ್ರತಿಯೋಜಿಸಬಹುದು ಅಥವಾ ರಿಜಿಸ್ಟ್ರಾರನು, ಮೃತವ್ಯಕ್ತಿಯ ಹಿತಾಸಕ್ತಿಯು ಬದುಕಿರುವ ಪಕ್ಷಕಾರರ ಮೂಲಕ ಸಾಕಷ್ಟು ಪ್ರತಿನಿಧಿಸಲಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ, ಅಂಥ ಮೃತನ ಹಿತಾಸಕ್ತಿ ಹೊಂದಿರುವ ಉತ್ತರಾಧಿಕಾರಿಯ ಪ್ರತಿನಿಯೋಜನೆ ಇಲ್ಲದೆ ವ್ಯವಹರಣೆಯನ್ನು ಮುಂದುವರೆಸಲು ಅನುಮತಿಸಬಹುದು.

**64. ಸಮಯ ವಿಸ್ತರಣೆ.–** (1) ನಿಯಮಿಸಿದ ರೀತಿ ಮತ್ತು ಫೀಜಿನೊಂದಿಗೆ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸಿದ ಮೇಲೆ, ಯಾವುದೇ ಕಾರ್ಯ ಮಾಡುವುದಕ್ಕಾಗಿ (ಅಧಿನಿಯಮದಲ್ಲಿ ಸಮಯವನ್ನು ಸ್ಪಷ್ಟವಾಗಿ ಉಪಬಂಧಿಸಿರದಿರುವ), ಹಾಗೆ ನಿರ್ದಿಷ್ಟಪಡಿಸಿದ್ದ ಸಮಯವು ಅಂತ್ಯವಾಗಿರಲಿ ಅಥವಾ ಅಂತ್ಯವಾಗಿಲ್ಲದಿರಲಿ, ಸಮಯವನ್ನು ವಿಸ್ತರಿಸುವುದಕ್ಕೆ ಸಾಕಷ್ಟು ಕಾರಣಗಳಿವೆಯೆಂದು ಮನವರಿಕೆಯಾದರೆ, ವಿಧಿಸಲು ಸೂಕ್ತವೆಂದು ತಾನು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಸಮಯವನ್ನು ವಿಸ್ತರಿಸಬಹುದು ಮತ್ತು ತದನುಸಾರ ಪಕ್ಷಕಾರರಿಗೆ ತಿಳಿಸಬಹುದು.

(2) (1)ನೆಯ ಉಪಪ್ರಕರಣದಲ್ಲಿರುವುದು ಯಾವುದೂ, ಸಮಯ ವಿಸ್ತರಣೆಯ ಅರ್ಜಿಯನ್ನು ವಿಲೇ ಮಾಡುವುದಕ್ಕೆ ಮುಂಚೆ ಪಕ್ಷಕಾರರ ಸುನಾವಣೆ ನಡೆಸಲು ರಿಜಿಸ್ಟ್ರಾರನನ್ನು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ ಮತ್ತು ಈ ಪ್ರಕರಣದ ಮೇರೆಗೆ ರಿಜಿಸ್ಟ್ರಾರನ ಯಾವುದೇ ಆದೇಶದ ವಿರುದ್ಧ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

**65. ಬಿಟ್ಟುಕೊಡುವುದು.–** ಈ ಅಧಿನಿಯಮದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ಮುನ್ನಡೆಸುವಲ್ಲಿ ಅರ್ಜಿದಾರನು ತಪ್ಪು ಮಾಡಿದ್ದಾನೆಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟಲ್ಲಿ, ರಿಜಿಸ್ಟ್ರಾರನು ನೋಟೀಸು ಮೂಲಕ ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ತಪ್ಪನ್ನು ಸರಿಪಡಿಸುವಂತೆ ಅರ್ಜಿದಾರನನ್ನು ಅಗತ್ಯಪಡಿಸಬಹುದು ಮತ್ತು ಹಾಗೆ ಇಚ್ಛಿಸಿದರೆ, ಅಹವಾಲು ಹೇಳಿಕೊಳ್ಳಲು ಅರ್ಜಿದಾರನಿಗೆ ಒಂದು ಅವಕಾಶ ನೀಡಿದ ನಂತರ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ್ದ ಕಾಲದೊಳಗಾಗಿ ತಪ್ಪನ್ನು ಸರಿಪಡಿಸಿದ್ದ ಹೊರತು ಅರ್ಜಿಯನ್ನು ಬಿಟ್ಟುಕೊಡಲಾಗಿದೆಯೆಂದು ಪರಿಗಣಿಸಬಹುದು.

**66. ಜಿಲ್ಲಾ ನ್ಯಾಯಾಲಯದ ಮುಂದೆ ಅತಿಲಂಘನಕ್ಕಾಗಿ ಹೂಡಬಹುದಾದ ದಾವೆ, ಇತ್ಯಾದಿ.–** (1) ಯಾವುದೇ ದಾವೆಯನ್ನು, –

(ಎ) ನೋಂದಾಯಿತ ಭೌಗೋಳಿಕ ಸಂಕೇತದ ಅತಿಲಂಘನೆಗಾಗಿ; ಅಥವಾ

(ಬಿ) ನೋಂದಾಯಿತ ಭೌಗೋಳಿಕ ಸಂಕೇತದಲ್ಲಿನ ಯಾವುದೇ ಹಕ್ಕಿಗೆ ಸಂಬಂಧಿಸಿದಂತೆ; ಅಥವಾ

(ಸಿ) ವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತಕ್ಕೆ, ಅದು ನೋಂದಾಯಿತವಾಗಿರಲಿ ಅಥವಾ ನೋಂದಾಯಿತವಾಗಿಲ್ಲದಿರಲಿ ಅದೇ ವಿಧದ ಅಥವಾ ಮೋಸಗೊಳಿಸುವಂತೆ ಸದೃಶವಾಗಿರುವ ಯಾವುದೇ ಭೌಗೋಳಿಕ ಸಂಕೇತವನ್ನು ಪ್ರತಿವಾದಿಯು ಅಂಗೀಕರಿಸುವಂತೆ ಮಾಡುವುದಕ್ಕಾಗಿ

– ದಾವೆಯ ಅಧಿವಿಚಾರಣೆ ನಡೆಸುವ ಅಧಿಕಾರವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳ ಉದ್ದೇಶಕ್ಕಾಗಿ, "ಅಧಿಕಾರ ವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಲಯ"ವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ ದಾವೆ ಅಥವಾ ಇತರೆ ವ್ಯವಹರಣೆಯನ್ನು ಹೂಡುವ ಸಮಯದಲ್ಲಿ ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ದಾವೆ ಅಥವಾ ವ್ಯವಹರಣೆ ಹೂಡುವ ವ್ಯಕ್ತಿ ಅಥವಾ ಅಂಥ ವ್ಯಕ್ತಿಗಳಲ್ಲಿ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳು ವಾಸ್ತವವಾಗಿ ಮತ್ತು ಸ್ವಇಚ್ಛೆಯಿಂದ ವಾಸವಾಗಿರುವ ಅಥವಾ ವ್ಯವಹಾರಗಳನ್ನು ನಡೆಸುವ ಅಥವಾ

ಲಾಭಕ್ಕಾಗಿ ವೈಯಕ್ತಿಕ ಕೆಲಸಗಳನ್ನು ನಿರ್ವಹಿಸುವ ವ್ಯಕ್ತಿಗಳು ಇರುವರೋ ಅಂಥ ಕ್ಷೇತ್ರದ ಜಿಲ್ಲಾ ನ್ಯಾಯಾಲಯವು ಸೇರತಕ್ಕದ್ದು.

**ವಿವರಣೆ.–** (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, "ವ್ಯಕ್ತಿ" ಎಂಬುದರಲ್ಲಿ ನೋಂದಾಯಿತ ಮಾಲೀಕ ಮತ್ತು ಅಧಿಕೃತ ಬಳಕೆದಾರನೂ ಒಳಗೊಳ್ಳುತ್ತಾನೆ.

**67. ಅತಿಲಂಘನೆಯಿಂದ ಅಥವಾ ಸರಕುಗಳನ್ನು ಮೋಸದಿಂದ ದಾಟಿಸಿದ್ದಕ್ಕಾಗಿ ದಾವೆಯಲ್ಲಿ ಪರಿಹಾರ.–**(1) ಅತಿಲಂಘನೆಯ ಅಥವಾ 66ನೆಯ ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಸರಕುಗಳನ್ನು ಮೋಸದಿಂದ ದಾಟಿಸಿದ ಸಂಬಂಧದಲ್ಲಿನ ಯಾವುದೇ ದಾವೆಯಲ್ಲಿ ನ್ಯಾಯಾಲಯವು ನೀಡಬಹುದಾದ ಪರಿಹಾರದಲ್ಲಿ ನಿರ್ಬಂಧಕಾಜ್ಞೆ (ನ್ಯಾಯಾಲಯವು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳು, ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು) ಮತ್ತು ವಾದಿಯ ಇಚ್ಛೆಯಂತೆ ಮತ್ತು ಅತಿಲಂಘಿಸುವ ಗುರುತುಪಟ್ಟಿಗಳನ್ನು ಮತ್ತು ಸಂಕೇತಗಳನ್ನು ನಾಶಪಡಿಸುವ ಅಥವಾ ಅಳಿಸಿಬಿಡುವ ಸಲುವಾಗಿನ ಆದೇಶದೊಂದಿಗೆ ಅಥವಾ ಆದೇಶವಿಲ್ಲದೆ ನಷ್ಟಭರ್ತಿ ಅಥವಾ ಲಾಭದ ಲೆಕ್ಕ –ಇವುಗಳನ್ನು ಒಳಗೊಳ್ಳುತ್ತವೆ.

(2) (1)ನೇ ಉಪಪ್ರಕರಣದ ಮೇರೆಗಿನ ನಿರ್ಬಂಧಕಾಜ್ಞೆಯ ಆದೇಶವು ಈ ಮುಂದಿನ ಯಾವುವೇ ವಿಷಯಗಳಿಗಾಗಿ ಏಕಪಕ್ಷೀಯ ನಿರ್ಬಂಧಕಾಜ್ಞೆ ಅಥವಾ ಯಾವುದೇ ವಾದಕಾಲೀನ ಆದೇಶವೂ ಒಳಗೊಳ್ಳಬಹುದು, ಎಂದರೆ,–

(ಎ) ದಸ್ತಾವೇಜುಗಳನ್ನು ಕಂಡುಹಿಡಿಯುವುದು;

(ಬಿ) ದಾವೆಯ ವಸ್ತು ವಿಷಯಗಳಿಗೆ ಸಂಬಂಧಿಸಿದ ಅತಿಲಂಘನೆಯ ಸರಕುಗಳನ್ನು, ದಸ್ತಾವೇಜುಗಳನ್ನು ಅಥವಾ ಇತರೆ ಸಾಕ್ಷ್ಯವನ್ನು ಸಂರಕ್ಷಿಸಿಡುವುದು;

(ಸಿ) ವಾದಿಗೆ ಅಂತಿಮವಾಗಿ ಐತೀರ್ಪು ಆಗಬಹುದಾದ ನಷ್ಟಗಳ, ವೆಚ್ಚಗಳ ಅಥವಾ ಇತರೆ ಆರ್ಥಿಕ ಪರಿಹಾರಗಳ ವಸೂಲಿಗೆ ವಾದಿಯ ಸಾಮರ್ಥ್ಯಕ್ಕೆ ಪ್ರತಿಕೂಲವಾಗಿ ಪರಿಣಮಿಸಬಹುದಾದ ರೀತಿಯಲ್ಲಿ ಪ್ರತಿವಾದಿಯನ್ನು ಅವನ ಆಸ್ತಿಯನ್ನು ವಿಲೆ ಮಾಡದಂತೆ ಅಥವಾ ಅದನ್ನು ವ್ಯವಹರಿಸದಂತೆ ನಿಗ್ರಹಿಸುವುದು.

(3) (1)ನೆಯ ಉಪಪ್ರಕರಣದಲ್ಲಿ ಏನೇ ಇದ್ದರೂ, ನ್ಯಾಯಾಲಯವು ಯಾವುದೇ ಈ ಕೆಳಕಂಡ ಸಂದರ್ಭದಲ್ಲಿ ಲಾಭಾಂಶಗಳ ಕಾರಣದಿಂದಾಗಿ (ನಾಮಮಾತ್ರದ ನಷ್ಟಭರ್ತಿಯ ಹೊರತಾಗಿ) ನಷ್ಟಭರ್ತಿಯ ರೂಪದಲ್ಲಿ ಪರಿಹಾರವನ್ನು ನೀಡತಕ್ಕದ್ದಲ್ಲ, –

(ಎ) ಅತಿಲಂಘನೆ ದಾವೆಯಲ್ಲಿ ಪ್ರತಿವಾದಿಯು ನ್ಯಾಯಾಲಯಕ್ಕೆ ಈ ಕೆಳಕಂಡಂತೆ ಮನವರಿಕೆ ಮಾಡಿಕೊಟ್ಟರೆ,–

(i) ದಾವೆಯಲ್ಲಿ ದೂರಿಗೆ ಗುರಿಯಾಗಿರುವ ಭೌಗೋಳಿಕ ಸಂಕೇತವನ್ನು ಬಳಸಲು ಪ್ರಾರಂಭಿಸಿದ ಸಮಯಕ್ಕೆ ಆ ಬಗ್ಗೆ ತನಗೆ ತಿಳಿದಿರಲಿಲ್ಲವೆಂದು ಮತ್ತು ವಾದಿಯ ಭೌಗೋಳಿಕ ಸಂಕೇತವು ರಿಜಿಸ್ಟರಿನಲ್ಲಿ ಇರುವುದೆಂಬುದನ್ನು ನಂಬಲು ಯುಕ್ತ ಕಾರಣ ಇರಲಿಲ್ಲವೆಂದು;

(ii) ಭೌಗೋಳಿಕ ಸಂಕೇತದ ಅಸ್ತಿತ್ವದ ಬಗ್ಗೆ ಮತ್ತು ಅದರಲ್ಲಿನ ವಾದಿಯ ಹಕ್ಕಿನ ಸ್ವರೂಪದ ಬಗ್ಗೆ ತನಗೆ ತಿಳಿದ ತಕ್ಷಣವೇ ಅದನ್ನು ಯಾವ ಸರಕುಗಳ ಸಂಬಂಧದಲ್ಲಿ ನೋಂದಾಯಿಸಲಾಗಿತ್ತೋ ಅದನ್ನು ಬಳಸುವುದನ್ನು ಆ ಕೂಡಲೆ ನಿಲ್ಲಿಸಿದ್ದೇನೆಂದು; ಅಥವಾ

(ಬಿ) ಮೋಸದಿಂದ ಸರಕುಗಳನ್ನು ದಾಟಿಸಿದ್ದ ಸಂಬಂಧದ ದಾವೆಯಲ್ಲಿ ಪ್ರತಿವಾದಿಯು ನ್ಯಾಯಾಲಯಕ್ಕೆ ಈ ಕೆಳಕಂಡಂತೆ ಮನವರಿಕೆ ಮಾಡಿಕೊಟ್ಟರೆ,–

(i) ಅವನು ದಾವೆಗೆ ಗುರಿಯಾದ ಭೌಗೋಳಿಕ ಸಂಕೇತವನ್ನು ಬಳಸುವುದಕ್ಕೆ ಪ್ರಾರಂಭ ಮಾಡಿದ ಕಾಲದಲ್ಲಿ ಆ ಬಗ್ಗೆ ತನಗೆ ತಿಳಿದಿರಲಿಲ್ಲವೆಂದು ಮತ್ತು ವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತವು ಬಳಕೆಯಲ್ಲಿರುವುದಾಗಿ ನಂಬಲು ಯುಕ್ತ ಕಾರಣಗಳಿರಲಿಲ್ಲವೆಂದು; ಮತ್ತು

(ii) ವಾದಿಗೆ ಸಂಬಂಧಿಸಿದ ಭೌಗೋಳಿಕ ಸಂಕೇತದ ಅಸ್ತಿತ್ವ ಮತ್ತು ಅದರ ಸ್ವರೂಪದ ಬಗ್ಗೆ ತನಗೆ ತಿಳಿದ ತಕ್ಷಣವೇ ದೂರಿಗೆ ಗುರಿಯಾದ ಭೌಗೋಳಿಕ ಸಂಕೇತದ ಬಳಕೆಯನ್ನು ನಿಲ್ಲಿಸಿರುವನೆಂದು.

**68. ಕೆಲವು ವ್ಯವಹರಣೆಗಳಲ್ಲಿ ಅಧಿಕೃತ ಬಳಕೆದಾರನನ್ನು ಪಕ್ಷಕಾರರನ್ನಾಗಿ ಸೇರಿಸುವುದು.–** (1) VIನೇ ಅಧ್ಯಾಯದ ಮೇರೆಗಿನ ಅಥವಾ 31ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ವ್ಯವಹರಣೆಯಲ್ಲಿ, ಅಂಥ ವ್ಯವಹರಣೆಯು ಸಂಬಂಧಿಸಿರುವ ಭೌಗೋಳಿಕ ಸಂಕೇತದ ಪ್ರತಿಯೊಬ್ಬ ಅಧಿಕೃತ ಬಳಕೆದಾರನು, ಆ ಅಧ್ಯಾಯದ ಅಥವಾ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಯಲ್ಲಿ ತಾನೇ ಅರ್ಜಿದಾರನಾಗಿ ಇಲ್ಲದಿರುವಲ್ಲಿ, ಅವನನ್ನು ಆ ವ್ಯವಹರಣೆಗೆ ಒಬ್ಬ ಪಕ್ಷಕಾರನನ್ನಾಗಿ ಸೇರಿಸತಕ್ಕದ್ದು.

(2) ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ, ವ್ಯವಹರಣೆಗೆ ಹಾಗೆ ಪಕ್ಷಕಾರನನ್ನಾಗಿ ಸೇರಿಸಲಾದ ಒಬ್ಬ ಅಧಿಕೃತ ಬಳಕೆದಾರನು, ವ್ಯವಹರಣೆಯಲ್ಲಿ ಹಾಜರಾದ ಮತ್ತು ಅದರಲ್ಲಿ ಭಾಗವಹಿಸಿದ ಹೊರತು ಯಾವುದೇ ವೆಚ್ಚಗಳಿಗೆ ಬದ್ಧನಾಗಿರತಕ್ಕದ್ದಲ್ಲ.

**69. ರಿಜಿಸ್ಟರ್‌ನಲ್ಲಿಯ ನಮೂದುಗಳು, ಇತ್ಯಾದಿಗಳ ಸಾಕ್ಷ್ಯ ಮತ್ತು ರಿಜಿಸ್ಟ್ರಾರನು ಮಾಡಿದ ಕಾರ್ಯಗಳು.–** (1) ರಿಜಿಸ್ಟರಿನಲ್ಲಿನ ಯಾವುದೇ ನಮೂದಿನ ಅಥವಾ ರಿಜಿಸ್ಟ್ರಾರನಿಂದ ಪ್ರಮಾಣೀಕೃತವಾಗಿದೆಯೆಂದು ಮತ್ತು ಭೌಗೋಳಿಕ ಸಂಕೇತಗಳ ನೋಂದಣಿ ಕಚೇರಿಯ ಮುದ್ರೆಯೊಂದಿಗೆ ಮೊಹರಾಗಿದೆಯೆಂದು ತಾತ್ಪರ್ಯವಾಗುವ 78ನೇ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ದಸ್ತಾವೇಜಿನ ಪ್ರತಿಯನ್ನು ಹೆಚ್ಚಿನ ರುಜುವಾತು ಇಲ್ಲದೆ ಅಥವಾ ಮೂಲಪ್ರತಿ ಹಾಜರುಪಡಿಸುವಂತೆ ಕೇಳದೆ ಎಲ್ಲ ನ್ಯಾಯಾಲಯಗಳಲ್ಲಿ ಮತ್ತು ಎಲ್ಲ ವ್ಯವಹರಣೆಗಳಲ್ಲಿ ಸಾಕ್ಷ್ಯವೆಂಬುದಾಗಿ ಅಂಗೀಕೃತವಾಗತಕ್ಕದ್ದು.

(2) ರಿಜಿಸ್ಟ್ರಾರನು ಈ ಅಧಿನಿಯಮದ ಅಥವಾ ನಿಯಮಗಳ ಮೇರೆಗೆ, ಯಾವುದೇ ನಮೂದಿಗೆ, ವಿಷಯಕ್ಕೆ ಅಥವಾ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಮಾಣಪತ್ರಕ್ಕೆ ಸಹಿ ಮಾಡಲು ಅಧಿಕೃತನಾಗಿದ್ದು, ಹಾಗೆ ಮಾಡಿರುವನೆಂದು ತಾತ್ಪರ್ಯವಾಗುವ ಪ್ರಮಾಣಪತ್ರವನ್ನು ಹಾಗೆ ಮಾಡಲಾದ ನಮೂದಿನ ಮತ್ತು ಅದರ ಒಳಾಂಶಗಳ ಅಥವಾ ಮಾಡಿದ ಅಥವಾ ಮಾಡದ ವಿಷಯ ಅಥವಾ ಕಾರ್ಯಗಳ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು.

**70. ರಿಜಿಸ್ಟರು, ಇತ್ಯಾದಿಗಳನ್ನು ಹಾಜರುಪಡಿಸುವಂತೆ ರಿಜಿಸ್ಟ್ರಾರನನ್ನು ಮತ್ತು ಇತರೆ ಅಧಿಕಾರಿಗಳನ್ನು ಒತ್ತಾಯಪಡಿಸದಿರುವುದು.–** ರಿಜಿಸ್ಟ್ರಾರನನ್ನು ಅಥವಾ ರಿಜಿಸ್ಟ್ರಿಯ ಭೌಗೋಳಿಕ ಸಂಕೇತಗಳ ನೋಂದಣಿ ಕಚೇರಿಯ ಯಾರೇ ಅಧಿಕಾರಿಯನ್ನು, ನ್ಯಾಯಾಲಯವು ವಿಶೇಷ ಕಾರಣಕ್ಕಾಗಿ ಮಾಡಿದ ಆದೇಶದ ಹೊರತು ಅವನು ಒಬ್ಬ ಪಕ್ಷಕಾರನಾಗಿರದ ಯಾವುದೇ ಕಾನೂನು ವ್ಯವಹರಣೆಗಳಲ್ಲಿ ಅವನ ಅಭಿರಕ್ಷೆಯಲ್ಲಿರುವ ರಿಜಿಸ್ಟರನ್ನು ಅಥವಾ ಯಾವುದೇ ಇತರೆ ದಸ್ತಾವೇಜಿನ ಒಳಾಂಶಗಳನ್ನು, ಈ ಅಧಿನಿಯಮದ ಮೇರೆಗೆ ನೀಡಲಾದ ಪ್ರಮಾಣೀಕೃತ ಪ್ರತಿಯನ್ನು ಹಾಜರುಪಡಿಸುವುದರಿಂದ ರುಜುವಾತು ಆಗಬಹುದೋ ಅವುಗಳನ್ನು ಹಾಜರುಪಡಿಸುವಂತೆ ಅಥವಾ ಅದರಲ್ಲಿ ದಾಖಲಿಸಿರುವ ವಿಷಯಗಳು ರುಜುವಾತಿಗೆ ಸಾಕ್ಷಿಯಾಗಿ ಹಾಜರಾಗುವಂತೆ ಒತ್ತಾಯಪಡಿಸತಕ್ಕದ್ದಲ್ಲ.

**71. ಸರಕುಗಳ ಮೇಲೆ ಮೂಲ ಸಂಕೇತವನ್ನು ತೋರಿಸುವಂತೆ ಅಗತ್ಯಪಡಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಭಾರತದ ಪರಿಮಿತಿಗಳನ್ನು ಮೀರಿ ತಯಾರಿಸಿದ ಅಥವಾ ಉತ್ಪಾದಿಸಿದ ಮತ್ತು ಭಾರತಕ್ಕೆ ಆಮದು ಮಾಡಿಕೊಂಡ ಅಥವಾ ಭಾರತದ ಪರಿಮಿತಿಗಳೊಳಗೆ ತಯಾರಿಸಿದ ಅಥವಾ ಉತ್ಪಾದಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವರ್ಗದ ಸರಕುಗಳನ್ನು, ಅವುಗಳ ನೀಡಿಕೆಯ ದಿನಾಂಕದಿಂದ ಮೂರು ತಿಂಗಳಿಗಿಂತ ಕಡಿಮೆ ಇಲ್ಲದಂತೆ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಅವುಗಳನ್ನು ತಯಾರಿಸಿದ ಅಥವಾ ಉತ್ಪಾದಿಸಿದ ದೇಶವನ್ನು ಅಥವಾ ಸ್ಥಳವನ್ನು ಸೂಚಿಸುವಂತೆ ಅಥವಾ ಯಾರಿಗಾಗಿ ಅಂಥ ಸರಕುಗಳನ್ನು ತಯಾರಿಸಿದ್ದರು ಅಂಥ ವ್ಯಕ್ತಿಯ ಅಥವಾ ತಯಾರಕರ ಹೆಸರು ಮತ್ತು ವಿಳಾಸವನ್ನು ತಿಳಿಸುವಂತೆ ಅಗತ್ಯಪಡಿಸಬಹುದು.

(2) ಅಧಿಸೂಚನೆಯಲ್ಲಿ ಅಂಥ ಸಂಕೇತವನ್ನು ಯಾವ ರೀತಿ ಅನ್ವಯಿಸತಕ್ಕದ್ದು ಅಂದರೆ, ಸರಕುಗಳಿಗೇ ಅಥವಾ ಯಾವುದೇ ಇತರೆ ರೀತಿಯಲ್ಲಿ ಅನ್ವಯಿಸತಕ್ಕದ್ದು ಎಂಬುದು ಮತ್ತು ಸರಕುಗಳ ಸಂಕೇತವು ಯಾವ ಸಮಯಗಳಲ್ಲಿ ಅಥವಾ ಸಂದರ್ಭಗಳಲ್ಲಿ ಅವಶ್ಯವಾಗಿರತಕ್ಕದ್ದು, ಅಂದರೆ ಆಮದು ಮಾಡಿಕೊಂಡಾಗ ಮಾತ್ರವೇ ಅಥವಾ ಸಗಟು ಅಥವಾ ಚಿಲ್ಲರೆ ಅಥವಾ ಅವೆರಡೂ ಮಾರಾಟದ ಸಮಯದಲ್ಲಿಯೇ ಎಂಬುದನ್ನು ನಿರ್ದಿಷ್ಟಪಡಿಸಬಹುದು.

(3) ಈ ಪ್ರಕರಣದ ಮೇರೆಗೆ ಯಾವುದೇ ಅಧಿಸೂಚನೆಯನ್ನು, ಸಂಬಂಧಿಸಿದ ಸರಕು ವ್ಯವಹಾರಿಗಳ ಅಥವಾ ತಯಾರಕರ ಅಥವಾ ಉತ್ಪಾದಕರ ಅಥವಾ ಬಳಕೆದಾರರ ಹಿತಾಸಕ್ತಿಯನ್ನು ಬಹುಮಟ್ಟಿಗೆ ಪ್ರತಿನಿಧಿಸುವ ವ್ಯಕ್ತಿ ಅಥವಾ ಸಂಸ್ಥೆಯು ಅದರ ನೀಡಿಕೆಗಾಗಿ ಅರ್ಜಿಸಲ್ಲಿಸಿರುವ ಹೊರತು ಅಥವಾ ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯೊಂದಿಗೆ ಅಥವಾ ವಿಚಾರಣೆ ಇಲ್ಲದೆ, ಅಧಿಸೂಚನೆ ಹೊರಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಕೇಂದ್ರ ಸರ್ಕಾರಕ್ಕೆ ಇತರೆ ರೀತಿಯಲ್ಲಿ ಮನದಟ್ಟಾದ ಹೊರತು ಅದನ್ನು ಹೊರಡಿಸತಕ್ಕದ್ದಲ್ಲ.

(4) ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 23ನೆಯ ಪ್ರಕರಣದ ಉಪಬಂಧಗಳನ್ನು, ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟು ನಿಯಮವನ್ನು ಅಥವಾ ಉಪವಿಧಿಗಳನ್ನು ರಚಿಸುವಾಗ ಅವುಗಳಿಗೆ ಅನ್ವಯವಾಗುವ ಹಾಗೆಯೇ ಈ ಪ್ರಕರಣದ ಮೇರೆಗೆ ಅಧಿಸೂಚನೆ ಹೊರಡಿಸುವಾಗಲೂ ಅನ್ವಯಿಸತಕ್ಕದ್ದು.

(5) ಭಾರತದ ಹೊರಗೆ ಸರಕುಗಳನ್ನು ತಯಾರಿಸಿದ ಅಥವಾ ಉತ್ಪಾದಿಸಿದ ಮತ್ತು ಭಾರತಕ್ಕೆ ಆಮದು ಮಾಡಿಕೊಂಡ ಸರಕುಗಳ ಸಂಬಂಧದಲ್ಲಿ ಸೀಮಾಸುಂಕಗಳ ಕಮೀಷನರನು, ಹಾಗೆ ಆಮದು ಮಾಡಿಕೊಳ್ಳುವ ಕಾಲದಲ್ಲಿ ಹಡಗಿನಿಂದ ಹಡಗಿಗೆ ಸಾಗಿಸಿದ ನಂತರವಾಗಲಿ ಅಥವಾ ಭಾರತದ ಮೂಲಕ ರವಾನಿಸುವಾಗ ಅಥವಾ ಅನ್ಯಥಾ ಸಾಗಿಸುವ ಮೂಲಕ ರಫ್ತು ಮಾಡುವ ಉದ್ದೇಶವಿದೆಯೆಂಬುದನ್ನು ಮನಗಂಡರೆ ಅಂಥ ಸರಕುಗಳಿಗೆ ಈ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಅನ್ವಯಿಸತಕ್ಕದ್ದಲ್ಲ.

**72. ಸಿಂಧುತ್ವದ ಪ್ರಮಾಣಪತ್ರ.–** ಅಪೀಲು ಮಂಡಲಿಯ ಮುಂದಿರುವ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಯಾವುದೇ ಕಾನೂನು ವ್ಯವಹರಣೆಗಳಲ್ಲಿ ನೋಂದಾಯಿತ ಮಾಲೀಕನ ಪರವಾಗಿ ಅಥವಾ ಸಂದರ್ಭಾನುಸಾರ, ಭೌಗೋಳಿಕ ಸಂಕೇತ ಅಥವಾ ಅಧಿಕೃತ ಬಳಕೆದಾರನ ನೋಂದಣಿಯ ಬಗ್ಗೆ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಭೌಗೋಳಿಕ ಸಂಕೇತದ ಅಧಿಕೃತ ಬಳಕೆದಾರನ ಪರವಾಗಿ ನೀಡಿದ ತೀರ್ಮಾನವನ್ನು ವಿರೋಧಿಸಿದ ನಂತರ ಅಪೀಲು ಮಂಡಲಿಯು ಹಾಗೆಂದು ಪ್ರಮಾಣಪತ್ರವನ್ನು ನೀಡಬಹುದು ಮತ್ತು ಅಂಥ ಪ್ರಮಾಣಪತ್ರವನ್ನು ನೀಡಿದಾಗ ನಂತರದ ಸದರಿ ಸಿಂಧುತ್ವದ ಬಗ್ಗೆ ಯಾವುದೇ ಕಾನೂನು ವ್ಯವಹರಣೆಯ ಪ್ರಶ್ನೆಯು ಬಂದಲ್ಲಿ ಸದರಿ ಮಾಲೀಕ ಅಥವಾ ಸಂದರ್ಭಾನುಸಾರ ಅಧಿಕೃತ ಬಳಕೆದಾರ ಭೌಗೋಳಿಕ ಸಂಕೇತದ ಅಥವಾ ಅಧಿಕೃತ ಬಳಕೆದಾರನ ನೋಂದಣಿಯ ಸಿಂಧುತ್ವದ ದೃಢೀಕರಣದ ಬಗ್ಗೆ ಅವನ ಪರವಾಗಿ ಆದ ಅಂತಿಮ ಆದೇಶವನ್ನು ಅಥವಾ ತೀರ್ಮಾನವನ್ನು ಪಡೆದ ಮೇಲೆ, ಸದರಿ ಅಂತಿಮ ಆದೇಶ ಅಥವಾ ತೀರ್ಮಾನವು ಸಾಕಷ್ಟು ಕಾರಣಗಳಿಗಾಗಿ ಇತರೆ ರೀತಿಯಲ್ಲಿ ನಿರ್ದೇಶಿಸಿದ ಹೊರತು, ನ್ಯಾಯವಾದಿ ಮತ್ತು ಕಕ್ಷಿದಾರನ ನಡುವೆ ಆದಂಥ ಅವನ ಪೂರ್ಣ ಚಾರ್ಜುಗಳನ್ನು ಮತ್ತು ವೆಚ್ಚಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**73. ಕಾನೂನು ವ್ಯವಹರಣೆಗಳ ಬಗ್ಗೆ ಆಧಾರರಹಿತ ಬೆದರಿಕೆಗಳು.–** (1) ಒಬ್ಬ ವ್ಯಕ್ತಿಯು ಸುತ್ತೋಲೆಗಳ ಮತ್ತು ಜಾಹೀರಾತುಗಳ ಮೂಲಕ ಅಥವಾ ಅನ್ಯಥಾ ಇನ್ನೊಬ್ಬ ವ್ಯಕ್ತಿಗೆ ನೋಂದಾಯಿಸಲಾದ ಅಥವಾ ಮೊದಲು ನಮೂದಿಸಲಾದ ವ್ಯಕ್ತಿಯು ಆಪಾದಿಸಲಾದ ಭೌಗೋಳಿಕ ಸಂಕೇತದ ಅತಿಲಂಘನೆಗಾಗಿ ಕ್ರಮ ಕೈಗೊಳ್ಳುವನೆಂದು ಅಥವಾ ವ್ಯವಹರಣೆ ನಡೆಸುವನೆಂದು ಅಥವಾ ಅಂಥದೇ ಬಗೆಯ ವ್ಯವಹರಣೆಯನ್ನು ನಡೆಸುವನೆಂದು ಬೆದರಿಕೆ ಹಾಕಿದ ಸಂದರ್ಭದಲ್ಲಿ ಬಾಧಿತನಾದ ವ್ಯಕ್ತಿಯು, ಹಾಗೆ ಬೆದರಿಕೆ ಹಾಕಿದ ವ್ಯಕ್ತಿಯು ಭೌಗೋಳಿಕ ಸಂಕೇತದ ನೋಂದಾಯಿತ ಮಾಲೀಕ ಅಥವಾ ಅಧಿಕೃತ ಬಳಕೆದಾರನಾಗಿರಲಿ ಅಥವಾ ಇಲ್ಲದಿರಲಿ ಅಂಥ ಮೊದಲು ನಮೂದಿಸಿದ ವ್ಯಕ್ತಿಯ ವಿರುದ್ಧ ಒಂದು ದಾವೆಯನ್ನು ಹೂಡಬಹುದು ಮತ್ತು ಅಂಥ ಬೆದರಿಕೆಗಳು ಸಮರ್ಥನೀಯವಲ್ಲವೆಂಬುದಾಗಿ ಒಂದು ಘೋಷಣೆಯನ್ನು ಮತ್ತು ಅಂಥ ಬೆದರಿಕೆಗಳ ಮುಂದುವರಿಕೆಯ ವಿರುದ್ಧ ಒಂದು ತಡೆಯಾಜ್ಞೆಯನ್ನು ಪಡೆದುಕೊಳ್ಳಬಹುದು. ಭೌಗೋಳಿಕ ಸಂಕೇತವು ಆ ಭೌಗೋಳಿಕ ಸಂಕೇತವನ್ನು ನೋಂದಾಯಿಸಲಾಗಿದೆಯೆಂದು ಮತ್ತು ಯಾವ ಕೃತ್ಯಗಳ ಬಗ್ಗೆ ವ್ಯವಹರಣೆಗಳನ್ನು ನಡೆಸುವುದಾಗಿ ಆ ಕೃತ್ಯಗಳು ಅಥವಾ ಅವುಗಳನ್ನು ಎಸಗಲಾಗಿದ್ದರೆ, ಭೌಗೋಳಿಕ ಸಂಕೇತದ ಅತಿಲಂಘನೆಯಾಗುತ್ತದೆಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟ ಹೊರತು, ಅವನಿಗೆ ಉಂಟಾದ ನಷ್ಟವೇನಾದರೂ ಇದ್ದರೆ ಆ ಬಗ್ಗೆ ನಷ್ಟಭರ್ತಿಯನ್ನು ವಸೂಲು ಮಾಡಿಕೊಳ್ಳಬಹುದು.

(2) ಭೌಗೋಳಿಕ ಸಂಕೇತದ ನೋಂದಾಯಿತ ಮಾಲೀಕನು ಅಥವಾ ಅದರ ಅಧಿಕೃತ ಬಳಕೆದಾರನು ಭೌಗೋಳಿಕ ಸಂಕೇತದ ಅತಿಲಂಘನಕ್ಕಾಗಿ ಬೆದರಿಸಿದ್ದ ವ್ಯಕ್ತಿಯ ವಿರುದ್ಧ ಒಂದು ಕ್ರಮವನ್ನು ಯುಕ್ತಶ್ರದ್ಧೆಯಿಂದ ಪ್ರಾರಂಭಿಸಿ ಮುಂದುವರೆಸಿದ್ದರೆ ಈ ಹಿಂದಿನ ಉಪಪ್ರಕರಣವು ಅನ್ವಯವಾಗತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿ ಇರುವುದು ಯಾವುದೂ, ಒಬ್ಬ ನ್ಯಾಯವಾದಿಯು ಅಥವಾ ಭೌಗೋಳಿಕ ಸಂಕೇತದ ನೋಂದಾಯಿತ ಏಜೆಂಟನು ಒಬ್ಬ ಕಕ್ಷಿದಾರನ ಪರವಾಗಿ ಅವನ ವೃತ್ತೀಯ ಸಾಮರ್ಥ್ಯದಲ್ಲಿ ಕೈಗೊಂಡ ಯಾವುದೇ ಕೃತ್ಯದ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಕ್ರಮಕ್ಕೆ ಗುರಿಯಾಗಲು ಬದ್ಧಗೊಳಿಸತಕ್ಕದ್ದಲ್ಲ.

(4) (1)ನೇ ಉಪಪ್ರಕರಣದ ಮೇರೆಗಿನ ಒಂದು ದಾವೆಯನ್ನು, ಜಿಲ್ಲಾ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ.

**74. ನೋಟೀಸು ಜಾರಿಯ ಸಲುವಾಗಿ ವಿಳಾಸ.–** ಒಂದು ಅರ್ಜಿಯಲ್ಲಿ ಅಥವಾ ವಿರೋಧದ ನೋಟೀಸಿನಲ್ಲಿ ಹೇಳಲಾದ ಜಾರಿಯ ಸಲುವಾಗಿ ವಿಳಾಸವನ್ನು, ಅರ್ಜಿಯ ಅಥವಾ ವಿರೋಧದ ನೋಟೀಸಿನ ಉದ್ದೇಶಕ್ಕಾಗಿ ಅರ್ಜಿದಾರನ ಅಥವಾ ಸಂದರ್ಭಾನುಸಾರ, ಎದುರು ಅರ್ಜಿದಾರನ ವಿಳಾಸವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅರ್ಜಿಯ ಅಥವಾ ಎದುರು ಅರ್ಜಿಯ ನೋಟೀಸಿನ ಜಾರಿ ಸಂಬಂಧದ ಎಲ್ಲ ದಸ್ತಾವೇಜುಗಳನ್ನು ಅರ್ಜಿದಾರ ಅಥವಾ ಸಂದರ್ಭಾನುಸಾರ ಎದುರು ಅರ್ಜಿದಾರನ, ಜಾರಿಯ ಸಲುವಾಗಿರುವ ವಿಳಾಸಕ್ಕೆ ತಲುಪಿಸುವ ಮೂಲಕ ಅಥವಾ ಅಂಚೆಯಿಂದ ಕಳುಹಿಸುವ ಮೂಲಕ ಜಾರಿ ಮಾಡಬಹುದು.

**75. ವ್ಯಾಪಾರ ಪದ್ಧತಿಗಳು, ಇತ್ಯಾದಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳುವುದು.–** ಭೌಗೋಳಿಕ ಸಂಕೇತಕ್ಕೆ ಸಂಬಂಧಿಸಿದ ಯಾವುದೇ ವ್ಯವಹರಣೆಯಲ್ಲಿ, ನ್ಯಾಯಾಧಿಕರಣವು ಸಂಬಂಧಪಟ್ಟ ವ್ಯಾಪಾರ ಪದ್ಧತಿಗಳನ್ನು ಮತ್ತು ಇತರೆ ವ್ಯಕ್ತಿಗಳನ್ನು ಕಾನೂನುಸಮ್ಮತವಾಗಿ ಬಳಸುವ ಯಾವುದೇ ಸಂಬಂಧಪಟ್ಟ ಭೌಗೋಳಿಕ ಸಂಕೇತವನ್ನು ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

**76. ಏಜೆಂಟರು.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ, ಶಪಥ ಪತ್ರದ ಮೂಲಕ ಮಾಡುವುದನ್ನು ಹೊರತುಪಡಿಸಿ ಯಾವುದೇ ಕಾರ್ಯವನ್ನು ಯಾರೇ ವ್ಯಕ್ತಿಯಿಂದ ರಿಜಿಸ್ಟ್ರಾರನ ಮುಂದೆ ಮಾಡಬೇಕಾಗುವುದೋ, ಆ ಕಾರ್ಯವನ್ನು ಈ ಸಂಬಂಧವಾಗಿ ರಚಿಸಿದ ನಿಯಮಗಳಿಗೊಳಪಟ್ಟು, ಆ ವ್ಯಕ್ತಿಯಿಂದಲೇ ಮಾಡಿಸುವ ಬದಲು ನಿಯಮಿಸಿದ ರೀತಿಯಲ್ಲಿ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ವ್ಯಕ್ತಿಯ ಮೂಲಕ ಅಂದರೆ,–

(ಎ) ನ್ಯಾಯವಾದಿಯಾಗಿರುವ; ಅಥವಾ

(ಬಿ) ಭೌಗೋಳಿಕ ಸಂಕೇತಗಳ ಏಜೆಂಟನಾಗಿ ನಿಯಮಿಸಿದ ರೀತಿಯಲ್ಲಿ ನೋಂದಾಯಿಸಿದ ವ್ಯಕ್ತಿಯಾಗಿರುವ; ಅಥವಾ

(ಸಿ) ಮುಖ್ಯಸ್ಥನ ಏಕಮಾತ್ರ ಮತ್ತು ಕ್ರಮಬದ್ಧ ನಿಯೋಜನೆಯಲ್ಲಿರುವ ವ್ಯಕ್ತಿಯ ಮೂಲಕ.

**77. ಸೂಚಿಗಳು.–** ರಿಜಿಸ್ಟ್ರಾರನ ನಿರ್ದೇಶನಗಳ ಮತ್ತು ಮೇಲ್ವಿಚಾರಣೆಯ ಮೇರೆಗೆ, ಈ ಕೆಳಕಂಡ ಸೂಚಿಗಳನ್ನು ಇಟ್ಟಿರತಕ್ಕದ್ದು, –

(ಎ) ನೋಂದಾಯಿತ ಭೌಗೋಳಿಕ ಸೂಚನೆಗಳ ಒಂದು ಸೂಚಿ;

(ಬಿ) ನೋಂದಣಿಗಾಗಿ ಬಾಕಿ ಇರುವ ಅರ್ಜಿಗಳ ಸಂಬಂಧದಲ್ಲಿನ ಭೌಗೋಳಿಕ ಸಂಕೇತಗಳ ಒಂದುಸೂಚಿ;

(ಸಿ) ನೋಂದಾಯಿತ ಭೌಗೋಳಿಕ ಸಂಕೇತಗಳ ಮಾಲೀಕರ ಹೆಸರುಗಳ ಸೂಚಿ;

(ಡಿ) ಅಧಿಕೃತ ಬಳಕೆದಾರರ ಹೆಸರುಗಳ ಒಂದು ಸೂಚಿ.

**78. ದಸ್ತಾವೇಜುಗಳನ್ನು ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿಡುವುದು.–** (1) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಮುಂದಿನ ದಸ್ತಾವೇಜುಗಳನ್ನು ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಯಲ್ಲಿ ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿ ಇಡತಕ್ಕದ್ದು, ಎಂದರೆ: –

(ಎ) ರಿಜಿಸ್ಟರಿನಲ್ಲಿಯ ಯಾವುದೇ ನಮೂದು ಯಾವ ಯಾವ ದಸ್ತಾವೇಜಿನ ಮೇಲೆ ಆಧಾರಿತ ವಾಗಿದೆಯೋ ಆ ದಸ್ತಾವೇಜು;

(ಬಿ) ಭೌಗೋಳಿಕ ಸಂಕೇತದ ನೋಂದಣಿಯ ಎದುರು ಅರ್ಜಿಯ ಪ್ರತಿಯೊಂದು ನೋಟೀಸು, ರಿಜಿಸ್ಟ್ರಾರನ ಮುಂದೆ ತಪ್ಪನ್ನು ಸರಿಪಡಿಸುವುದಕ್ಕಾಗಿ ಸಲ್ಲಿಸಿದ ಅರ್ಜಿ, ಅದರ ಪ್ರತಿ–ಹೇಳಿಕೆ ಮತ್ತು ರಿಜಿಸ್ಟ್ರಾರರ ಮುಂದೆ ಯಾವುದೇ ವ್ಯವಹರಣೆಗಳಲ್ಲಿ ಪಕ್ಷಕಾರರು ಸಲ್ಲಿಸಿದ ಯಾವುದೆ ಶಪಥಪತ್ರ ಅಥವಾ ದಸ್ತಾವೇಜು;

(ಸಿ) 77ನೇ ಪ್ರಕರಣದಲ್ಲಿ ನಮೂದಿಸಿರುವ ಸೂಚಿಗಳು; ಮತ್ತು

(ಡಿ) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರೆ ದಸ್ತಾವೇಜುಗಳು:

ಪರಂತು, ಅಂಥ ರಿಜಿಸ್ಟರನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ಕಂಪ್ಯೂಟರ್‌ನಲ್ಲಿ ಅಳವಡಿಸಿರುವಲ್ಲಿ, ಈ ಪ್ರಕರಣದ ಮೇರೆಗೆ ಅಂಥ ರಿಜಿಸ್ಟರಿನ ಪರಿಶೀಲನೆಯನ್ನು ಹಾಗೆ ಕಂಪ್ಯೂಟರ್‌ನಲ್ಲಿ ನಿರ್ವಹಿಸಿರುವ ರಿಜಿಸ್ಟರಿನಲ್ಲಿಯ ಸಂಬಂಧಪಟ್ಟ ನಮೂದಿನ ಕಂಪ್ಯೂಟರ್ ಮುದ್ರಣ ಪ್ರತಿಯನ್ನು ಪರಿಶೀಲಿಸುವಂತೆ ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯು, ರಿಜಿಸ್ಟ್ರಾರನಿಗೆ ಅರ್ಜಿಯನ್ನು ಸಲ್ಲಿಸಿ ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ, ರಿಜಿಸ್ಟರಿನಲ್ಲಿಯ ಯಾವುದೇ ನಮೂದಿನ ಅಥವಾ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ದಸ್ತಾವೇಜಿನ ಪ್ರಮಾಣೀಕೃತ ಪ್ರತಿಯನ್ನು ಪಡೆಯಬಹುದು.

**79. ಸಂಸತ್ತಿನ ಮುಂದೆ ರಿಜಿಸ್ಟ್ರಾರನ ವರದಿಗಳನ್ನು ಇಡುವುದು.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಕಾರ್ಯದ ವರದಿಯನ್ನು ವರ್ಷಕ್ಕೊಮ್ಮೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

**80. ಫೀಜು ಮತ್ತು ಅಧಿಭಾರ.–** (1) ಅರ್ಜಿಗಳ ಮತ್ತು ನೋಂದಣಿಗಳ ಮತ್ತು ಈ ಅಧಿನಿಯಮದ ಮೇರೆಗೆ ಇತರೆ ವಿಷಯಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಫೀಜು ಮತ್ತು ಅಧಿಭಾರ ಸಂದಾಯವಾಗತಕ್ಕದ್ದು.

(2) ರಿಜಿಸ್ಟ್ರಾರನಿಂದ ಮಾಡಬೇಕಾದ ಒಂದು ಕಾರ್ಯದ ಸಂಬಂಧದಲ್ಲಿ ಫೀಜು ಸಂದಾಯವಾಗ ಬೇಕಾಗಿರುವಲ್ಲಿ ಅಂಥ ಫೀಜು ಸಂದಾಯವಾಗುವವರೆಗೆ ರಿಜಿಸ್ಟ್ರಾರನು ಆ ಕಾರ್ಯ ಮಾಡತಕ್ಕದ್ದಲ್ಲ.

(3) ಭೌಗೋಳಿಕ ಸಂಕೇತಗಳ ರಿಜಿಸ್ಟ್ರಿಯಲ್ಲಿ ಒಂದು ದಸ್ತಾವೇಜನ್ನು ದಾಖಲು ಮಾಡುವ ಸಂಬಂಧದಲ್ಲಿ ಫೀಜು ಸಂದಾಯ ಮಾಡಬೇಕಾಗಿರುವಲ್ಲಿ, ಫೀಜು ಸಂದಾಯವಾಗುವವರೆಗೆ ಆ ದಸ್ತಾವೇಜನ್ನು ರಿಜಿಸ್ಟ್ರಿಯಲ್ಲಿ ದಾಖಲು ಮಾಡಿಲ್ಲವೆಂಬುದಾಗಿ ಭಾವಿಸತಕ್ಕದ್ದು.

**81. VIIIನೆಯ ಅಧ್ಯಾಯದ ಕೆಲವು ವಿಷಯಗಳ ಸಂಬಂಧದಲ್ಲಿ ಉಳಿಸುವಿಕೆಗಳು.–** VIIIನೇ ಅಧ್ಯಾಯದಲ್ಲಿ ಇರುವುದು ಯಾವುದೂ,–

(ಎ) ಆ ಅಧ್ಯಾಯದಲ್ಲಿ ಯಾವುದೊಂದು ಇಲ್ಲದೆ ಹೋಗಿದ್ದರೆ ಯಾವ ವ್ಯಕ್ತಿಯ ವಿರುದ್ಧ ಯಾವ ದಾವೆ ಅಥವಾ ಇತರ ವ್ಯವಹರಣೆಯನ್ನು ತರಬಹುದಾಗಿತ್ತೋ ಆ ವ್ಯಕ್ತಿಯನ್ನು ವಿನಾಯಿತಿಗೊಳಿಸತಕ್ಕದ್ದಲ್ಲ ; ಅಥವಾ

(ಬಿ) ಭಾರತದಲ್ಲಿ ವಾಸವಾಗಿರುವ ಮಾಸ್ಟರನ ಯಾರೇ ನೌಕರನು ಅಂಥ ಮಾಸ್ಟರನ ಸೂಚನೆಗಳನ್ನು ಸದ್ಭಾವನೆಯಿಂದ ಪಾಲಿಸಿರುವಲ್ಲಿ ಮತ್ತು ಪ್ರಾಸಿಕ್ಯೂಟರ್‌ನಿಂದ ಅಥವಾ ಅವನ ಪರವಾದ ಒತ್ತಾಯದ ಮೇಲೆ ತನ್ನ ಮಾಸ್ಟರನ ಸಂಬಂಧದಲ್ಲಿ ಮತ್ತು ಮಾಸ್ಟರನಿಂದ ತಾನು ಪಡೆದ ಸೂಚನೆಗಳ ಸಂಬಂಧದಲ್ಲಿ ಪೂರ್ಣ ಮಾಹಿತಿ ನೀಡಿರುವಲ್ಲಿ ಯಾವುದೇ ಪ್ರಾಸಿಕ್ಯೂಷನ್ ಅಥವಾ ಶಿಕ್ಷೆಗೆ ಬದ್ಧನಾಗಿರುವುದಾಗಿ ಅರ್ಥೈಸತಕ್ಕದ್ದಲ್ಲ.

**82. ಭೌಗೋಳಿಕ ಸಂಕೇತದ ಸ್ವಾಮ್ಯಕ್ಕೆ ಸಂಬಂಧಿಸಿದ ಘೋಷಣೆಗಳನ್ನು ನೋಂದಣಿ ಅಧಿನಿಯಮ, 1908ರ ಮೇರೆಗೆ ನೋಂದಾಯಿಸದಿರುವುದು.–** ನೋಂದಣಿ ಅಧಿನಿಯಮ, 1908ರಲ್ಲಿ ಏನೇ ಇದ್ದರೂ, ನೋಂದಣಿಯಾದ ಭೌಗೋಳಿಕ ಸಂಕೇತಕ್ಕೆ ಹೊರತಾದ ಭೌಗೋಳಿಕ ಸಂಕೇತಕ್ಕೆ ಒಬ್ಬ ವ್ಯಕ್ತಿಯ ಯಾವುದೇ ಸ್ವಾಮ್ಯವನ್ನು ಘೋಷಿಸುವ ಅಥವಾ ಘೋಷಿಸುವುದೆಂದು ತಾತ್ಪರ್ಯವಾಗುವ ಯಾವ ದಸ್ತಾವೇಜನ್ನು ಆ ಅಧಿನಿಯಮದ ಮೇರೆಗೆ ನೋಂದಾಯಿಸತಕ್ಕದ್ದಲ್ಲ.

**83. ಸರ್ಕಾರದ ಬದ್ಧತೆ.–** ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ಬದ್ಧವಾಗಿರತಕ್ಕದ್ದು.

**84. ಒಡಂಬಡಿಕೆ ದೇಶಗಳ ನಾಗರಿಕರಿಂದ ನೋಂದಣಿಗಾಗಿ ಬರುವ ಅರ್ಜಿಗಳ ಸಂಬಂಧದ ವಿಶೇಷ ಉಪಬಂಧಗಳು.–** (1) ಯಾವ ದೇಶ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಭಾರತದ ಹೊರಗಡೆಯ ಅಂತರ ಸರ್ಕಾರಿ ಸಂಸ್ಥೆಗಳ ಸದಸ್ಯ ದೇಶ ತಮ್ಮ ಸ್ವಂತ ನಾಗರಿಕರಿಗೆ ಒದಗಿಸಿದಂಥ ವಿಶೇಷಾಧಿಕಾರಗಳಿಗೆ ಸಮಾನವಾದವುಗಳನ್ನು ಭಾರತದ ನಾಗರಿಕರಿಗೂ ಒದಗಿಸುವುದು ಆ ದೇಶದೊಡನೆ ಸಂಧಾನ, ಒಡಂಬಡಿಕೆ ಅಥವಾ ಏರ್ಪಾಟುಗಳನ್ನು ನೆರವೇರಿಸುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ದೇಶ ಅಥವಾ ದೇಶಗಳ ಸಮೂಹ ಅಥವಾ ದೇಶಗಳ ಒಕ್ಕೂಟ ಅಥವಾ ಅಂತರ ಸರ್ಕಾರಿ ಸಂಸ್ಥೆಗಳನ್ನು ಒಡಂಬಡಿಕೆ ದೇಶ ಅಥವಾ ಒಡಂಬಡಿಕೆ ದೇಶಗಳು ಎಂಬುದಾಗಿ ಘೋಷಿಸಬಹುದು.

(2) ಈ ಅಧಿನಿಯಮದಲ್ಲಿ ಅಥವಾ ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ರಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ದೇಶದ ಯಾರೇ ನಾಗರಿಕನು ಅಥವಾ ಅಧಿವಾಸಿಯು ಆ ಭೌಗೋಳಿಕ ಸಂಕೇತವನ್ನು ಅಂಥ ಸರಕುಗಳಿಗೆ ಅಥವಾ ಸಂದರ್ಭಾನುಸಾರ ಅಂಥ ಸರಕುಗಳ ಸಂಬಂಧದಲ್ಲಿ ಯಾವೇ ಸರಕುಗಳಿಗೆ ಬಳಸಿದ್ದು, ಅಂಥ ಸರಕುಗಳ ಸಂಬಂಧದಲ್ಲಿ ಆ ದೇಶ ಕ್ಷೇತ್ರದ ಯಾವುದೇ ಭಾಗದಲ್ಲಿ ಮದ್ಯ ಅಥವಾ ಮದ್ಯಸಾರವನ್ನು ಗುರ್ತಿಸುವಲ್ಲಿ (1)ನೆಯ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ದೇಶ ಅಥವಾ ದೇಶಗಳ ಸಮೂಹ ಅಥವಾ ದೇಶಗಳ ಒಕ್ಕೂಟ ಅಥವಾ ಸಂದರ್ಭಾನುಸಾರ ಯಾವುದೇ ಅಂತರ ಸರ್ಕಾರಿ ಸಂಸ್ಥೆಗಳ ಸದಸ್ಯ ದೇಶಕ್ಕೆ ಸಂಬಂಧಿಸಿದ ಭೌಗೋಳಿಕ ಸಂಕೇತವನ್ನು,–

(ಎ) ಏಪ್ರಿಲ್ 15, 1994ರ ಹಿಂದಿನ ಹತ್ತು ವರ್ಷಗಳಿಗಾಗಿ; ಅಥವಾ

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿದ ಹಿಂದಿನ ದಿನಾಂಕದ ಸದ್ಭಾವನೆಯಲ್ಲಿ

– ಮುಂದುವರಿದ ಮತ್ತು ಅದೇ ಬಗೆಯ ಬಳಕೆಯನ್ನು ಪ್ರತಿಬಂಧಿಸತಕ್ಕದ್ದಲ್ಲ.

**85. ಪರಸ್ಪರತೆಯ ಉಪಬಂಧ.–** ಯಾವುದೇ ದೇಶ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ಅಂತರ ಸರ್ಕಾರಿ ಸಂಸ್ಥೆಯ ಸದಸ್ಯ ದೇಶವು ತಮ್ಮ ತಮ್ಮ ಸ್ವಂತ ರಾಷ್ಟ್ರೀಯರಿಗೆ ನೀಡುವಂಥ ಭೌಗೋಳಿಕ ಸಂಕೇತಗಳ ನೋಂದಣಿ ಮತ್ತು ರಕ್ಷಣೆಯ ಹಕ್ಕುಗಳನ್ನೇ ಭಾರತದ ನಾಗರಿಕರಿಗೂ ನೀಡದಿದ್ದರೆ ಅಂಥ ದೇಶಗಳ ಸಮೂಹ ಅಥವಾ ಒಕ್ಕೂಟ ಅಥವಾ ದೇಶಗಳು ಅಥವಾ ಸಂದರ್ಭಾನುಸಾರ ಅಂತರ ಸರ್ಕಾರಿ ಸಂಸ್ಥೆಯ ಸದಸ್ಯ ದೇಶದ ಸದಸ್ಯನಾಗಿರುವ ಅಂಥ ದೇಶ ಅಥವಾ ದೇಶದ ರಾಷ್ಟ್ರೀಯರು, –

(ಎ) ಭೌಗೋಳಿಕ ಸಂಕೇತದ ನೋಂದಣಿಗಾಗಿ ಅಥವಾ ಮಾಲೀಕನಾಗಿ ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಲು;

(ಬಿ) ಭೌಗೋಳಿಕ ಸಂಕೇತದ ನೋಂದಣಿಗಾಗಿ ಅಥವಾ ಅದರ ಅಧಿಕೃತ ಬಳಕೆದಾರನಾಗಿ ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಲು

– ಹಕ್ಕುಳ್ಳವರಾಗಿರತಕ್ಕದ್ದಲ್ಲ.

**86. ತೊಂದರೆಗಳನ್ನು ನಿವಾರಿಸಲು ಕೇಂದ್ರ ಸರ್ಕಾರದ ಅಧಿಕಾರಗಳು.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಮತ್ತು ಅಂಥ ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ತನಗೆ ಅವಶ್ಯವೆಂದು ತೋರುವಂಥ ಉಪಬಂಧಗಳನ್ನು ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವುದರ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭಗೊಂಡ ಐದು ವರ್ಷಗಳು ಗತಿಸಿದ ನಂತರ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಸಾಧ್ಯವಾಗಬಹುದಾದಷ್ಟುರಮಟ್ಟಿಗೆ, ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**87. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 6ನೆಯ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭೌಗೋಳಿಕ ಸಂಕೇತಗಳ ರಿಜಿಸ್ಟರಿನಲ್ಲಿ ಸೇರಿಸಬೇಕಾದ ವಿಷಯಗಳು ಮತ್ತು (2)ನೇ ಉಪಪ್ರಕರಣದ ಮೇರೆಗೆ ಕಂಪ್ಯೂಟರ್ ಫ್ಲಾಪಿ ಅಥವಾ ಡಿಸ್ಕೆಟರುಗಳಲ್ಲಿ ಅಂಥ ರಿಜಿಸ್ಟರುಗಳನ್ನು ನಿರ್ವಹಿಸಲು ಪಾಲಿಸಬೇಕಾದ ಸುರಕ್ಷತೆಗಳು;

(ಬಿ) 7ನೇ ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗೆ ಭಾಗ 'ಎ'ಯಲ್ಲಿಯ ಭೌಗೋಳಿಕ ಸಂಕೇತಗಳ ನೋಂದಣಿಗೆ ಸಂಬಂಧಿಸಿದ ವಿವರಗಳನ್ನು ಸೇರಿಸುವ ರೀತಿ ಮತ್ತು (3)ನೇ ಉಪಪ್ರಕರಣದ ಮೇರೆಗೆ ಅಧಿಕೃತ ಬಳಕೆದಾರರ ನೋಂದಣಿಗೆ ಸಂಬಂಧಿಸಿದ ವಿವರಗಳನ್ನು ಸೇರಿಸುವ ರೀತಿ;

(ಸಿ) ಸರಕುಗಳ ವರ್ಗೀಕರಣ ಮತ್ತು ಸರಕುಗಳ ವರ್ಗೀಕರಣದ ಅಕಾರಾದಿ ಸೂಚಿಯ ಮತ್ತು 8ನೇ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಭೌಗೋಳಿಕ ಸಂಕೇತಗಳ ನೋಂದಣಿಯ ಉದ್ದೇಶಕ್ಕಾಗಿ ನಿರ್ದಿಷ್ಟ ರಾಜ್ಯ ಕ್ಷೇತ್ರ ಅಥವಾ ಸ್ಥಳ ಅಥವಾ ವಲಯದ ಪ್ರಕಟಣೆಯ ರೀತಿ;

(ಡಿ) 11ನೇ ಪ್ರಕರಣದ ಮೇರೆಗೆ ಭೌಗೋಳಿಕ ಸಂಕೇತದ ನೋಂದಣಿಗಾಗಿ ಸಲ್ಲಿಸಬಹುದಾದ ಅರ್ಜಿ ನಮೂನೆ ಮತ್ತು ರೀತಿ ಮತ್ತು (1)ನೇ ಉಪಪ್ರಕರಣದ ಮೇರೆಗೆ ಅರ್ಜಿ ಜೊತೆ ಸಂದಾಯ ಮಾಡಬೇಕಾದ ಫೀಜು ಮತ್ತು (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಪ್ರಾರಂಭದಲ್ಲಿ ನೋಂದಣಿಯನ್ನು ನೋಂದಾಯಿಸಲು ಪ್ರಸ್ತಾವಿಸುವ ಸರಕುಗಳ ಉತ್ಪಾದಕರು ಒದಗಿಸಬೇಕಾದ ವಿವರಗಳು;

(ಇ) 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭೌಗೋಳಿಕ ಸಂಕೇತಗಳು, ಇತ್ಯಾದಿಗಳ ನೋಂದಣಿಗಾಗಿ ಅಂಗೀಕರಿಸಲಾದ ಅರ್ಜಿಯ ಜಾಹೀರಾತಿನ ಪ್ರಕಟಣೆಯ ರೀತಿ ಮತ್ತು (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯಲ್ಲಿ ಮಾಡಿದ ಸರಿಪಡಿಕೆಗಳನ್ನು ಅಥವಾ ತಿದ್ದುಪಡಿಗಳನ್ನು ಅಧಿಸೂಚಿಸುವ ರೀತಿ;

(ಎಫ್) 14ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ರೀತಿ ಮತ್ತು ಅದು ಹೊಂದಿರಬೇಕಾದ ಫೀಜು ಮತ್ತು (1)ನೇ ಉಪಪ್ರಕರಣದ ಮೇರೆಗೆ ನೋಟೀಸು ನೀಡುವ ರೀತಿ ಮತ್ತು (2)ನೇ ಉಪಪ್ರಕರಣದ ಮೇರೆಗೆ ಪ್ರತಿ ಹೇಳಿಕೆಯನ್ನು ಕಳುಹಿಸುವ ರೀತಿ ಮತ್ತು ಸಾಕ್ಷಿಗಳನ್ನು ಸಲ್ಲಿಸುವ ರೀತಿ ಮತ್ತು (4)ನೇ ಉಪಪ್ರಕರಣದ ಮೇರೆಗೆ ಅದರ ಕಾಲ;

(ಜಿ) 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರದ ನಮೂನೆ ಮತ್ತು (3)ನೇ ಉಪಪ್ರಕರಣದ ಮೇರೆಗೆ ಅರ್ಜಿದಾರನಿಗೆ ನೋಟೀಸು ನೀಡುವ ರೀತಿ;

(ಹೆಚ್) 17ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒಬ್ಬ ಅಧಿಕೃತ ಬಳಕೆದಾರನಾಗಿ ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸುವ ರೀತಿ ಮತ್ತು ಅಂಥ ಅರ್ಜಿಯೊಂದಿಗೆ ಅಂಕಿ ಅಂಶಗಳನ್ನು ಮತ್ತು ದಸ್ತಾವೇಜುಗಳನ್ನು ಸಲ್ಲಿಸುವ ರೀತಿ ಮತ್ತು (2)ನೆಯ ಉಪಪ್ರಕರಣದ ಮೇರೆಗೆ ಅರ್ಜಿಯೊಂದಿಗೆ ಸಲ್ಲಿಸಬೇಕಾದ ಫೀಜು;

(ಐ) 18ನೆಯ ಪ್ರಕರಣದ ಮೇರೆಗೆ ಅರ್ಜಿಸಲ್ಲಿಸುವ ರೀತಿ, ಅಂಥ ಅರ್ಜಿಯನ್ನು ಯಾವ ಕಾಲದೊಳಗೆ ಸಲ್ಲಿಸಬೇಕು ಮತ್ತು (3)ನೇ ಉಪಪ್ರಕರಣದ ಮೇರೆಗೆ ಅಂಥ ಪ್ರತಿಯೊಂದು ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ರಿಜಿಸ್ಟ್ರಾರನು ಯಾವ ಕಾಲದೊಳಗಾಗಿ ನೋಟೀಸು ಕಳುಹಿಸಬೇಕು ಮತ್ತು (4)ನೇ ಉಪಪ್ರಕರಣದ ಮೇರೆಗೆ ಅಂಥ ನೋಟೀಸು ಇರಬೇಕಾದ ನಮೂನೆ ಮತ್ತು ರೀತಿ ಮತ್ತು (5)ನೇ ಉಪಪ್ರಕರಣದ ಮೇರೆಗೆ ಮಾಡುವ ನವೀಕರಣೆಗಾಗಿ ಸಲ್ಲಿಸುವ ಅರ್ಜಿಯೊಂದಿಗೆ ಸಲ್ಲಿಸಬೇಕಾದ ಫೀಜು;

(ಜೆ) 27ನೇ ಪ್ರಕರಣದ (1)ನೇ ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ಅರ್ಜಿಗಳನ್ನು ಸಲ್ಲಿಸುವ ರೀತಿ, (4)ನೇ ಉಪಪ್ರಕರಣದ ಮೇರೆಗೆ ನೋಟೀಸು ನೀಡುವ ರೀತಿ ಮತ್ತು (5)ನೇ ಉಪಪ್ರಕರಣದ ಮೇರೆಗೆ ಸರಿಪಡಿಸುವಿಕೆಯ ನೋಟೀಸನ್ನು ಜಾರಿ ಮಾಡುವ ರೀತಿ;

(ಕೆ) 28ನೆಯ ಪ್ರಕರಣದ ಮೇರೆಗೆ ಸರಿಪಡಿಸುವಿಕೆ, ಇತ್ಯಾದಿಗಳಿಗಾಗಿ ಅರ್ಜಿ ಸಲ್ಲಿಸುವ ರೀತಿ;

(ಎಲ್) 29ನೆಯ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಗಳನ್ನು ಸಲ್ಲಿಸುವ ರೀತಿ, (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಜಾಹೀರಾತುಪಡಿಸುವ ರೀತಿ, (2)ನೇ ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಅರ್ಜಿಯನ್ನು ವಿರೋಧಿಸಬಹುದಾದಂಥ ನೋಟೀಸನ್ನು ನೀಡುವ ರೀತಿ ಮತ್ತು ಕಾಲ;

(ಎಂ) 30ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಜಾಹೀರಾತುಪಡಿಸುವ ರೀತಿ;

(ಎನ್) 31ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲು ಮಾಡಿಕೊಳ್ಳುವ ನಮೂನೆ, ಸತ್ಯಾಪನೆಯ ರೀತಿ ಮತ್ತು ಸಂದಾಯ ಮಾಡಬೇಕಾದ ಫೀಜು;

(ಒ) 34ನೇ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಸರಿಪಡಿಸುವಿಕೆಗಾಗಿ ಅರ್ಜಿಸಲ್ಲಿಸುವ ನಮೂನೆ;

(ಪಿ) 60ನೇ ಪ್ರಕರಣದ (ಸಿ) ಖಂಡದ ಮೇರೆಗೆ ಪುನರಾವಲೋಕನಕ್ಕಾಗಿ ಅರ್ಜಿ ಸಲ್ಲಿಸಿಕೊಳ್ಳುವ ರೀತಿ;

(ಕ್ಯೂ) 61ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ತನ್ನ ವಿವೇಚನಾಧಿಕಾರವನ್ನು ಚಲಾಯಿಸುವುದಕ್ಕಾಗಿ ಅವನಿಗೆ ಅರ್ಜಿ ಸಲ್ಲಿಸಿಕೊಳ್ಳುವ ಕಾಲ;

(ಆರ್) 64ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಸಲ್ಲಿಸುವ ರೀತಿ ಮತ್ತು ಆ ಬಗ್ಗೆ ಸಂದಾಯ ಮಾಡಬೇಕಾದ ಫೀಜು;

(ಎಸ್) 76ನೇ ಪ್ರಕರಣದ ಮೇರೆಗೆ ಯಾವುದೇ ಕಾರ್ಯವನ್ನೆಸಗಲು ಯಾರೇ ವ್ಯಕ್ತಿಗೆ ಅಧಿಕಾರ ನೀಡುವ ರೀತಿ ಮತ್ತು ಭೌಗೋಳಿಕ ಸಂಕೇತಗಳ ಏಜೆಂಟನಾಗಿ ಕಾರ್ಯನಿರ್ವಹಿಸಲು ನೋಂದಣಿ ಮಾಡುವ ರೀತಿ;

(ಟಿ) 80ನೇ ಪ್ರಕರಣದ(1)ನೆಯ ಉಪಪ್ರಕರಣದ ಮೇರೆಗೆ ಅರ್ಜಿಗಳಿಗಾಗಿ ಮತ್ತು ನೋಂದಣಿಗಳಿಗಾಗಿ ಮತ್ತು ಇತರೆ ವಿಷಯಗಳಿಗಾಗಿ ಸಂದಾಯ ಮಾಡಬೇಕಾದ ಫೀಜು ಮತ್ತು ಅಧಿಭಾರ;

(ಯು) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುವೇ ಇತರೆ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

* * *